f prajavani.net prajavani | ಸೋಮವಾರ, ನವೆಂಬರ್ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 324 | ಪುಟ 12 | www.prajavani.net

**ಲಕ್ಷ್ಯಗೆ ಆಸ್ಟ್ರೇಲಿಯಾ ಓಪನ್ ಪ್ರಶಸ್ತಿ**



ಭಾರತದ ಲಕ್ಷ್ಯ ಸೇನ್ ಅವರು ಭಾನುವಾರ ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಜಯಿಸಿದರು


# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ


**ಸ್ವಾಮಿಯೇ ಶರಣಂ ಅಯ್ಯಪ್ಪ...**



ಕೇರಳದ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮಾಲಾಧಾರಿ ಮಗುವೊಂದು ಪಾಲಕರ ಹೆಗಲೇರಿ ದರ್ಶನಕ್ಕೆ ಸಾಗಿತು

ಬಾಂಗ್ಲಾಕ್ಕೆ ಮರಳುತ್ತಿರುವ 'ಅಕ್ರಮ' ವಲಸಿಗರು 9 | ವಿಯೆಟ್ನಾಂನಲ್ಲಿ ಪ್ರವಾಹ: 90 ಜನ ಸಾವು 8

# 'ಹೈಕಮಾಂಡ್'ನತ್ತ 'ಕೈ' ಬಿಕ್ಕಟ್ಟು

## ಮತ್ತೆ ದಲಿತ ಸಿ.ಎಂ ಕೂಗು
## ಹಕ್ಕು ಪ್ರತಿಪಾದಿಸಿದ ಪರಮೇಶ್ವರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರಕ್ಕೆ ಎರಡೂವರೆ ವರ್ಷ ತುಂಬುತ್ತಿದ್ದಂತೆಯೇ ಮುನ್ನೆಲೆಗೆ ಬಂದಿರುವ ಅಧಿಕಾರ ಹಂಚಿಕೆ, ಸಂಪುಟ ಪುನರ್‌ರಚನೆ ಗೊಂದಲ, ಮತ್ತೆ ಕಾಂಗ್ರೆಸ್ ಹೈಕಮಾಂಡ್ ಅಂಗಳ ತಲುಪಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ ಈ ವಿಚಾರದಲ್ಲಿ ತಂತ್ರ–ಪ್ರತಿತಂತ್ರ ಹೂಡಿರುವ ಪರಿಣಾಮ ಬಿಕ್ಕಟ್ಟು ಮತ್ತಷ್ಟು ಹೆಚ್ಚಾಗಿದ್ದು, 'ಕೈ' ವರಿಷ್ಠರು ಮಧ್ಯಪ್ರವೇಶಿಸುವ ಅನಿವಾರ್ಯ ಸ್ಥಿತಿ ಸೃಷ್ಟಿಯಾಗಿದೆ.

ಸದಾಶಿವನಗರದಲ್ಲಿರುವ ತಮ್ಮ ನಿವಾಸದ ಬಳಿ ಭಾನುವಾರ ಪ್ರತಿಕ್ರಿಯಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಏನೇ ಇದ್ದರೂ ಹೈಕಮಾಂಡ್ ನೋಡಿಕೊಳ್ಳುತ್ತದೆ' ಎಂದಿದ್ದಾರೆ. ಆ ಮೂಲಕ, ಈ ವಿಚಾರದಲ್ಲಿ ಪಕ್ಷ ಶೀಘ್ರದಲ್ಲಿ ನಿರ್ಧಾರ ತೆಗೆದುಕೊಳ್ಳುವ ಸುಳಿವು ನೀಡಿದ್ದಾರೆ. ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಕುರಿತು ಹಲವು ದಿನಗಳಿಂದ ತೀವ್ರವಾಗಿ ಚರ್ಚೆ ಆಗುತ್ತಿದ್ದರೂ ಮೌನ ವಹಿಸಿದ್ದ ಖರ್ಗೆ, ಮೊದಲ ಬಾರಿ ಪ್ರತಿಕ್ರಿಯಿಸಿದ್ದಾರೆ.

'ನಿಮಗೆ (ಮಾಧ್ಯಮಗಳು) ಹೇಳಲು ನನ್ನ ಬಳಿ ಏನೂ ಇಲ್ಲ. ಯಾವ ವಿಷಯವೂ ಇಲ್ಲದೆ ನಾನು ಏನಾದರೂ ಹೇಳಿದರೆ ಚೆನ್ನಾಗಿರುವುದಿಲ್ಲ. ಇಲ್ಲಿ ನಡೆದ ವಿದ್ಯಮಾನಗಳ ಬಗ್ಗೆಯೂ ಹೇಳುವಂಥದ್ದು ಇಲ್ಲ. ಏನಿದ್ದರೂ ಹೈಕಮಾಂಡ್ ನಿರ್ಧಾರ ಮಾಡುತ್ತದೆ' ಎಂದು ಖರ್ಗೆ ಹೇಳಿದರು.

ಈ ಬೆಳವಣಿಗೆಗಳ ಮಧ್ಯೆ, ದಲಿತ ಮುಖ್ಯಮಂತ್ರಿ ವಿಚಾರ ಮತ್ತೊಮ್ಮೆ ಮುಂಚೂಣಿಗೆ ಬಂದಿದೆ. ಸಚಿವ ಜಿ. ಪರಮೇಶ್ವರ ಅವರು ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷೆಯನ್ನು ಪರೋಕ್ಷವಾಗಿ ಹೊರಹಾಕುವ ಮೂಲಕ ರಾಜಕೀಯ ವಲಯದಲ್ಲಿ ಹೊಸ ಸಂಚಲನ ಮೂಡಿಸಿದ್ದಾರೆ. ಅವರ ಬಯಕೆಗೆ ದನಿಗೂಡಿಸಿರುವ ಸಚಿವ ಸತೀಶ ಜಾರಕಿಹೊಳಿ, 'ಸರ್ಕಾರ ರಚನೆ ಮಾಡುವಷ್ಟು ಪಕ್ಷವನ್ನು ಸಿದ್ಧಪಡಿಸಿದವರಲ್ಲಿ ಪರಮೇಶ್ವರ ಅವರೂ ಒಬ್ಬರು. ಅವರಿಗೂ ಸಮಾನ ಅವಕಾಶ ಸಿಗಬೇಕು ಎಂಬುದು ನನ್ನ ಒತ್ತಾಸೆ' ಎಂದಿದ್ದಾರೆ.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವಿದೇಶ ಪ್ರವಾಸದಿಂದ ಹಿಂದಿರುಗಿದ ಬಳಿಕ ಅವರ ಜೊತೆ ಖರ್ಗೆ ಮಾತುಕತೆ ನಡೆಸುವ ಸಾಧ್ಯತೆಯಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ರಾತ್ರಿ ಖರ್ಗೆಯವರ ನಿವಾಸಕ್ಕೆ ತೆರಳಿ ಸುಮಾರು ಒಂದೂವರೆ ತಾಸು ಚರ್ಚೆ ನಡೆಸಿದ್ದರು. ಪಕ್ಷ ಮತ್ತು ಸರ್ಕಾರದಲ್ಲಿ ನಡೆಯುತ್ತಿರುವ ಆಂತರಿಕ ವಿದ್ಯಮಾನಗಳ ಕುರಿತು ಉಭಯ ನಾಯಕರು ವಿಚಾರ ವಿನಿಮಯ ಮಾಡಿಕೊಂಡಿದ್ದಾರೆ.

5

### ನಾನೂ ರೇಸ್‌ನಲ್ಲಿದ್ದೇನೆ: ಪರಮೇಶ್ವರ



'ನಾನು ಯಾವಾಗಲೂ ಮುಖ್ಯಮಂತ್ರಿ ಹುದ್ದೆಯ ರೇಸ್‌ನಲ್ಲಿ ಇದ್ದೇ ಇರುತ್ತೇನೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, '2013ರಲ್ಲಿ ಕೆಪಿಸಿಸಿ ಅಧ್ಯಕ್ಷನಾಗಿದ್ದೆ. ಆಗಲೂ ನಾನು ಮುಖ್ಯಮಂತ್ರಿ ಹುದ್ದೆಯ ರೇಸ್‌ನಲ್ಲಿದ್ದೆ, ಯಾವತ್ತಿಗೂ ಇರುತ್ತೇನೆ' ಎಂದರು. '2013ರಲ್ಲಿ ಎಲ್ಲರ ಶ್ರಮದಿಂದ ಪಕ್ಷ ಅಧಿಕಾರಕ್ಕೆ ಬಂತು. ಅಧ್ಯಕ್ಷ ಆದವರಿಗೆ ಒಂದು ಅವಕಾಶ ಸಿಗುತ್ತಿತ್ತು. ಆದರೆ ಕೆಲವೊಮ್ಮೆ ಅದು ಸಾಧ್ಯವಾಗುವುದಿಲ್ಲ. ನಾನು ಆ ಚುನಾವಣೆ ಯಲ್ಲಿ ಸೋತಿದ್ದೆ. ನಾನು ಗೆದ್ದಿದ್ದರೆ ಏನಾಗುತ್ತಿತ್ತೋ ಅದು ಗೊತ್ತಿಲ್ಲ. ದಲಿತ ಮುಖ್ಯಮಂತ್ರಿ ಪ್ರಶ್ನೆ ಯಾವತ್ತಿಗೂ ಇದ್ದೇ ಇರುತ್ತದೆ. ಇದು ಹೊಸ ವಿಚಾರವಲ್ಲ. ನಾವು ಕೆಲವು ಸಚಿವರು ಒಟ್ಟಿಗೆ ಸೇರಿ ಊಟ ಮಾಡಿದಾಕ್ಷಣ ಇದೆಲ್ಲವೂ ಈಡೇರುತ್ತದೆಯೇ? ನಾವು ಊಟಕ್ಕೆ ಸೇರಿದಾಗ ರಾಜಕೀಯವನ್ನೂ ಮಾತನಾಡಿರುತ್ತೇವೆ. ರಾಜಕಾರಣಿಗಳಿಗೆ ಅದು ಸಹಜ' ಎಂದರು.

5

### 'ಒಬ್ಬರಿಂದಾಗಿಯೇ ಅಧಿಕಾರಕ್ಕೆ ಬಂದಿಲ್ಲ'




ಬೆಳಗಾವಿ: 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಾಮಾನ್ಯ ಕಾರ್ಯಕರ್ತರಿಂದ ಹಿಡಿದು ಹಿರಿಯ ನಾಯಕರವರೆಗೆ ಎಲ್ಲರ ಶ್ರಮವೂ ಇದೆ. ಯಾರೊ ಒಬ್ಬರ ಶ್ರಮ ಕಾರಣವಲ್ಲ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಯಾರಾದರೂ ತನ್ನಿಂದಲೇ ಸರ್ಕಾರ ರಚನೆ ಆಗಿದೆ ಎಂದರೆ ಅದನ್ನು ನಾನು ಒಪ್ಪುವುದಿಲ್ಲ. ಅದುನ್ಯಾಯವೂ ಅಲ್ಲ. ಪಕ್ಷ ಅಧಿಕಾರಕ್ಕೆ ತರಲು ಎಲ್ಲರೂ ಕಷ್ಟ, ನಷ್ಟ ಅನುಭವಿಸಿದ್ದಾರೆ. ಯಾರೋ ಇಬ್ಬರು ಇದರ 'ಕ್ರೆಡಿಟ್' ತೆಗೆದುಕೊಳ್ಳಲಾಗದು' ಎಂದು ಪರೋಕ್ಷವಾಗಿ ಡಿ.ಕೆ.ಶಿವಕುಮಾರ್ ಅವರನ್ನು ಟೀಕಿಸಿದರು.

5

### ಪರಮೇಶ್ವರ ಸಿ.ಎಂ ಆಗಲಿ: ಅಬ್ಬಯ್ಯ



ಹುಬ್ಬಳ್ಳಿ: 'ರಾಜ್ಯದಲ್ಲಿ ದಲಿತ ಸಮುದಾಯದವರು ಮುಖ್ಯಮಂತ್ರಿ ಆಗಬೇಕು ಎನ್ನುವ ಕೂಗು ಮೊದಲಿನಿಂದಲೂ ಇದೆ. ಸಿ.ಎಂ ಬದಲಾವಣೆಯಾದರೆ ಜಿ. ಪರಮೇಶ್ವರ ಮುಂದಿನ ಮುಖ್ಯಮಂತ್ರಿ ಆಗಲಿ' ಎಂದು ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು 'ಸಚಿವ ಸಂಪುಟ ಪುನರ್‌ರಚನೆಯಾದರೆ ನಾನೂ ಸಚಿವ ಸ್ಥಾನದ ಆಕಾಂಕ್ಷಿ' ಎಂದರು.

5

**ಚಿನಕುರುಳಿ** ಪ್ರಕಾಶ್ ಶೆಟ್ಟಿ






## ಭಾರತ 'ಕಣ್ಮಣಿ'ಗಳಿಗೆ ವಿಶ್ವ ಕಿರೀಟ

ಕೊಲಂಬೊ (ಪಿಟಿಐ): ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡವು ಭಾನುವಾರ ಚೊಚ್ಚಲ ಟಿ20 ವಿಶ್ವಕಪ್ ಜಯಿಸಿತು.

**ಫೈನಲ್ ಸ್ಕೋರ್**

ನೇಪಾಳ 5ಕ್ಕೆ 114 (20 ಓವರ್‌ಗಳಲ್ಲಿ)

ಭಾರತ 3ಕ್ಕೆ 117 (12 ಓವರ್‌ಗಳಲ್ಲಿ)

**ಫಲಿತಾಂಶ:** ಭಾರತ ತಂಡಕ್ಕೆ 7 ವಿಕೆಟ್‌ಗಳ ಜಯ.



**ಪ್ರಮುಖ ಅಂಶಗಳು**

- ಇದೇ ಮೊದಲ ಬಾರಿಗೆ ನಡೆದ ಅಂಧ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್
- ಸ್ಪರ್ಧಾಕಣದಲ್ಲಿದ್ದ ಭಾರತ, ಆಸ್ಟ್ರೇಲಿಯಾ, ಶ್ರೀಲಂಕಾ, ಪಾಕಿಸ್ತಾನ, ನೇಪಾಳ ಮತ್ತು ಅಮೆರಿಕ ತಂಡಗಳು
- ಭಾರತ ತಂಡಕ್ಕೆ ತುಮಕೂರು ಜಿಲ್ಲೆಯ ದೀಪಿಕಾ ಟಿ.ಸಿ. ನಾಯಕತ್ವ

10

### ಸಿಜೆಐ ಆಗಿ ನ್ಯಾ. ಸೂರ್ಯ ಕಾಂತ್ ಇಂದು ಪ್ರಮಾಣ



ನ್ಯಾಯಮೂರ್ತಿ ಸೂರ್ಯ ಕಾಂತ್

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಸುಪ್ರೀಂ ಕೋರ್ಟ್‌ನ 53ನೇ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ಸೋಮವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಹಾಲಿ ಸಿಜೆಐ ಬಿ.ಆರ್. ಗವಾಯಿ ಅವರು ಭಾನುವಾರ ನಿವೃತ್ತರಾದರು. ಸೂರ್ಯ ಕಾಂತ್ ಅವರನ್ನು ಮುಂದಿನ ಸಿಜೆಐ ಆಗಿ, ಅ.30 ರಂದು ನೇಮಕ ಮಾಡಲಾಯಿತು. 15 ತಿಂಗಳು ಈ ಹುದ್ದೆಯಲ್ಲಿರುವ ಇವರು, 65 ವರ್ಷ ವಯಸ್ಸು ತಲುಪಿದ ಬಳಿಕ 2027ರ ಫೆ.9ರಂದು ನಿವೃತ್ತರಾಗಲಿದ್ದಾರೆ.

9

## ಆಡಳಿತಾಧಿಕಾರಿ: ಪಂಜಾಬ್ ವಿರೋಧ

ಚಂಡೀಗಢ (ಪಿಟಿಐ): ಕೇಂದ್ರಾಡಳಿತ ಪ್ರದೇಶವಾಗಿರುವ ಚಂಡೀಗಢವನ್ನು ಸಂವಿಧಾನದ 240ನೇ ವಿಧಿಯಡಿ ಸೇರಿಸಿ, ಅಲ್ಲಿಗೆ ರಾಷ್ಟ್ರಪತಿಯವರ ಮೂಲಕ ಪ್ರತ್ಯೇಕ ಆಡಳಿತಾಧಿಕಾರಿಯನ್ನು ನೇಮಿಸುವ ಮಸೂದೆ ಜಾರಿಗೆ ತರುವ ಎನ್‌ಡಿಎ ಪ್ರಸ್ತಾವಕ್ಕೆ ಆಡಳಿತಾರೂಢ ಎಎಪಿ, ಕಾಂಗ್ರೆಸ್, ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ತೀವ್ರ ವಿರೋಧ ವ್ಯಕ್ತಪಡಿಸಿವೆ.

ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಿಗೆ ಚಂಡೀಗಢ ರಾಜಧಾನಿಯಾಗಿದೆ. 'ಪಂಜಾಬ್‌ನ ಅವಿಭಾಜ್ಯ ಅಂಗವಾದ ಚಂಡೀಗಢವನ್ನು ಕಿತ್ತು ಕೊಳ್ಳಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ' ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

8



> **ಪಂಜಾಬ್‌ನ ಅವಿಭಾಜ್ಯ ಅಂಗವಾದ ಚಂಡೀಗಢವನ್ನು ಕಿತ್ತುಕೊಳ್ಳಲು ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ನಡೆಸುವ ಯಾವುದೇ ಪಿತೂರಿ ಯಶಸ್ವಿಯಾಗಲು ನಮ್ಮ ಸರ್ಕಾರ ಅವಕಾಶ ಕೊಡುವುದಿಲ್ಲ**
>
> **ಭಗವಂತ್ ಮಾನ್,** ಪಂಜಾಬ್ ಮುಖ್ಯಮಂತ್ರಿ ('ಎಕ್ಸ್' ಪೋಸ್ಟ್‌ನಲ್ಲಿ)

### 'ಮಸೂದೆ ಮಂಡಿಸುವ ಉದ್ದೇಶವಿಲ್ಲ'

ನವದೆಹಲಿ (ಪಿಟಿಐ): ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಚಂಡೀಗಢಕ್ಕೆ ಸಂಬಂಧಿಸಿದ ಪ್ರಸ್ತಾವಿತ ಮಸೂದೆಯನ್ನು ಮಂಡಿಸುವ ಯಾವುದೇ ಉದ್ದೇಶವಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

ಚಂಡೀಗಢ–ಪಂಜಾಬ್ ಮತ್ತು ಹರಿಯಾಣದ ನಡುವಿನ ಸಾಂಪ್ರದಾಯಿಕ ವ್ಯವಸ್ಥೆಗಳನ್ನು ಬದಲಿಸುವ ಯಾವುದೇ ಉದ್ದೇಶವನ್ನು ಈ ಪ್ರಸ್ತಾವ ಹೊಂದಿಲ್ಲ ಎಂದೂ ಸಚಿವಾಲಯ ಸ್ಪಷ್ಟಪಡಿಸಿದೆ.

8

**ಆರಂಭಿಕ ಹಂತದಲ್ಲಿ ತಪಾಸಣೆ ನಡೆಸಿ ಎಚ್ಚರಿಕೆ • ಎಚ್ಚೆತ್ತುಕೊಳ್ಳದಿದ್ದರೆ ಕಾನೂನು ಕ್ರಮ**

## ಸುರಕ್ಷತೆ ಇಲ್ಲದ ಹೊರ ರಾಜ್ಯ ಬಸ್‌ಗಿಲ್ಲ ಪ್ರವೇಶ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಆಂಧ್ರಪ್ರದೇಶದ ಕರ್ನೂಲ್ ಬಳಿ ಬಸ್ ಬೆಂಕಿಗೆ ಆಹುತಿಯಾದ ಘಟನೆಯ ಬಳಿಕ ಬಸ್‌ಗಳಲ್ಲಿ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ತುರ್ತು ನಿರ್ಗಮನ ಬಾಗಿಲು ಇಲ್ಲದ ಹೊರ ರಾಜ್ಯಗಳ ಬಸ್‌ಗಳ ಮೇಲೆ ಕ್ರಮ ಕೈಗೊಳ್ಳಲು ಸಾರಿಗೆ ಇಲಾಖೆ ಚಿಂತನೆ ನಡೆಸಿದೆ.

ಅಖಿಲ ಭಾರತ ಪರವಾನಗಿ ಹೊಂದಿರುವ ಬಸ್‌ಗಳು ದೇಶದ ವಿವಿಧೆಡೆಯಿಂದ ರಾಜ್ಯಕ್ಕೆ ಬರುತ್ತಿವೆ. ಅವುಗಳಲ್ಲಿ ಪ್ರಯಾಣಿಕರ ಸುರಕ್ಷತಾ ಕ್ರಮಗಳಿರುವುದಿಲ್ಲ. ಕರ್ನಾಟಕದಲ್ಲಿ ಇರುವ ಸುರಕ್ಷತಾ ನಿಯಮಗಳನ್ನು ಆ ಬಸ್‌ಗಳಲ್ಲಿಯೂ ಅಳವಡಿಸಬೇಕು. ಏಕಾಏಕಿ ಕ್ರಮ ಕೈಗೊಳ್ಳುವ ಬದಲು ಆರಂಭಿಕ ಹಂತದಲ್ಲಿ ತಪಾಸಣೆ ನಡೆಸಿ ಅವರಿಗೆ ಸುರಕ್ಷತಾ ಕ್ರಮ ಅಳವಡಿಸಲು ಸೂಚಿಸಬೇಕು. ನಿಗದಿತ ಸಮಯದ ಒಳಗೆ ಅಳವಡಿಸದೇ ಇದ್ದರೆ ದಂಡ ವಿಧಿಸುವುದಾಗಿ ಎಚ್ಚರಿಕೆ ನೀಡಬೇಕು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತಾ ಇಲಾಖೆ ನಿರ್ಧರಿಸಿದೆ.

ತಪಾಸಣೆ ನಡೆಸಿ ಎಚ್ಚರಿಕೆ ನೀಡಿದ ಬಳಿಕವೂ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳದ ಬಸ್‌ಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸುವುದು, ಪರವಾನಗಿಯನ್ನು ಅಮಾನತು ಮಾಡುವುದು, ಸಂಬಂಧಪಟ್ಟ ಮೂಲ ನೋಂದಣಿ ಪ್ರಾಧಿಕಾರಕ್ಕೆ ಪತ್ರ ಬರೆದು ಕ್ರಮ ವಹಿಸಲು ತಿಳಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಇಲಾಖೆ ಅಧಿಕಾರಿಯೊಬ್ಬರು ಹೇಳಿದರು. 'ರಾಜ್ಯದಲ್ಲಿ ಸಾರ್ವಜನಿಕ ಸೇವಾ ವಾಹನಗಳಲ್ಲಿ ತುರ್ತು ನಿರ್ಗಮನ ದ್ವಾರಗಳಿರುವುದನ್ನು ಖಚಿತಪಡಿಸಿಕೊಂಡ ನಂತರವೇ ವಾಹನ ನೋಂದಣಿ ಮತ್ತು ಅರ್ಹತಾ ಪತ್ರವನ್ನು ನವೀಕರಿಸಲು ಕ್ರಮ ಕೈಗೊಳ್ಳಲಾಗಿದೆ. ಇದೇ ನಿಯಮ ಹೊರ ರಾಜ್ಯಗಳ ಬಸ್‌ಗಳಿಗೂ ಅನ್ವಯವಾಗಬೇಕು. ಯಾಕೆಂದರೆ ಆ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೂ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ತಿಳಿಸಿದ್ದಾರೆ. 'ಬೇರೆ ರಾಜ್ಯದ ವಾಹನಗಳಿರಬಹುದು. ಆದರೆ, ರಾಜ್ಯಕ್ಕೆ ಬರುವಾಗ ಸುರಕ್ಷಿತವಾಗಿರಬೇಕು. ಇತ್ತೀಚೆಗೆ ಕರ್ನೂಲ್‌ನಲ್ಲಿ ಬೆಂಕಿಗಾಹುತಿಯಾದ ಬಸ್ ಕೂಡ ಹೈದರಾಬಾದ್‌ನಿಂದ ಬೆಂಗಳೂರಿಗೆ ಬರುತ್ತಿತ್ತು' ಎಂದರು.

5




ಹೊರರಾಜ್ಯದ ಬಸ್‌ಗಳನ್ನು ಪರಿಶೀಲಿಸಿದ ಸಾರಿಗೆ ಅಧಿಕಾರಿಗಳು

### 'ರಾಜ್ಯಕ್ಕೆ ಬರುವಾಗ ಸರಿ ಇರಬೇಕು'



ರಾಮಲಿಂಗಾರೆಡ್ಡಿ

'ಯಾವುದೇ ವಿಚಾರದಲ್ಲಿ ತಕ್ಷಣಕ್ಕೆ ಕ್ರಮ ಕೈಗೊಳ್ಳುವುದು ಸರಿಯಲ್ಲ. ಅದಕ್ಕಾಗಿ ಮೊದಲು ಸಮಯ ನೀಡಿ ಆಮೇಲೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಬೇರೆ ರಾಜ್ಯಗಳಲ್ಲಿ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸದೇ ವಾಹನ ಸದೃಢ ಪ್ರಮಾಣಪತ್ರ (ಎಫ್‌ಸಿ) ನೀಡಿರಬಹುದು. ನಮ್ಮ ರಾಜ್ಯಕ್ಕೆ ಬರುವಾಗ ಎಲ್ಲವೂ ಸರಿ ಇರಬೇಕು. ಇಲ್ಲದೇ ಇದ್ದರೇ ರಾಜ್ಯಕ್ಕೆ ಪ್ರವೇಶಿಸಬಾರದು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

## ಅಂತರರಾಷ್ಟ್ರೀಯ ದತ್ತು ಮಾಸ ಆಚರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆನರಾ ಬ್ಯಾಂಕ್ ರಿಲೀಫ್ ಅಂಡ್ ವೆಲ್‌ಫೇರ್ ಸೊಸೈಟಿ ಮತ್ತು ಮಾತೃಛಾಯ ಸಂಸ್ಥೆಯ ವತಿಯಿಂದ ನಗರದಲ್ಲಿ 'ಅಂತರ ರಾಷ್ಟ್ರೀಯ ದತ್ತು ಮಾಸ'ವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಮಕ್ಕಳ ನಿರ್ದೇಶನಾಲಯದ ಉಪನಿರ್ದೇಶಕಿ ಟಿ.ಎಸ್. ಅರುಂಧತಿ, ಬೆಂಗಳೂರು ದಕ್ಷಿಣ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಚ್.ಕೆ. ಆಶಾ ಮತ್ತು ಆಪ್ತ ಸಮಾಲೋಚಕಿ ರೇಣು ಶ್ರೀನಿವಾಸ್ ಭಾಗವಹಿಸಿದ್ದರು. ದತ್ತು ಪ್ರಕ್ರಿಯೆಯ ಮಹತ್ವ, ಕಾನೂನಾತ್ಮಕ ವಿಧಾನಗಳು ಮತ್ತು ಪೋಷಕರಾಗಿ ನಿರ್ವಹಿಸಬೇಕಾದ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಲಾಯಿತು.

ಸಂಸ್ಥೆಯ ಗೌರವ ಕಾರ್ಯದರ್ಶಿ ಡಿ.ಎಸ್. ಆನಂದಮೂರ್ತಿ, ಮಹಾಪ್ರಬಂಧಕ ಕೆ.ಎಸ್.ಎಸ್. ಕಾಮತ್, ಹಿರಿಯ ಪ್ರಬಂಧಕಿ ಸುಮಂಗಲಾ ಜಿ. ಅಂಗಡಿ ಉಪಸ್ಥಿತರಿದ್ದರು. 50ಕ್ಕೂ ಹೆಚ್ಚು ದತ್ತು ಪೋಷಕರು ಮತ್ತು ಸಂಭಾವನೀಯ ದತ್ತು ಪೋಷಕರು ಚರ್ಚೆಯಲ್ಲಿ ಭಾಗವಹಿಸಿದ್ದರು.

# ಮನೆ ಬಾಗಿಲಲ್ಲೇ ಉಪಶಮನ ಆರೈಕೆ

## ಕ್ಯಾನ್ಸರ್ ಪೀಡಿತರಿಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಿಂದ ವ್ಯವಸ್ಥೆ

• ವರುಣ ಹೆಗಡೆ





**ಬೆಂಗಳೂರು:** ನಗರದ ಕ್ಯಾನ್ಸರ್ ಪೀಡಿತರಿಗೆ ಮನೆ ಬಾಗಿಲಲ್ಲೇ ಉಪಶಮನ ಆರೈಕೆ (ಪ್ಯಾಲಿಯೇಟಿವ್ ಕೇರ್) ಸೇವೆ ಒದಗಿಸಲು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಮುಂದಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರಲು ಸಾಧ್ಯವಾಗದವರಿಗೆ ಈ ವ್ಯವಸ್ಥೆ ಸಹಕಾರಿಯಾಗಲಿದೆ.

ಗೃಹ ಆಧಾರಿತ ಈ ಆರೈಕೆ ಸೌಲಭ್ಯಕ್ಕೆ ಸಂಸ್ಥೆಯು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್‌ಆರ್) ಬಳಕೆ ಮಾಡಿಕೊಳ್ಳಲು ಮುಂದಾಗಿದೆ. ತಜ್ಞ ವೈದ್ಯರನ್ನು ಒಳಗೊಂಡ ತಂಡವು ಕ್ಯಾನ್ಸರ್ ಪೀಡಿತರಿಗೆ ಮನೆಯಲ್ಲಿಯೇ ಅಗತ್ಯ ವೈದ್ಯಕೀಯ ಆರೈಕೆ ಒದಗಿಸಲಿದ್ದು, ರೋಗಿಯ ಜೀವನದ ಗುಣಮಟ್ಟ ಸುಧಾರಿಸಲು ಈ ವಿಶೇಷ ವೈದ್ಯಕೀಯ ಚಿಕಿತ್ಸೆ ನೆರವಾಗಲಿದೆ. ನೋವು ಮತ್ತು ರೋಗ ಲಕ್ಷಣಗಳನ್ನು ನಿರ್ವಹಿಸಲು, ದೈಹಿಕ ಹಾಗೂ ಮಾನಸಿಕ ಒತ್ತಡ ಕಡಿಮೆ ಮಾಡಲು ಈ ಆರೈಕೆ ಸಹಕಾರಿಯಾಗಲಿದೆ. ಈ ಆರೈಕೆಯು ಶೀಘ್ರದಲ್ಲಿಯೇ ಪ್ರಾರಂಭಿಸಲು ಸಂಸ್ಥೆ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದೆ. ಈ ಸೇವೆಯಿಂದ ಹಾಸಿಗೆ ಹಿಡಿದ ಕ್ಯಾನ್ಸರ್ ಪೀಡಿತರನ್ನು ಸಂಸ್ಥೆಗೆ ಕರೆತರುವುದು ತಪ್ಪುವುದರ ಜತೆಗೆ, ಸಂಸ್ಥೆಯಲ್ಲಿ ರೋಗಿಗಳ ದಟ್ಟಣೆ ನಿವಾರಣೆಯೂ ಸಾಧ್ಯವಾಗಲಿದೆ.

> ರೋಗಿ ಕೇಂದ್ರೀಕೃತ ಆರೈಕೆಯನ್ನು ಗೃಹ ಮಟ್ಟಕ್ಕೆ ವಿಸ್ತರಿಸುವ ಪ್ರಯತ್ನವಿದು. ಅನಗತ್ಯ ತುರ್ತು ದಾಖಲಾತಿ ತಪ್ಪಿಸುವ ಈ ಆರೈಕೆಯು ರೋಗಿ, ಅವರ ಕುಟುಂಬಕ್ಕೆ ಸಹಕಾರಿಯಾಗಲಿದೆ
> **ಡಾ.ಟಿ.ನವೀನ್**, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ

ವಿವಿಧ ಪ್ರಕಾರದ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ಹಾಗೂ ರೋಗ ಪತ್ತೆ ಸಂಬಂಧ ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಸಂಸ್ಥೆಗೆ ಭೇಟಿ ನೀಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ರೋಗಿಗಳು ಬರುತ್ತಾರೆ. ದಾಖಲಾತಿ ಹಾಗೂ ಚಿಕಿತ್ಸೆ ವಿಳಂಬವಾದಲ್ಲಿ ರೋಗ ಉಲ್ಬಣಗೊಳ್ಳುವ ಸಾಧ್ಯತೆ ಇರುತ್ತದೆ. ಮನೆ ಆಧಾರಿತ ಉಪಶಮನ ಆರೈಕೆಯಿಂದ ಆಸ್ಪತ್ರೆಯಲ್ಲಿ ದಾಖಲಾತಿಯೂ ಕಡಿಮೆಯಾಗಿ, ಒಳರೋಗಿಗಳಿಗೆ ಹಾಸಿಗೆಗಳು ಲಭ್ಯವಾಗಲಿವೆ.

**ಮೊಬೈಲ್ ವ್ಯಾನ್ ಬಳಕೆ:** ಉಪಶಮನ ಆರೈಕೆಗೆ ಸಂಸ್ಥೆಯು ಮೊಬೈಲ್ ವ್ಯಾನ್ ಬಳಸಿಕೊಳ್ಳಲು ಮುಂದಾಗಿದೆ. ಈ ವಾಹನದಲ್ಲಿ ಉಪಶಮನ ಆರೈಕೆಗೆ ಅಗತ್ಯವಿರುವ ತಜ್ಞ ವೈದ್ಯರೊಬ್ಬರು, ಶುಶ್ರೂಷಕರು ಹಾಗೂ ವೈದ್ಯಕೀಯ ಸಿಬ್ಬಂದಿ ಇರಲಿದ್ದಾರೆ. ಈ ತಂಡವು ರೋಗಿ ಹಾಗೂ ಕುಟುಂಬದ ಸದಸ್ಯರ ಜತೆಗೆ ಸಮಾಲೋಚನೆ ನಡೆಸಿ, ಅಗತ್ಯ ಉಪಶಮನ ಚಿಕಿತ್ಸೆ ಒದಗಿಸಲಿದೆ. ರೋಗದ ನಿರ್ವಹಣೆ ಬಗ್ಗೆ ಮಾರ್ಗದರ್ಶನವನ್ನೂ ನೀಡಲಿದೆ. ಸಿಎಸ್‌ಆರ್ ಅನುದಾನ, ವಿವಿಧ ಸರ್ಕಾರಿ ಯೋಜನೆಗಳ ಅಡಿ ಈ ಸೇವೆಯನ್ನು ಸಂಸ್ಥೆ ಉಚಿತವಾಗಿ ಒದಗಿಸಲು ನಿರ್ಧರಿಸಿದೆ.

'ಮನೆ ವಾತಾವರಣದಲ್ಲಿ ಚಿಕಿತ್ಸೆ ಪಡೆದಾಗ ರೋಗಿಯ ಆತಂಕ, ಭಯ, ನೋವು ಗಣನೀಯವಾಗಿ ಕಡಿಮೆ ಆಗುತ್ತದೆ. ಆರೈಕೆಯಲ್ಲಿ ಕುಟುಂಬದ ಸದಸ್ಯರೂ ಪಾಲ್ಗೊಳ್ಳುವುದರಿಂದ ರೋಗಿಗೆ ಚೇತರಿಕೆಯ ಭರವಸೆ ಮತ್ತು ಭದ್ರತೆಯ ಅನುಭವ ದೊರೆಯುತ್ತದೆ. ಆಸ್ಪತ್ರೆಯ ಅಲೆದಾಟದಿಂದ ರೋಗಿಯು ಇನ್ನಷ್ಟು ಬಳಲುವುದು ತಪ್ಪಲಿದೆ' ಎಂದು ಪ್ಯಾಲಿಯೇಟಿವ್ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಯದುರಾಜ್ ಎಂ.ಕೆ. ತಿಳಿಸಿದರು.

### 15 ಕಿ.ಮೀ. ವ್ಯಾಪ್ತಿಯಲ್ಲಿ ಸೇವೆ

ಸಂಸ್ಥೆಯು ಮೊದಲ ಹಂತದಲ್ಲಿ 15 ಕಿ.ಮೀ. ವ್ಯಾಪ್ತಿಯಲ್ಲಿ ಉಪಶಮನ ಆರೈಕೆ ಸೇವೆ ನೀಡಲು ಯೋಜನೆ ರೂಪಿಸಿದೆ. ಮುಂದಿನ ದಿನಗಳಲ್ಲಿ ಈ ಸೇವೆಯನ್ನು ವಿಸ್ತರಿಸಲಿದೆ. ಮನೆ ಭೇಟಿ ವೇಳೆ ರೋಗಿಗೆ ಅಗತ್ಯ ಚಿಕಿತ್ಸೆ ಒದಗಿಸುವ ಜತೆಗೆ, ಲಭ್ಯ ಔಷಧವನ್ನೂ ನೀಡಲಾಗುತ್ತದೆ. ಸಂಸ್ಥೆಯಲ್ಲಿ ಈ ಹಿಂದೆ ಚಿಕಿತ್ಸೆ ಪಡೆದವರಿಗೆ ಮಾತ್ರ ಈ ಸೇವೆ ಒದಗಿಸಲಾಗುತ್ತದೆ. ಉಪಶಮನ ಆರೈಕೆಗೆ ಒಳಗಾದವರಿಗೆ ಟೆಲಿ ಮೆಡಿಸಿನ್ ಸೇವೆಯ ಮೂಲಕ ಅಗತ್ಯ ಸಲಹೆ ಸೂಚನೆಗಳನ್ನೂ ನೀಡಲಾಗುತ್ತದೆ.

### ಅಂಕಿ ಅಂಶಗಳು

**874** ರೋಗಿಗಳ ಚಿಕಿತ್ಸೆಗೆ ಸಂಸ್ಥೆ ಹೊಂದಿರುವ ಬೆಡ್‌ಗಳು

**800-1,000** ನಿತ್ಯ ಭೇಟಿ ನೀಡುವ ಸರಾಸರಿ ಹೊರ ರೋಗಿಗಳು

## ಸುದ್ದಿ 2 ನಿಮಿಷ

### ಟಿಇಟಿ ಕಡ್ಡಾಯ ವಿರೋಧಿಸಿ ದೆಹಲಿಯಲ್ಲಿ ಪ್ರತಿಭಟನೆ ಇಂದು

**ಬೆಂಗಳೂರು:** ಹಾಲಿ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಟಿಇಟಿ ಅರ್ಹತೆ ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ ಅಖಿಲ ಭಾರತ ಪ್ರಾಥಮಿಕ ಶಾಲಾ ಶಿಕ್ಷಕರ ಫೆಡರೇಷನ್ ನ.24ರಂದು ದೆಹಲಿಯ ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

'ಸುಪ್ರೀಂ ಕೋರ್ಟ್ ತೀರ್ಪಿನಂತೆ ದೇಶದಲ್ಲಿನ 30 ಲಕ್ಷ ಶಿಕ್ಷಕರು ಎರಡು ವರ್ಷಗಳಲ್ಲಿ ಕಡ್ಡಾಯವಾಗಿ ಶಿಕ್ಷಕ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಇಲ್ಲದಿದ್ದರೆ ಶಿಕ್ಷಕ ವೃತ್ತಿಯಲ್ಲಿ ಮುಂದುವರಿಯಲು ಸಾಧ್ಯವಾಗದು. ಈ ಸಮಸ್ಯೆ ಬಗೆಹರಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಲು ದೇಶವ್ಯಾಪಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಹೇಳಿದ್ದಾರೆ.

'ಕರ್ನಾಟಕ ಸರ್ಕಾರ ಈಗಾಗಲೇ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ನಿರ್ಧರಿಸಿದೆ. ಪೂರಕ ಮಾಹಿತಿ ಸಂಗ್ರಹಿಸುತ್ತಿದೆ. ಶಿಕ್ಷಕರ ಫೆಡರೇಷನ್ ಸಹ ಸುಪ್ರೀಂ ಕೋರ್ಟ್‌ನಲ್ಲಿ ಈಗಾಗಲೇ ಮೇಲ್ಮನವಿ ಸಲ್ಲಿಸಿದೆ. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು. ವಿಶೇಷ ಕಾಯ್ದೆ ರೂಪಿಸಬೇಕು. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸಬೇಕು. ಸುಪ್ರೀಂ ಕೋರ್ಟ್‌ನ ಆದೇಶವನ್ನು ಪೂರ್ವಾನ್ವಯಗೊಳಿಸದಂತೆ ಸೂಚಿಸಬೇಕು ಎಂದು ಒತ್ತಾಯಿಸಲಾಗುತ್ತದೆ' ಎಂದರು.

ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು (ಟಿಇಟಿ) ಸೇವಾನಿರತ ಶಿಕ್ಷಕರಿಗೂ ಕಡ್ಡಾಯಗೊಳಿಸಿ ಈಚೆಗೆ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

### ನೀತಾ ಅಂಬಾನಿಗೆ 'ಜಾಗತಿಕ ಶಾಂತಿ ಗೌರವ'



**ಬೆಂಗಳೂರು:** ರಿಲಯನ್ಸ್ ಫೌಂಡೇಶನ್‌ನ ಅಧ್ಯಕ್ಷೆ ನೀತಾ ಅಂಬಾನಿ ಅವರನ್ನು 'ಜಾಗತಿಕ ಶಾಂತಿ ಗೌರವ' ಕಾರ್ಯಕ್ರಮದಲ್ಲಿ ಗೌರವಿಸಲಾಗಿದೆ ಎಂದು ರಿಲಯನ್ಸ್ ಫೌಂಡೇಷನ್‌ನ ಪ್ರಕಟಣೆ ತಿಳಿಸಿದೆ.

ಮುಂಬೈ ಮೇಲೆ ನಡೆದ ಭಯೋತ್ಪಾದಕರ ದಾಳಿಯ ಸ್ಮರಣಾರ್ಥ 'ಗೇಟ್ ವೇ ಆಫ್ ಇಂಡಿಯಾ'ದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಗೌರವ ಸ್ವೀಕರಿಸಿ ಮಾತನಾಡಿದ ನೀತಾ ಅವರು, 'ನನ್ನ ಸ್ಫೂರ್ತಿ ಭಾರತ ಮತ್ತು ಭಾರತೀಯರು. ಇಲ್ಲಿರುವ ಪ್ರೀತಿ, ಗೌರವ ಮತ್ತು ನಮ್ಮತನ ಬೇರೆಲ್ಲೂ ಇಲ್ಲ. ಸುಭದ್ರ, ಸುರಕ್ಷಿತ ನಾಳೆಗಾಗಿ ದೇಶಕ್ಕಾಗಿ ಬಲಿದಾನ ಮಾಡಿದವರು ಮತ್ತು ಅವರ ಕುಟುಂಬದವರಿಗೆ ನಾನು ನಮಿಸುತ್ತೇನೆ' ಎಂದು ಹೇಳಿದ್ದಾರೆ.

ಬಾಲಿವುಡ್ ನಟರಾದ ಶಾರೂಖ್ ಖಾನ್, ರಣವೀರ್ ಸಿಂಗ್, ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ, ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಪಾಲ್ಗೊಂಡಿದ್ದರು.

## ಫೋನ್ ಇನ್ ಕಾರ್ಯಕ್ರಮ ನಾಳೆ

**ಬೆಂಗಳೂರು:** ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ನಾಗರಿಕರ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸಲು ನ.25ರಂದು ಸಂಜೆ 6ರಿಂದ 7ರವರೆಗೆ ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಸಾರ್ವಜನಿಕರ ಕರೆಗಳಿಗೆ ಉತ್ತರಿಸಲಿದ್ದಾರೆ. ರಸ್ತೆ ಗುಂಡಿ, ರಸ್ತೆ ದುರಸ್ತಿ, ಬೀದಿ ದೀಪಗಳ ನಿರ್ವಹಣೆ, ಕಸ ವಿಲೇವಾರಿ, ಉದ್ಯಾನ ನಿರ್ವಹಣೆ, ಇ-ಖಾತಾ ವಿಷಯಗಳು, ಒತ್ತುವರಿ, ಚರಂಡಿ ಶುದ್ಧೀಕರಣ ಸಹಿತ ವಿವಿಧ ವಿಚಾರಗಳ ಬಗ್ಗೆ ಅಹವಾಲು ಸಲ್ಲಿಸಬಹುದು. ಕರೆ ಮಾಡಬೇಕಾದ ಸಂಖ್ಯೆ: 080-22975803.

### ಆರ್.ಎಂ.ಆರ್. ಹಳ್ಳಿಕಾರ ಫೌಂಡೇಷನ್ ಟ್ರಸ್ಟ್‌ನಿಂದ ಕಾರ್ಯಕ್ರಮ

# ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ



ಸಮಾರಂಭದಲ್ಲಿ ಸಂಶೋಧನಾ ವಿದ್ಯಾರ್ಥಿಗಳಾದ ಅನ್ನಪೂರ್ಣ ಕೆ, ಲಕ್ಷ್ಮಿ ಎಂ, ಕಾಂತರಾಜು ಎಚ್. ಅವರನ್ನು ಗೌರವಿಸಲಾಯಿತು. ಕೆ.ಎಂ. ನಾಗರಾಜ್, ಮಮತಾ ದೇವರಾಜ್, ಕರ್ನಾಟಕ ಹಳ್ಳಿಕಾರ ಜನಾಂಗದ ಅಧ್ಯಕ್ಷ ಮುನಿರಂಗಪ್ಪ, ನಸೀರ್ ಅಹಮದ್ ಮತ್ತು ಎಚ್.ಎಂ. ರೇವಣ್ಣ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

**ಬೆಂಗಳೂರು:** ಆರ್.ಎಂ.ಆರ್. ಹಳ್ಳಿಕಾರ ಫೌಂಡೇಷನ್ ಟ್ರಸ್ಟ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಹಳ್ಳಿಕಾರ ಸಮುದಾಯದ 91 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

2023–24 ಹಾಗೂ 2024–25 ಸಾಲಿನಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದ ಹಳ್ಳಿಕಾರ ಸಮುದಾಯದ ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ತಲಾ ₹10 ಸಾವಿರ ನಗದು, ಪಿಎಚ್.ಡಿ ಅಭ್ಯರ್ಥಿಗಳು ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಿಗೆ ತಲಾ ₹15 ಸಾವಿರ ನಗದು ನೀಡಿ ಪ್ರೋತ್ಸಾಹಿಸಲಾಯಿತು.

ಸಮಾರಂಭ ಉದ್ಘಾಟಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ರಾಜ್ಯದ ಎಂಟು ಜಿಲ್ಲೆಗಳಲ್ಲಿ ಹಳ್ಳಿಕಾರ ಸಮುದಾಯದವರಿದ್ದಾರೆ. ಅವರು ವ್ಯವಸಾಯವನ್ನು ನಂಬಿದ್ದು, ಹಿಂದುಳಿದ ವರ್ಗಕ್ಕೆ ಸೇರಿಸಲು ಟ್ರಸ್ಟ್‌ನ ಅಧ್ಯಕ್ಷರಾದ ನಾಗರಾಜ್ ಮತ್ತು ಸಮುದಾಯದ ಮುಖಂಡರು ಪ್ರಯತ್ನ ಮಾಡುತ್ತಿದ್ದಾರೆ. ಸಮುದಾಯದ ವಿದ್ಯಾರ್ಥಿಗಳು ಉತ್ತಮವಾಗಿ ವ್ಯಾಸಂಗ ಮಾಡಿ, ಸಮುದಾಯಕ್ಕೆ ಕೊಡುಗೆ ನೀಡಬೇಕು. ತಾವು ಬೆಳೆದುಬಂದ ಹಾದಿಯನ್ನು ಮರೆಯಬಾರದು' ಎಂದು ಅಭಿಪ್ರಾಯಪಟ್ಟರು.

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, 'ಯಾವುದೇ ಸಮುದಾಯ ಮುಂದೆ ಬರಬೇಕಾದರೆ ರಾಜಕೀಯ ಪ್ರಾತಿನಿಧ್ಯ ಕೂಡ ಮುಖ್ಯವಾಗುತ್ತದೆ. ಆದರೆ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಚುನಾವಣೆ ಎದುರಿಸಿ, ಗೆಲ್ಲುವುದು ಕಷ್ಟಸಾಧ್ಯ. ಗೆದ್ದರೂ ಐದು ವರ್ಷಗಳಿಗೊಮ್ಮೆ ಮತ ಭಿಕ್ಷೆಗೆ ಜನರ ಮುಂದೆ ಹೋಗಬೇಕಾಗುತ್ತದೆ. ಆದ್ದರಿಂದ ಸಮುದಾಯದ ವಿದ್ಯಾರ್ಥಿಗಳು ಉನ್ನತ ಅಧಿಕಾರಿಗಳಾಗುವ ಕಡೆಗೆ ಗಮನ ಹರಿಸಬೇಕು' ಎಂದು ಹೇಳಿದರು.

ಟ್ರಸ್ಟ್ ಅಧ್ಯಕ್ಷ ಕೆ.ಎಂ. ನಾಗರಾಜ್, 'ಸಮುದಾಯದ ವಿದ್ಯಾರ್ಥಿಗಳು ಜ್ಞಾನಾರ್ಜನೆಯಲ್ಲಿ ಉತ್ತಮ ಸಾಮರ್ಥ್ಯ ಹೊಂದಿದ್ದರೂ ಅಗತ್ಯ ಮಾರ್ಗದರ್ಶನ, ಪ್ರೋತ್ಸಾಹ ಮತ್ತು ಉತ್ತೇಜನ ದೊರೆಯದೆ ಮಂದಗತಿಯಲ್ಲಿ ಸಾಗುತ್ತಿದ್ದಾರೆ. ಪಾಲಕರಾದ ಮುನಿರಂಗಪ್ಪ ಮತ್ತು ರಂಗಮ್ಮ ಅವರ ಸ್ಮರಣಾರ್ಥ 2022ರಲ್ಲಿ ಸ್ಥಾಪಿಸಲಾದ ಈ ಟ್ರಸ್ಟ್ ಮೂಲಕ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಮುದಾಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಒದಗಿಸಲಾಗುತ್ತಿದೆ' ಎಂದರು.

ಇಂಧನ ಸಚಿವ ಕೆ.ಜೆ. ಜಾರ್ಜ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಪಾಲ್ಗೊಂಡಿದ್ದರು.

# 'ಪಿಂಚಣಿಯ ಷರತ್ತು ಸಡಿಲಿಸಲು ಕ್ರಮ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿವೃತ್ತ ಪತ್ರಕರ್ತರ ಪಿಂಚಣಿಯನ್ನು ₹15 ಸಾವಿರಕ್ಕೆ ಹೆಚ್ಚಿಸಿದ್ದಾರೆ. ಪಿಂಚಣಿ ಪಡೆಯಲು ಇರುವ ಷರತ್ತುಗಳನ್ನು ಸಡಿಲಗೊಳಿಸಲಾಗುವುದು ಎಂದು ಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಭರವಸೆ ನೀಡಿದರು.

ಭಾರತೀಯ ಹಿರಿಯ ಪತ್ರಕರ್ತರ ಒಕ್ಕೂಟ ಹಾಗೂ ಹಿರಿಯ ಪತ್ರಕರ್ತರ ವೇದಿಕೆ ಆಯೋಜಿಸಿದ್ದ 'ಹಿರಿಯ ಪತ್ರಕರ್ತರ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಕೇವಲ 240 ಮಂದಿ ನಿವೃತ್ತ ಪತ್ರಕರ್ತರಿಗೆ ಪಿಂಚಣಿ ಸಿಗುತ್ತಿದೆ. ನಿವೃತ್ತರಾದ ಎಲ್ಲ ಅರ್ಹ ಪತ್ರಕರ್ತರಿಗೆ ಪಿಂಚಣಿ ಸಿಗುವಂತೆ ಮಾಡಲು ಪ್ರಯತ್ನಿಸುತ್ತೇನೆ. ಮುಖ್ಯಮಂತ್ರಿಯವರ ಮಾಧ್ಯಮ ಸಂಜೀವಿನಿ ಯೋಜನೆಯನ್ನು ಹಿರಿಯ ಪತ್ರಕರ್ತರಿಗೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಊಹಾ ಪತ್ರಿಕೋದ್ಯಮ ಇಂದು ಆಳವಾಗಿ ತಲೆ ಎತ್ತಿದೆ. ಇದಕ್ಕೆ ಕಡಿವಾಣ ಹಾಕದಿದ್ದರೆ ಪತ್ರಿಕೋದ್ಯಮದ ವಿಶ್ವಾಸಾರ್ಹತೆ ಕುಸಿಯಲಿದೆ. ಅಭಿವೃದ್ಧಿ ಹಾಗೂ ತನಿಖಾ ಪತ್ರಿಕೋದ್ಯಮ ಸತ್ತು ಹೋಗಿದೆ. ಈ ಹಿಂದೆ ತನಿಖಾ ವರದಿಗಳಿಂದ ಸರ್ಕಾರಗಳು ಬಿದ್ದು ಹೋಗಿರುವ ಹಾಗೂ ಸಚಿವರು ರಾಜೀನಾಮೆ ನೀಡಿರುವ ಹಲವು ನಿದರ್ಶನಗಳಿವೆ. ಆದರೆ, ಈಗ ಅಭಿವೃದ್ಧಿ ಹಾಗೂ ತನಿಖಾ ಪತ್ರಿಕೋದ್ಯಮಕ್ಕೆ ಜಾಗವಿಲ್ಲ. ರಾಜಕೀಯ ನಾಯಕರ ಹೇಳಿಕೆ ಆಧಾರಿತ ಸುದ್ದಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ರಾಜಕೀಯ ವಿಶ್ಲೇಷಣೆಗಳು, ಸಿನಿಮಾ ನಟ, ನಟಿಯರ ಸುದ್ದಿಗಳು ಹೆಚ್ಚಾಗಿವೆ' ಎಂದು ತಿಳಿಸಿದರು.

ವೇದಿಕೆ ಅಧ್ಯಕ್ಷ ಆರ್.ಪಿ. ಸಾಂಬಸದಾಶಿವ ರೆಡ್ಡಿ, ಭಾರತೀಯ ಹಿರಿಯ ಪತ್ರಕರ್ತರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎನ್.ಪಿ. ಚೆಕ್ಕುಟ್ಟಿ, ಕರ್ನಾಟಕ ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಎಂ. ಸಿದ್ಧರಾಜು, ಆನಂದಮ್ ಪುಲಿಪಲುಪುಲ ಉಪಸ್ಥಿತರಿದ್ದರು.

# ಕಿತ್ತು ಹೋದ ಡಾಂಬರು ವಾಹನ ಸವಾರರಿಗೆ ಸವಾಲು

• ಸಿ.ಜಿ. ಮೋಹನ್‌ಕುಮಾರ್

**ದಾಬಸ್‌ಪೇಟೆ:** ರಾಮನಗರ– ಪಾವಗಡ ರಾಜ್ಯ ಹೆದ್ದಾರಿಯಲ್ಲಿ ಶಿವಗಂಗೆ ಶಾರದಾ ಕ್ರಾಸ್‌ನಿಂದ ಕಂಬಾಳು ಗ್ರಾಮದವರೆಗಿನ ಸುಮಾರು 3 ಕಿ.ಮೀ ಉದ್ದಕ್ಕೂ ಡಾಂಬರು ಹಲವೆಡೆ ಕಿತ್ತು ಹೋಗಿದೆ. ವಾಹನ ಚಲಾಯಿಸುವುದೇ ಸವಾಲಾಗಿದೆ.

ಮಳೆಗಾಲದಲ್ಲಿ ಮತ್ತು ರಾತ್ರಿ ಸಮಯದಲ್ಲಿ ರಸ್ತೆ ಕಿತ್ತುಹೋಗಿರುವುದು ಗೊತ್ತಾಗದೇ ಹಲವು ಬಾರಿ ದ್ವಿಚಕ್ರ ವಾಹನಗಳು ಬಿದ್ದು ಸವಾರರು ಗಾಯಗೊಂಡಿದ್ದಾರೆ.

ಡಾಂಬರು ರಸ್ತೆ ಹಾಳಾಗಿ ಹಲವು ತಿಂಗಳುಗಳೇ ಕಳೆದಿವೆ. ಈ ಸಂಬಂಧ ನೆಲಮಂಗಲ ತಾಲ್ಲೂಕು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ದೂರಿದ್ದಾರೆ.

ಶಿವಗಂಗೆಯಿಂದ ನೆಲಮಂಗಲ ತಾಲ್ಲೂಕಿನ ಗಡಿಭಾಗ ಮಾಕೇನಹಳ್ಳಿಯವರೆಗೆ ಈಗಿರುವ ದ್ವಿಪಥ ರಸ್ತೆಯನ್ನು ಚತುಷ್ಪಥ ರಸ್ತೆಯಾಗಿ ಮಾಡಲಾಗುತ್ತದೆ ಎಂದು ಅಧಿಕಾರಿಗಳು ಉತ್ತರಿಸುತ್ತಿದ್ದಾರೆ. ರಸ್ತೆ ಅಭಿವೃದ್ಧಿಯಾಗಲಿ. ಅಲ್ಲಿಯವರೆಗೆ ವಾಹನಗಳು ಅಪಘಾತ ಆಗುವುದನ್ನು ತಡೆಯಲು ರಸ್ತೆ ದುರಸ್ತಿ ಮಾಡಬೇಕು ಎಂದು ಸ್ಥಳೀಯ ನಿವಾಸಿ ಸಿದ್ದರಾಜು ಆಗ್ರಹಿಸಿದರು.



ರಾಮನಗರ–ಪಾವಗಡ ರಾಜ್ಯ ಹೆದ್ದಾರಿ ಡಾಂಬರು ಕಿತ್ತು ಹೋಗಿರುವುದು

ಶಿವಗಂಗೆ ಧಾರ್ಮಿಕ ಹಾಗೂ ಪ್ರವಾಸೋದ್ಯಮ ಸ್ಥಳವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಬರುತ್ತಾರೆ. ಅವರಿಗೆ ತೊಂದರೆಯಾಗುವುದನ್ನು ತಪ್ಪಿಸಲು ರಸ್ತೆ ಸರಿಪಡಿಸಬೇಕು ಎಂದು ಒತ್ತಾಯಿಸಿದರು.

## ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

### 'ಕೆಟ್ಟು ನಿಂತಿರುವ ಕಾರು ಸ್ಥಳಾಂತರಿಸಿ'



ನಗರದ ಬಳೇಪೇಟೆ ಕ್ರಾಸ್‌ನಲ್ಲಿ ತುಳಸಿ ತೋಟದ ತಿರುವಿನಲ್ಲಿ ಬಹಳ ದಿನಗಳಿಂದ ಕಾರೊಂದು ಕೆಟ್ಟು ನಿಂತಿದೆ. ಗುಜರಿಗೆ ಸೇರಬೇಕಾದ ಕಾರನ್ನು ಕಿರಿದಾದ ರಸ್ತೆಯಲ್ಲಿ ನಿಲ್ಲಿಸಲಾಗಿದೆ. ಇದರಿಂದ ಸಂಚಾರದಟ್ಟಣೆ ಆಗುತ್ತಿದ್ದು, ಕಾರಿನ ಸುತ್ತಮುತ್ತ ತ್ಯಾಜ್ಯ ಹರಡಿಕೊಂಡಿದ್ದು, ಸ್ವಚ್ಛಗೊಳಿಸಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಸಂಚಾರ ವಿಭಾಗದ ಪೊಲೀಸರಿಗೆ ದೂರು ನೀಡಲಾಗಿದೆ. ಆದರೂ ಕಾರನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಿಲ್ಲ. ಸುಗಮ ವಾಹನ ಸಂಚಾರಕ್ಕಾಗಿ ಈ ಕಾರನ್ನು ಕೂಡಲೇ ಅಲ್ಲಿಂದ ತೆಗೆಸಬೇಕು.

**ಶಿವಪ್ರಸಾದ್ ಎಸ್,** ಬಳೇಪೇಟೆ

### 'ಬೀದಿ ದೀಪ ಅಳವಡಿಸಿ'



ಹೊಯ್ಸಳನಗರದ ವಿಘ್ನೇಶ್ವರ ಬಡಾವಣೆಯ 18ನೇ ಕ್ರಾಸ್‌ನಲ್ಲಿ ಬೀದಿ ದೀಪಗಳೇ ಇಲ್ಲ. ರಾತ್ರಿ ವೇಳೆಯಲ್ಲಿ ಸಾರ್ವಜನಿಕರು ಭಯದಲ್ಲಿ ಓಡಾಡಬೇಕಾದ ಪರಿಸ್ಥಿತಿ ಇದೆ. ಇಲ್ಲಿ ಬೀದಿ ದೀಪಗಳನ್ನು ಅಳವಡಿಸಬೇಕು. ರಾತ್ರಿಯಾದರೆ ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಒಬ್ಬರೇ ಹೊರಗಡೆ ಹೋಗುವಂತಿಲ್ಲ. ಬೀದಿ ದೀಪಗಳನ್ನು ಅಳವಡಿಸುವಂತೆ ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಲಾಗಿದೆ. ಆದರೆ, ಇದುವರೆಗೆ ಯಾರೂ ಸ್ಪಂದಿಸಿಲ್ಲ.

**ಶ್ಯಾಮ್,** ವಿಘ್ನೇಶ್ವರ ಬಡಾವಣೆ

### 'ರಸ್ತೆಯಲ್ಲಿಯೇ ಕಸ ವಿಂಗಡಣೆ'



ಮಲ್ಲತ್ತಹಳ್ಳಿಯ ಬೇರೆ ಬೇರೆ ಕಡೆಗಳಿಂದ ಸಂಗ್ರಹಿಸಿ ತರುವ ಕಸವನ್ನು ಮುದ್ದಿನಪಾಳ್ಯ ಮುಖ್ಯರಸ್ತೆಯಲ್ಲಿ ವಿಂಗಡಣೆ ಮಾಡಿ, ಕಂಟೇನರ್‌ಗಳಿಗೆ ತುಂಬಲಾಗುತ್ತಿದೆ. ರಸ್ತೆಯಲ್ಲಿಯೇ ನಡೆಯುವ ಈ ಕೆಲಸದಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡಬೇಕಾಗಿದೆ. ಕಸ ವಿಂಗಡಣೆ ಮಾಡುವ ಸಂದರ್ಭದಲ್ಲಿ ಬರುವ ತ್ಯಾಜ್ಯದ ರಸ ರಸ್ತೆಯಲ್ಲಿ ಹರಿಯುತ್ತಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಜನವಸತಿ ರಹಿತ ಜಾಗದಲ್ಲಿ ಈ ಕಸ ವಿಂಗಡಣೆ ಮಾಡುವ ಕೆಲಸವನ್ನು ಮಾಡಬೇಕು.

**ಕೃಷ್ಣಭಟ್ ಗೋಸಾಡ,** ಸರ್ ಎಂ.ವಿ. ಬಡಾವಣೆ


ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Accounts & Finance

WANTED EXPERIENCED Accounts Assistant with Tally, GST, Computer Knowledge. Reply mundhralighting@gmail.com 9986033339

Marketing & Sales

UNCLE'S WANTED Immediately BUSINESS EXECUTIVES. Smart Promotional SALES GIRLS/ BOYS. Best Salary. Walk-in Everyday 10am: 99000-54461/62

Security & Detectives

GLOBE DETECTIVE AGENCY URGENTLY REQUIRES EXPERIENCED MARKETING cum FIELD OFFICERS FOR SECURITY SERVICES AGENCY. PH: 9845042347

REAL ESTATE BUYING

General

General

WANTED INDUSTRIES Runing or closed in Private or KIADB/ KSSIDC 10Guntas to 4Acres Bangalore Urban/ Rural. Wanted Residential/ Commercial from 4000 to 20000sft, and Agricultural Land 2 to 10Acres and above. Verna Developers, Barton Center, MG Road, Blr. 9620253180.

PERSONAL

Change of Name

CHANGE OF NAME
I, S.R.Rita and Rita Sreekanta Murthy W/o late S. Sreekanta Murthy. Residing at # 352, 2nd B Cross, Girinagar 1st Phase, Banashankari 3rd Stage, Bengaluru-560085. State that the above two names are one and the same and they belong to me only. Vide affidavit dated 18.08.2025 before notary A.P. Sree.Urs, Mysuru.

CHANGE OF NAME
I, CLEMENT SINGH MARIADAS SUSEELY, M.S. CLEMENT SINGH & CLEMENT SINGH M.S, residing at Villa 104, Prestige Lakeside Habitat,Varthur Road, Bengaluru-560087, declare that the above names pertain to me only.Henceforth I shall be known as CLEMENT SINGH MARIADAS SUSEELY vide affidavit 21.11.2025 before notary S. Samuel Solomon, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru



**ನೈಋತ್ಯ ರೈಲ್ವೆ**

ಟೆಂಡರು ಸೂಚನೆ ಸಂ.: CAO/CN/BNC/128/2025 ದಿನಾಂಕ: 21.07.2025 ರ ತಿದ್ದುಪಡಿ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| ಕರ್ನಾಟಕದ ಚನ್ನಸಂದ್ರ ಮತ್ತು ಯಲಹಂಕ ನಿಲ್ದಾಣಗಳ ನಡುವೆ ಇಂಜಿನಿಯರಿಂಗ್ ನಿರ್ಮಾಣ ಮತ್ತು ಪ್ರೊಕ್ಯೂರ್‌ಮೆಂಟ್ (ಇಪಿಸಿ) ಮಾದರಿಯಲ್ಲಿ ಥಣಿಸಂದ್ರ (ಟಿಹೆಚ್‌ಎಸ್‌ವಿ) ದಲ್ಲಿ ವಂದೇ ಭಾರತ್ ಸ್ಲೀಪರ್ ರೈಲುಗಳ ನಿರ್ವಹಣಾ ಡಿಪೋವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಪ್ರಸ್ತಾವನೆಯ ಬೇಡಿಕೆ (ಆರ್‌ಎಫ್‌ಪಿ). (ಟೆಂಡರು ಉಲ್ಲೇಖ ಸಂ.: VANDEBHARAT-THANISANDRA) | ರೂ. 2,27,94,75,676/- |

| ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ | |
|---|---|
| ಪ್ರಸ್ತುತ | ಪರಿಷ್ಕೃತ |
| 21.11.2025, (15:00 ಗಂಟೆಯವರೆಗೆ) | 12.12.2025, (15:00 ಗಂಟೆಯವರೆಗೆ) |

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ ಇಂಜಿನಿಯರ್/ನಿರ್ಮಾಣ ಕಾಮಗಾರಿ/ಬೆಂಗಳೂರು ದಂಡು
PUB/671/AAF/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

**ನೈಋತ್ಯ ರೈಲ್ವೆ**

ಟೆಂಡರು ಸೂಚನೆ ಸಂ. 25/2025/SBC, ದಿನಾಂಕ: 17.11.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಟೆಂಡರು ಸಂ. | ಸಂಕ್ಷಿಪ್ತವಾದ ವಿವರಣೆ | ಟೆಂಡರು ಕೊನೆಯ ದಿನಾಂಕ |
|---|---|---|
| ಎಲ್8256546ಬಿ | ಎಲ್‌ಎಸ್2/ಎಲ್‌ಎಸ್3 ಟೈಪ್ ಕೋಚ್‌ಗಳನ್ನು ಎಲ್‌ಎಸ್5 ಟೈಪ್ ಕೋಚ್‌ಗಳನ್ನಾಗಿ ಪರಿವರ್ತಿಸಲು ಎಲ್‌ಹೆಚ್‌ಬಿ ಬೋಗಿಗಳನ್ನು ಏರ್ ಸಸ್ಪೆನ್ಷನ್ ಜೊತೆಗೆ 140ಕೆಎನ್ ಬೋಗಿಗಳಾಗಿಸುವುದು. (ಪರಿಮಾಣ: 02 ಸೆಟ್) | 17.12.2025 10:30 ಗಂಟೆಗೆ |

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/666/AAF/PRB/SWR/2025-26 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

**ನೈಋತ್ಯ ರೈಲ್ವೆ**

ಓಪನ್ ಟೆಂಡರು ಸೂಚನೆ ಸಂ. BE-29-2025-26-OT-17-19 (ಇ–ಟೆಂಡರಿಂಗ್ ಮೂಲಕ)

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಟೆಂಡರು ಸಂ. | ಕಾಮಗಾರಿಯ ಹೆಸರು | ಅಂದಾಜು ಮೌಲ್ಯ | ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: |
|---|---|---|---|
| BE-29-2025 -26-OT-19 | ಬೆಂಗಳೂರು ವಿಭಾಗದಲ್ಲಿ ದೋಷಪೂರಿತ ಎಲ್‌ಟಿಯುಜಿ & ಹೆಚ್‌ಟಿಯುಜಿ ಕೇಬಲ್‌ಗಳ ಪರ್ಯಾಯವಾದ, ಬಲವರ್ಧನೆ ಮತ್ತು ಬದಲಾವಣೆ. | ರೂ. 3,82,48,282/- | 12.12.2025, 15:00 ಗಂಟೆಯವರೆಗೆ |
| BE-29-2025 -26-OT-17 | ವಿದ್ಯುತ್ ವ್ಯವಸ್ಥೆ ಕಾರ್ಯಗಳು: 1) ಬಂಗಾರಪೇಟೆ ನಿಲ್ದಾಣದಲ್ಲಿ ಎಲ್ಲಾ 6 ಪ್ಲಾಟ್‌ಫಾರ್ಮ್‌ಗಳಲ್ಲಿ ಕ್ವಿಕ್ ಕೋಚ್ ವಾಟರಿಂಗ್ ವ್ಯವಸ್ಥೆಯ ಕಾಮಗಾರಿ. 2) ಬೆಂಗಳೂರು, ಎಂಜಿ ಕಾಲೋನಿಯಲ್ಲಿ ಆಟದ ಮೈದಾನಕ್ಕೆ ಬೇಕಾದ ಲೈಟಿಂಗ್ ವ್ಯವಸ್ಥೆ. 3) ಬೆಂಗಳೂರು ವಿಭಾಗದಲ್ಲಿ ಹಳೆಯ ಕನ್ವೆನ್ಷನಲ್ ಎಸಿ ಯೂನಿಟ್‌ಗೆ ಬದಲಾಗಿ ಎನರ್ಜಿ ಎಫೀಶಿಯೆಂಟ್ ಏರ್–ಕಂಡೀಷನಿಂಗ್ ಘಟಕಗಳ ವ್ಯವಸ್ಥೆ ಮತ್ತು ಔಟ್ ಆಫ್ ಕೋಡಲ್ ಲೈಫ್ / ದೋಷಪೂರಿತ ಸೋಲಾರ್ ವಾಟರ್ ಹೀಟರುಗಳ ಬದಲಾಗಿ ಹೊಸ ಸೋಲಾರ್ ವಾಟರ್ ಹೀಟರುಗಳು. 4) ಎಸ್‌ಇಟಿ ಗುಡ್ಸ್ ಶೆಡ್‌ನಲ್ಲಿ ಹೆವಿ ಟ್ರಕ್‌ಗಳಿಗೆ ತೊಂದರೆಯಾಗುತ್ತಿರುವ ಶೆಟ್ಟಿಹಳ್ಳಿ ಗ್ರಾಮದಲ್ಲಿ ಅಸ್ತಿತ್ವದಲ್ಲಿರುವ ಬೆಸ್ಕಾಂ ಹೆಚ್‌ಟಿ & ಎಲ್‌ಟಿ ಓವರ್‌ಹೆಡ್ ಲೈನ್‌ಗಳನ್ನು ಮರುಜೋಡಿಸುವುದು. 5) ಯಶವಂತಪುರ ಸಬ್ ಸ್ಟೇಷನ್‌ನಲ್ಲಿ ಆಟೋಮ್ಯಾಟಿಕ್ ಪವರ್ ಫ್ಯಾಕ್ಟರ್ ಕರೆಕ್ಷನ್ (ಎಪಿಎಫ್‌ಸಿ)ಯ ಪ್ಯಾನಲ್ ವ್ಯವಸ್ಥೆ. | ರೂ. 1,91,26,319/- | 10.12.2025, 15:00 ಗಂಟೆಯವರೆಗೆ |

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರ್ರಿ
PUB/668/AAF/PRB/SWR/2025-26 ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ಬೆಂಗಳೂರು
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮು.ಇಂ(ವಿ)/ಪ್ರ(ಕಾ)ವಬೆಂ/ಅಇಂ(ಕ)/ಸ.ಇಂ–2/ಕ–482(1)/25–26/7266 ದಿನಾಂಕ:21.11.2025

**ಟೆಂಡರ್ ಪ್ರಕಟಣೆ** (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮು.ಇಂ.ವಿ/ಪ್ರ(ಕಾ)ವ/ಬೆಂ.ವ/ಪಿ.ಟಿ.ಕೆ–16(ಕರೆ–2)ರ ಅನ್ವಯ **ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆಯಲ್ಲಿ ಇರುವ 66/11ಕೆ.ವಿ. ಕೊಡಿಗೆಹಳ್ಳಿ ವಿದ್ಯುತ್ ಉಪಕೇಂದ್ರದಲ್ಲಿ ಹಾಲಿ ಇರುವ 2x20ಎಂ.ವಿ.ಎ ವಿದ್ಯುತ್ ಪರಿವರ್ತಕಗಳನ್ನು 2x31.5ಎಂ.ವಿ.ಎ ವಿದ್ಯುತ್ ಪರಿವರ್ತಕಗಳನ್ನಾಗಿ ಪರಿವರ್ತಿಸುವ ಭಾಗಶಃ ಗುತ್ತಿಗೆ ಆಧಾರದ ಕೆಲಸ ಎಲ್ಲಾ ಸರಿ ಹೊಂದುವ ಸಾಮಾಗ್ರಿಗಳ (2x31.5 ಎಂ.ವಿ.ಎ ವಿದ್ಯುತ್ ಪರಿವರ್ತಕಗಳು, ಎನ್.ಐ.ಎಫ್.ಪಿ.ಎಸ್ ಮತ್ತು 11ಕೆ.ವಿ. ಸ್ವಿಚ್‌ಗೇರ್‌ಗಳನ್ನು ಹೊರತುಪಡಿಸಿ)/ಉಪಕರಣಗಳ ಸರಬರಾಜು, ಪರೀಕ್ಷೆ ನಿರ್ಮಾಣ ಕಾರ್ಯ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ) ಮತ್ತು ಕಾರ್ಯಾರಂಭ ಮಾಡುವ ಕಾಮಗಾರಿಗೆ** ಬಿಡ್‌ಅನ್ನು ಆಹ್ವಾನಿಸಿದೆ. ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರವಾದ ಅಧಿಸೂಚನೆಯನ್ನು **ದಿನಾಂಕ:24.11.2025 ರಂದು** ಅಥವಾ ನಂತರ ವೆಬ್‌ಸೈಟ್: **https://kptcl.karnataka.gov.in**ನ ಹೈಪರ್‌ಲಿಂಕ್ **"E Procurement KPTCL"** ಅಥವಾ **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಇನ್ನಿತರ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿ), ಪ್ರಸರಣ (ಕಾಯಾಚರಣೆ) ವಲಯ, ಕವಿಪ್ರನಿನಿ, ಆನಂದರಾವ್ ವೃತ್ತ, ಬೆಂಗಳೂರು–560 009

**ಸಾಲ ವಸೂಲಾತಿ ನ್ಯಾಯಮಂಡಳಿ–II ರ ಸಮಕ್ಷಮ, ಬೆಂಗಳೂರು**
4ನೇ ಮಹಡಿ, ಬಿಎಸ್‌ಎನ್‌ಎಲ್ ಕಟ್ಟಡ, ಟೆಲಿಫೋನ್ ಹೌಸ್, ರಾಜ್ ಭವನ್ ರಸ್ತೆ, ಬೆಂಗಳೂರು–560 001
ಒ. ಎ. ನಂ. 120/2019
**ನಡುವೆ: ಕೆನರಾ ಬ್ಯಾಂಕ್,** ನರಸಿಂಹರಾಜ ರಸ್ತೆ ಶಾಖೆ, (ಈ ಮೊದಲು ಕಲಾಸಿಪಾಳ್ಯ ಶಾಖೆ), ನರಸಿಂಹ ರಾಜ ರಸ್ತೆ, ಬೆಂಗಳೂರು –560 002 ...ಅರ್ಜಿದಾರರು
ವಿರುದ್ಧ
ಶ್ರೀ ಎ. ಅಮಾನುಲ್ಲಾ ಬೇಗ್ ....ಪ್ರತಿವಾದಿ
**ಸಾಲ ವಸೂಲಾತಿ ನ್ಯಾಯಮಂಡಳಿ (ವಿಧಾನ) ನಿಯಮಾವಳಿ 1993ರ ನಿಯಮ 23(VIII)ರಡಿ ನೀಡಲಾದ ಸಮನ್ಸ್**
ಇವರಿಗೆ, ಶ್ರೀ ಎ. ಅಮಾನುಲ್ಲಾ ಬೇಗ್ ಬಿನ್ ಇನಾಯತುಲ್ಲಾಬೇಗ್, ವಯಸ್ಸು53 ವರ್ಷ, ಮಾಲೀಕರು: ಮೆ. ಎ. ಅಮಾನ್ ಪ್ಲೈವುಡ್ ಅಂಡ್ ಫರ್ನಿಚರ್ಸ್, ವ್ಯವಹಾರದ ಸ್ಥಳ: ನಂ. 224, ಜೆಡ್ಡಾ ಕಾಂಪ್ಲೆಕ್ಸ್, ಮೋದಿ ಮುಖ್ಯ ರಸ್ತೆ, ಡಿ. ಜೆ. ಹಳ್ಳಿ, ಬೆಂಗಳೂರು – 560 045. ಮನೆ ವಿಳಾಸ: ನಂ. 7, 8ನೇ ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, ಸೋಮೇಶ್ವರ ನಗರ, ಬೆಂಗಳೂರು – 560 011
ಅದಾಗಿ, ಅರ್ಜಿದಾರರು ನಿಮ್ಮ ವಿರುದ್ಧ ಬ್ಯಾಂಕುಗಳು ಮತ್ತು ದಿವಾಳಿತನ ಕಾಯಿದೆ 1993ರ ಅನ್ವಯ ಸಾಲ ವಸೂಲಾತಿ ಕಲಂ 19ರ ಅಡಿ ಅರ್ಜಿ ಸಲ್ಲಿಸಿ **ರೂ.12,38,020/–** (ರೂಪಾಯಿ ಹನ್ನೆರಡು ಲಕ್ಷ ಮೂವತ್ತೆಂಟು ಸಾವಿರದ ಇಪ್ಪತ್ತು ಮಾತ್ರ) ಜೊತೆಗೆ ಹಾಲಿ ಮತ್ತು ಮುಂದಿನ ಬಡ್ಡಿಯನ್ನು ಇತರ ಪರಿಹಾರದೊಂದಿಗೆ ವಸೂಲಾತಿಗಾಗಿ ದಾಖಲು ಮಾಡಿರುತ್ತಾರೆ ಮತ್ತು ಪ್ರತಿವಾದಿಗಳಿಗೆ ಈ ಮೂಲಕ ನಿರ್ದೇಶಿಸುವುದೇನೆಂದರೆ ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಅಥವಾ ದಿನಾಂಕ **31.12.2025ರಂದು ಬೆಳಿಗ್ಗೆ 10.30 ಘಂಟೆಗೆ** ಹಾಜರಾಗಿ ಯಾಕಾಗಿ ಕೋರಿದ ಪರಿಹಾರ ಮೊತ್ತವನ್ನು ಮಂಜೂರು ಮಾಡಬಾರದು ಎಂಬುದಕ್ಕೆ ಸಮಜಾಯಿಷಿ ನೀಡತಕ್ಕದ್ದು. ತಪ್ಪಿದ್ದಲ್ಲಿ ದಾವೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ತೀರ್ಮಾನಿಸಲಾಗುವುದು. ನ್ಯಾಯಮಂಡಳಿಯ ಮೊಹರಿನೊಂದಿಗೆ ನನ್ನಿಂದ ದಿನಾಂಕ **18.11.2025** ರಂದು ಬೆಂಗಳೂರಿನಲ್ಲಿ ನೀಡಲ್ಪಟ್ಟಿದೆ.
ನ್ಯಾಯಾಧಿಕರಣದ ಆದೇಶದ ಮೇರೆಗೆ
ಸಹಿ/- ಸಮನ್ಸ್ ನೀಡಲು ಅಧಿಕಾರ ಹೊಂದಿರುವ ಅಧಿಕಾರಿಯವರ ಸಹಿ
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು

# ಕಲ್ಯಾಣಿಗಳಿಗೆ ಮರುಜೀವ: ಅಂತರ್ಜಲ ವೃದ್ಧಿ

## ಬತ್ತಿಹೋಗಿದ್ದ ಕೊಳವೆ ಬಾವಿಗಳಲ್ಲಿ ಮತ್ತೆ ಚಿಮ್ಮಿದ ನೀರು • ರೈತರಲ್ಲಿ ಸಂತಸ

• ಎ.ಎಂ.ಸುರೇಶ

**ಮುಖ್ಯಾಂಶಗಳು**

- ಹಂತ, ಹಂತವಾಗಿ ಕಲ್ಯಾಣಿ ಪುನರುಜ್ಜೀವನ
- ಹಿಂಡಿಗನಾಳ ಕಲ್ಯಾಣಿಯಲ್ಲಿ ದೀಪೋತ್ಸವ ಆಚರಣೆ

**ಬೆಂಗಳೂರು:** ನೂರಾರು ವರ್ಷಗಳ ಹಿಂದೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ನಿರ್ಮಿಸಿರುವ ಕಲ್ಯಾಣಿಗಳನ್ನು ಪುನರುಜ್ಜೀವನಗೊಳಿಸುವ ಕಾರ್ಯ ನಡೆಯುತ್ತಿದ್ದು ಇದರಿಂದಾಗಿ ಅಂತರ್ಜಲಮಟ್ಟ ಹೆಚ್ಚಾಗಿದೆ. ನಿಂತು ಹೋಗಿದ್ದ ಕೊಳವೆ ಬಾವಿಗಳಲ್ಲಿ ಮತ್ತೆ ನೀರು ಬರಲು ಶುರುವಾಗಿದ್ದರಿಂದ ರೈತರಲ್ಲಿ ಸಂತಸ ಮೂಡಿದೆ.

ಗ್ರಾಮಾಂತರ ಜಿಲ್ಲೆಯ ಹಿಂಡಿಗನಾಳ, ತಗ್ಗಿಹೊಸಹಳ್ಳಿ, ಚೊಕ್ಕಸಂದ್ರ, ಅತ್ತಿವಟ್ಟ, ದೇವನಗುಂದಿ ಗ್ರಾಮಗಳ ಕಲ್ಯಾಣಿಗಳನ್ನು ಸರ್ಕಾರೇತರ ಸಂಸ್ಥೆಗಳಾದ ಆಶ್ರಯ ಹಸ್ತ ಟ್ರಸ್ಟ್ ಮತ್ತು ಮೈರಾಡಾ (ಮೈಸೂರು ಪುನರ್ವಸತಿ ಮತ್ತು ಅಭಿವೃದ್ಧಿ ಸಂಸ್ಥೆ) ಸಹಯೋಗದಲ್ಲಿ ಪುನರುಜ್ಜೀವನಗೊಳಿಸಿದ್ದು ಇದಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ದೇವಸ್ಥಾನಗಳ ಸಮೀಪ ಹಾಗೂ ಗ್ರಾಮಗಳಲ್ಲಿರುವ ಸುಮಾರು 100 ವರ್ಷಗಳಷ್ಟು ಹಳೆಯ ಕಲ್ಯಾಣಿಗಳು ಹೂಳು, ಕಸದಿಂದ ಮುಚ್ಚಿಹೋಗಿದ್ದು, ಗಿಡಗಳು ಬೆಳೆದಿವೆ. ಅವುಗಳನ್ನು ಗುರುತಿಸಿ ಪುನರುಜ್ಜೀವನಗೊಳಿಸಲಾಗುತ್ತಿದೆ. ಚೊಕ್ಕಸಂದ್ರದಲ್ಲಿ ಕಲ್ಯಾಣಿಗೆ ಮರುಜೀವ ನೀಡಿದ ಬಳಿಕ ಬತ್ತಿಹೋಗಿದ್ದ ಕೊಳವೆಬಾವಿಗಳಲ್ಲಿ ನೀರು ಬರುತ್ತಿದೆ. ಹೊಸದಾಗಿ ಕೊಳವೆ ಬಾವಿ ಕೊರೆದರೆ 400 ಅಡಿಗೆ ನೀರು ಸಿಗುತ್ತಿದೆ.

‘ಮೊದಲ ಹಂತದಲ್ಲಿ ಐದು ಕಲ್ಯಾಣಿಗಳನ್ನು ಪುನರುಜ್ಜೀವನಗೊಳಿಸಿದ್ದು, ಈಗಾಗಲೇ 80 ಲಕ್ಷ ಲೀಟರ್ ನೀರು ಸಂಗ್ರಹವಾಗಿದೆ. ಇದರಿಂದ ಲಕ್ಷಾಂತರ ಜನರಿಗೆ ಉಪಯೋಗವಾಗಲಿದೆ. ಇನ್ನೂ 11 ಕಲ್ಯಾಣಿಗಳನ್ನು ಇದೇ ರೀತಿ ಮಾಡುತ್ತೇವೆ. ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 100 ಕಲ್ಯಾಣಿಗಳನ್ನು ಪುನರುಜ್ಜೀವಗೊಳಿಸುವ ಗುರಿ ಇದೆ’ ಎಂದು ಮೈರಾಡಾ ಸಂಸ್ಥೆಯ ಹಿರಿಯ ವ್ಯವಸ್ಥಾಪಕರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.





ಪುನರುಜ್ಜೀವನಕ್ಕೂ ಮುಂಚೆ ಚೊಕ್ಕಸಂದ್ರದ ಕಲ್ಯಾಣಿ ಇದ್ದ ಸ್ಥಿತಿ (ಎಡಚಿತ್ರ). ಪುನರುಜ್ಜೀವನದ ಬಳಿಕ ಕಲ್ಯಾಣಿಯಲ್ಲಿ ನೀರು ಸಂಗ್ರಹವಾಗಿದೆ

> **ಕಲ್ಯಾಣಿ ಪುನರುಜ್ಜೀವನ ಆದ ಬಳಿಕ ಕೊಳವೆಬಾವಿಯಲ್ಲಿ ನೀರು ಬರುತ್ತಿದೆ. ಇದರಿಂದ ಬೆಳೆ ಬೆಳೆಯಲು ತುಂಬಾ ಅನುಕೂಲವಾಗಿದೆ**
> **ಮುನೇಗೌಡ,** ಚೊಕ್ಕಸಂದ್ರ ಗ್ರಾಮದ ರೈತ

ಕಲ್ಯಾಣಿಗಳು ಅಥವಾ ಮೆಟ್ಟಿಲು ಬಾವಿಗಳು ಎಂದು ಕರೆಯುವ ಇವು, ಒಂದು ಕಾಲದಲ್ಲಿ ಗ್ರಾಮೀಣ ಜೀವನದ ಬೆನ್ನೆಲುಬಾಗಿದ್ದವು. ಆದರೆ, ನಗರೀಕರಣ, ಅತಿಕ್ರಮಣ, ಅರಿವಿನ ಕೊರತೆಯಿಂದಾಗಿ ಕಲ್ಯಾಣಿಗಳು ಕಣ್ಮರೆಯಾಗುತ್ತಿವೆ. ಅವುಗಳನ್ನು ಪುನರುಜ್ಜೀವನಗೊಳಿಸುವ ಮೂಲಕ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳ ಬಹುದು ಎಂಬುದು ಅವರ ಅಭಿಪ್ರಾಯ.

**ಒಳ್ಳೆ ಸುದ್ದಿ**

‘ಸ್ಥಳೀಯ ಜನರು ಮತ್ತು ಸಮುದಾಯದ ಬೆಂಬಲದಿಂದ ಸಾಂಪ್ರದಾಯಿಕ ನೀರಿನ ಪದ್ಧತಿಗಳನ್ನು ಪುನರುಜ್ಜೀವನಗೊಳಿಸಬೇಕು. ಜನರ ಸಹಕಾರದಿಂದ ಈ ಯೋಜನೆಯನ್ನು ಇನ್ನಷ್ಟು ವಿಸ್ತರಿಸಲು ಸಾಧ್ಯವಿದೆ. ಕೇವಲ ಸರ್ಕಾರದಿಂದಲೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ’ ಎನ್ನುತ್ತಾರೆ ಆಶ್ರಯ ಹಸ್ತ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಕೆ. ದಿನೇಶ್.

ಕಲ್ಯಾಣಿಗಳ ಒತ್ತುವರಿಯನ್ನು ತೆರವುಗೊಳಿಸಿ, ಮುಳ್ಳುತಂತಿ ಬೇಲಿ ಹಾಕಲಾಗಿದೆ. ಕಲ್ಯಾಣಿಯಲ್ಲಿ ನೀರು ತುಂಬಿರುವುದರಿಂದ ಜನ–ಜಾನುವಾರುಗಳಿಗೆ ನೀರು ಲಭ್ಯವಾಗುತ್ತಿದೆ. ಅಂತರ್ಜಲ ವೃದ್ಧಿಯಾಗಿ ಇರುವುದರಿಂದ ಬೆಳೆಗಳಿಗೆ ನೀರು ಉಣಿಸಲು ರೈತರಿಗೂ ಅನುಕೂಲವಾಗಿದೆ ಎಂದರು.

‘ಕಲ್ಯಾಣಿಗಳು ಮತ್ತೆ ಜೀವ ಪಡೆದಿರುವುದರಿಂದ ಗ್ರಾಮಸ್ಥರು, ರೈತರು ಸಂತಸಗೊಂಡಿದ್ದಾರೆ. ಸರ್ಕಾರೇತರ ಸಂಸ್ಥೆಗಳು ಮತ್ತು ಸ್ಥಳೀಯ ಜನರ ಸಹಕಾರದಿಂದ ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಬೆಂಗಳೂರಿನಲ್ಲಿ ಇರುವ ಕಲ್ಯಾಣಿಗಳನ್ನು ಪುನರುಜ್ಜೀವನಗೊಳಿಸುತ್ತೇವೆ’ ಎಂದು ವಿವರಿಸಿದರು.

‘ಜಿಲ್ಲಾಡಳಿತದೊಂದಿಗೆ ಒಪ್ಪಂದ ಮಾಡಿಕೊಂಡು ಪುನರುಜ್ಜೀವನ ಕಾರ್ಯ ಕೈಗೊಂಡಿದ್ದು, ಕೆಲಸ ಪೂರ್ಣಗೊಂಡ ನಂತರ ನಿರ್ವಹಣೆ ಜವಾಬ್ದಾರಿಯನ್ನು ಸ್ಥಳೀಯ ಕಲ್ಯಾಣಿ ನಿರ್ವಹಣೆ ಸಮಿತಿಗಳಿಗೆ ವಹಿಸಲಾಗುತ್ತದೆ. ಗ್ರಾಮ ಪಂಚಾಯಿತಿಗಳಿಂದಲೂ ಉತ್ತಮ ಸಹಕಾರ ಸಿಗುತ್ತಿದೆ. ಇದೇ ತಿಂಗಳ 17ರಂದು ಹಿಂಡಿಗನಾಳ ಕಲ್ಯಾಣಿಯಲ್ಲಿ ದೀಪೋತ್ಸವ ಕಾರ್ಯಕ್ರಮ ನಡೆಯಿತು’ ಎಂದು ಅವರು ಹೇಳಿದರು.

## ವೈದ್ಯಕೀಯ ಸ್ಪಾಗಳ ಮೇಲೆ ಕಣ್ಗಾವಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನಧಿಕೃತ ಸ್ಪಾಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ವೈದ್ಯಕೀಯ ಸ್ಪಾಗಳನ್ನು ವೈದ್ಯಕೀಯ ಸಂಸ್ಥೆಗಳೆಂದು ಘೋಷಿಸಿ, ಆರೋಗ್ಯ ಇಲಾಖೆಯ ನಿಯಂತ್ರಣಕ್ಕೆ ತರಲಾಗಿದೆ.



ದಿನೇಶ್ ಗುಂಡೂರಾವ್

‘ಜನರ ಆರೋಗ್ಯ ಕಾಳಜಿಯನ್ನು ಕಡೆಗಣಿಸಿ, ಕೇವಲ ವ್ಯಾಪಾರ ದೃಷ್ಟಿಯಿಂದ ಅನಧಿಕೃತವಾಗಿ ತಲೆಯೆತ್ತಿರುವ ವೈದ್ಯಕೀಯ ಸ್ಪಾಗಳ ಬಗ್ಗೆ ಆರೋಗ್ಯ ಇಲಾಖೆಗೆ ಹಲವಾರು ದೂರುಗಳು ಬಂದಿದ್ದವು. ಈ ಕ್ಷೇತ್ರದಲ್ಲಿ ಪರಿಣತರಲ್ಲದಿದ್ದರೂ ರಾಸಾಯನಿಕಗಳನ್ನು ಬಳಸಿ ಸೌಂದರ್ಯವರ್ಧಕ ಚಿಕಿತ್ಸೆ ನೀಡುತ್ತಿದ್ದ, ವೃದ್ಧರ ಮೂಳೆ-ಕೀಲು ಸಮಸ್ಯೆಗಳನ್ನೇ ಬಂಡವಾಳ ಮಾಡಿಕೊಂಡು ರೇಡಿಯೇಷನ್ ಥೆರಪಿ ಒದಗಿಸುತ್ತಿದ್ದ ಜಾಲವನ್ನು ಆರೋಗ್ಯ ಇಲಾಖೆ ಪತ್ತೆ ಮಾಡಿ ಕ್ರಮಕೈಗೊಂಡಿದೆ. ಆದರೂ ಹೆಚ್ಚಿನ ಕಣ್ಗಾವಲಿರಿಸುವುದು ಅತ್ಯಗತ್ಯ ಎಂಬುದನ್ನು ಮನಗಂಡು ಈ ಕೇಂದ್ರಗಳನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ 2007ರ ಅಡಿಯಲ್ಲಿ ವೈದ್ಯಕೀಯ ಸಂಸ್ಥೆಗಳ ವ್ಯಾಪ್ತಿಗೆ ತರಲಾಗಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಈ ಬಗ್ಗೆ ಹೊರಡಿಸಲಾದ ಆದೇಶಕ್ಕೆ ಸಂಬಂಧಿಸಿದಂತೆ ‘ಎಕ್ಸ್’ ಮಾಡಿರುವ ಅವರು, ‘ಲೇಸರ್ ಚಿಕಿತ್ಸೆಗಳು, ಲಿಪೊಸಕ್ಷನ್, ಕೂದಲು ಕಸಿ, ಐವಿ ಹೈಡ್ರೇಷನ್ ಥೆರಪಿ ಸೇರಿ ಇತರೆ ಸೌಂದರ್ಯ ವರ್ಧಕ ಚಿಕಿತ್ಸೆಯ ಗುಣಮಟ್ಟದ ಮೇಲೆ ಕಣ್ಗಾವಲಿಡಲು ಕ್ರಮ ಕೈಗೊಳ್ಳಲಾಗಿದೆ. ಅನಧಿಕೃತವಾಗಿ ವೈದ್ಯಕೀಯ ಅಭ್ಯಾಸ ಮಾಡುವ ಮತ್ತು ವೃತ್ತಿಪರರಲ್ಲದವರು ನಡೆಸುತ್ತಿರುವ ಸೌಂದರ್ಯವರ್ಧಕ ಚರ್ಮದ ಕ್ಲಿನಿಕ್‌ಗಳು, ಕೊರಿಯನ್ ಚರ್ಮದ ಆರೈಕೆ ಕೇಂದ್ರಗಳು, ಮಸಾಜ್ ಸೆಂಟರ್‌ಗಳು ಮತ್ತು ಸ್ಪಾಗಳನ್ನು ನಿಯಂತ್ರಿಸಲು ಸಾಧ್ಯವಾಗಲಿದೆ’ ಎಂದು ಅವರು ಹೇಳಿದ್ದಾರೆ.

‘ಅಲೋಪಥಿ ಅಥವಾ ಆಯುರ್ವೇದದಂತಹ ವೈದ್ಯಕೀಯ ಪದವಿ ಪಡೆದ ವೈದ್ಯರು ತಮ್ಮ ಕ್ಷೇತ್ರಕ್ಕೆ ಸಂಬಂಧವಿಲ್ಲದ ಸೌಂದರ್ಯವರ್ಧಕ ಕ್ಲಿನಿಕ್‌ಗಳನ್ನು ಅನಧಿಕೃತವಾಗಿ ನಡೆಸುವುದನ್ನು ನಿಯಂತ್ರಿಸಲು ಈ ಬಗ್ಗೆ ಆದೇಶ ಹೊರಡಿಸಲಾಗಿದ್ದು, ಈ ಕ್ರಮವು ರಾಜ್ಯದಲ್ಲಿ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಪಾರದರ್ಶಕತೆ ತರಲು ಸಹಕಾರಿಯಾಗಲಿದೆ’ ಎಂದಿದ್ದಾರೆ.

### ‘ವಿದ್ಯಾ’ ದಕ್ಷಿಣ ವಲಯದ 15ನೇ ವಾರ್ಷಿಕೋತ್ಸವ

# ಡಿಜಿಟಲ್ ಶಿಕ್ಷಣಕ್ಕೆ ಒತ್ತು ನೀಡಲು ಸಲಹೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಈಗಾಗಲೇ ಜಗತ್ತಿನ ಪ್ರಮುಖ ಉದ್ಯಮ ನಗರವಾಗಿ ರೂಪುಗೊಂಡಿರುವ ಬೆಂಗಳೂರು ಮುಂದಿನ ಹತ್ತು ವರ್ಷಗಳಲ್ಲಿ ಡಿಜಿಟಲ್ ಹಾಗೂ ನಾವೀನ್ಯತೆ ಕ್ಷೇತ್ರಗಳಲ್ಲಿ ನಿರೀಕ್ಷೆಗೂ ಮೀರಿ ಬೆಳೆಯಲಿದೆ. ಡಿಜಿಟಲ್ ಶಿಕ್ಷಣಕ್ಕೆ ಒತ್ತು ನೀಡುವುದು ಸೂಕ್ತ’ ಎಂದು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ (ಕೆ ಡೆಮ್) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಂಜೀವ್‌ಕುಮಾರ್ ಗುಪ್ತ ತಿಳಿಸಿದರು.

ವಿದ್ಯಾ ದಕ್ಷಿಣ ವಲಯದ 15ನೇ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

‘ಕರ್ನಾಟಕ ಎಂಟು ದಶಕದ ಹಿಂದೆಯೇ ಉದ್ಯಮಪರತೆ, ಶಿಕ್ಷಣ ಸ್ನೇಹಿ ವ್ಯವಸ್ಥೆ ರೂಪಿಸಿಕೊಂಡು ಬಂದಿರುವ ರಾಜ್ಯ. ಮೈಸೂರು ಮಹಾರಾಜರು ಇದಕ್ಕೆ ಒತ್ತು ನೀಡಿದ್ದರು. ನಂತರ ಬಂದ ಸರ್ಕಾರಗಳು ಈ ನಿಟ್ಟಿನಲ್ಲಿ ಕೆಲಸ ಮಾಡಿದ್ದರಿಂದ ಕರ್ನಾಟಕ ದೇಶದ ಮುಂಚೂಣಿ ರಾಜ್ಯವಾಗಿ ಬೆಳೆದಿದೆ. ಇದನ್ನು ಮುಂದೆ ತೆಗೆದುಕೊಂಡು ಹೋಗುವ ಜತೆಗೆ ಅಗತ್ಯ ಇರುವವರಿಗೆ ಶಿಕ್ಷಣದ ಜೊತೆಗೆ ಕೌಶಲ ತರಬೇತಿ, ಉದ್ಯೋಗದ ಮಾರ್ಗದರ್ಶನ ನೀಡುವ ಒಳಗೊಳ್ಳುವಿಕೆ ಹೆಚ್ಚಿಸಬೇಕು’ ಎಂದು ತಿಳಿಸಿದರು.

‘ವಿದ್ಯಾ ಸಂಸ್ಥೆಯು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ವಿದ್ಯಾರ್ಥಿವೇತನ ನೀಡುತ್ತಿದ್ದು, ಯುವಕರು, ಮಹಿಳೆಯರ ಬದುಕಿಗೂ ಆಸರೆಯಾಗಿದೆ. ಈ ಸಂಸ್ಥೆಯೊಂದಿಗೆ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಲು ಅವಕಾಶವಿದೆ. ಬೆಂಗಳೂರು ಮಾತ್ರವಲ್ಲದೇ ಮೈಸೂರು, ಶಿವಮೊಗ್ಗ, ಮಂಗಳೂರು ಸಹಿತ ಹಲವು ಕಡೆಗಳಲ್ಲಿ ಡಿಜಿಟಲ್ ಶಿಕ್ಷಣದ ವಿಚಾರದಲ್ಲಿ ವಿದ್ಯಾ ಸಂಸ್ಥೆ ಕೈ ಜೋಡಿಸಲು ಉದ್ಯಮ ವಲಯ, ಸರ್ಕಾರದೊಂದಿಗೆ ಕೆ ಡೆಮ್ ಕೆಲಸ ಮಾಡಲಿದೆ’ ಎಂದರು.

ವಿದ್ಯಾ ಸಂಸ್ಥೆ ಸಂಸ್ಥಾಪಕರಾದ ರಶ್ಮಿ ಮಿಶ್ರಾ ಹಾಗೂ ಅಶೋಕ್ ಮಿಶ್ರಾ ಮಾತನಾಡಿ, ‘40 ವರ್ಷದ ಹಿಂದೆ ದೆಹಲಿಯ ಸರ್ಕಾರಿ ಶಾಲೆಯ ಐದು ಮಕ್ಕಳೊಂದಿಗೆ ಆರಂಭಗೊಂಡ ಪಯಣ ಈಗ 9 ರಾಜ್ಯಕ್ಕೆ ವಿಸ್ತರಿಸಿದ್ದು, ಲಕ್ಷಾಂತರ ಮಕ್ಕಳು, ಯುವಕರು, ಮಹಿಳೆಯರ ಬದುಕಿಗೆ ಆಸರೆಯಾಗಿದೆ. ದಕ್ಷಿಣಕ್ಕೂ 15 ವರ್ಷಗಳ ಹಿಂದೆ ಬಂದು 146ಕ್ಕೂ ಹೆಚ್ಚು ಕಾರ್ಯಕ್ರಮಗಳ ಮೂಲಕ 5 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳಿಗೆ ನೆರವಾಗಿದೆ. ಕರ್ನಾಟಕದ ಪಯಣವು ಖುಷಿದಾಯಕ ಆಗಿದೆ. ಇನ್ನಷ್ಟು ಸಹಕಾರ ಸಿಕ್ಕರೆ ಮಕ್ಕಳಿಗೆ ಡಿಜಿಟಲ್ ಶಿಕ್ಷಣವನ್ನು ವಿಸ್ತರಿಸಲು ಸಿದ್ಧರಿದ್ದೇವೆ’ ಎಂದರು.

ವಿದ್ಯಾ ದಕ್ಷಿಣ ವಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೇಖಾ ಶ್ರೀನಿವಾಸನ್ ಅವರು ಡಿಜಿಟಲ್ ಶಿಕ್ಷಣ, ಯುವಕರ ಕೌಶಲ ತರಬೇತಿ, ಮಹಿಳೆಯರಲ್ಲಿ ಡಿಜಿಟಲ್ ಜಾಗೃತಿ ಕಾರ್ಯಕ್ರಮಗಳ ವಿವರ ನೀಡಿದರು.



ನಗರದ ಪುರಭವನದಲ್ಲಿ ನಡೆದ ‘ವಿದ್ಯಾ’ ದಕ್ಷಿಣ ವಲಯ’ದ 15ನೇ ವಾರ್ಷಿಕೋತ್ಸವದಲ್ಲಿ ರೇಖಾ ಶ್ರೀನಿವಾಸನ್, ವಿದ್ಯಾ ಸಂಸ್ಥೆಯ ಸಂಸ್ಥಾಪಕರಾದ ರಶ್ಮಿ ಮಿಶ್ರಾ, ಅಶೋಕ್ ಮಿಶ್ರಾ, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ ಸಿಇಒ ಸಂಜೀವ್ ಕುಮಾರ್ ಗುಪ್ತ ಮತ್ತು ವಿದ್ಯಾ ಸಂಸ್ಥೆಯ ಸದಸ್ಯೆ ನಯನ್ ದಾಭೋಲ್ಕರ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

### ಯಶೋಗಾಥೆ ಅನಾವರಣ

ವಿದ್ಯಾ ಸಂಸ್ಥೆಯ ಕಾರ್ಯಕ್ರಮ ಒಂದೂವರೆ ದಶಕದ ಹಾದಿಯ ಅನಾವರಣದಂತಿತ್ತು. ಮ್ಯಾಜಿಕ್ ಆಫ್ ವಿದ್ಯಾ; ನೋಟದಿಂದ ಪರಿಣಾಮ ಎನ್ನುವ ಹೆಸರನ್ನು ನೀಡಲಾಗಿತ್ತು.

ಅಲ್ಲಿ ಬರೀ ಭಾಷಣಕ್ಕಿಂತ ವಿದ್ಯಾ ಸಂಸ್ಥೆ ಬೆಂಬಲದೊಂದಿಗೆ ಬದುಕು ಕಟ್ಟಿಕೊಂಡವರ ಅನುಭವ ಕಥನಗಳು ತೆರೆದುಕೊಂಡವು. ಶಿಕ್ಷಣ ವಂಚಿತರು ತರಬೇತಿ ಪಡೆದು ಉದ್ಯೋಗ ಕಟ್ಟಿಕೊಂಡ ಖುಷಿ ಕ್ಷಣಗಳನ್ನು ಹಂಚಿಕೊಂಡರು. ಮಹಿಳೆಯರೂ ಬದುಕು ಸುಂದರಗೊಳಿಸಿಕೊಂಡ ಕಥನಗಳನ್ನು ತೆರೆದಿಟ್ಟರು.

ಕಿರು ಅಭಿನಯ, ನೃತ್ಯ, ಹಾಡು ಎಲ್ಲವೂ ಯಶೋಗಾಥೆಗಳ ರೂಪಕದಂತೆಯೇ ಇದ್ದವು. ತಮಗೆ ದಾರಿ ತೋರಿದ ವಿದ್ಯಾ ಸಂಸ್ಥೆಯ ರಶ್ಮಿ ಮಿಶ್ರಾ ಹಾಗೂ ಅಶೋಕ ಮಿಶ್ರಾ ಅವರನ್ನು ಹೃದಯ ತುಂಬಿ ಅಭಿನಂದಿಸಿದ್ದು ವಿಭಿನ್ನವಾಗಿತ್ತು

## ಸಿದ್ದರಾಮಯ್ಯ ಜತೆಗೆ ರಾಜಕೀಯ ಜೀವನ ಕೊನೆ: ಮಹದೇವಪ್ಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಜಕೀಯ ಕ್ಷೇತ್ರದಲ್ಲಿ ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಜತೆಗೆ ಸಾಗಿದ್ದು, ಮುಂದಿನ ದಿನಗಳಲ್ಲಿ ಇಬ್ಬರೂ ಜತೆಯಾಗಿಯೇ ರಾಜಕೀಯ ನಿವೃತ್ತಿ ಪಡೆಯುತ್ತೇವೆ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು.

ಕಲಾ ಗಂಗೋತ್ರಿ ರಂಗ ತಂಡವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಮತ್ತೆ ಮುಖ್ಯಮಂತ್ರಿ’ ನಾಟಕ ಕೃತಿಯನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

‘ನಾನು 1985ರಲ್ಲಿ ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಿದೆ. ಸಿದ್ದರಾಮಯ್ಯ ಅವರು 1983ರಲ್ಲಿಯೇ ಶಾಸಕರಾಗಿದ್ದರು. ನಂತರ ನಾನು ಹಾಗೂ ಅವರು ಜತೆಗೆ ಸಾಗಿದೆವು. ಈಗ ಅವರ ಸಚಿವ ಸಂಪುಟದಲ್ಲಿ ಮಂತ್ರಿಯಾಗಿರುವ ನಾನು, ರಾಜಕೀಯ ಜೀವನವನ್ನು ಅವರ ಜತೆಗೆ ಕೊನೆ ಮಾಡುತ್ತೇನೆ’ ಎಂದರು.

‘ಸಿದ್ದರಾಮಯ್ಯ ಅವರು ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ 257 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದರು. ಆಗ ಅವರು ‘ಇನ್ನೆಂದೂ ಚುನಾವಣೆ ಬೇಡಪ್ಪ ನನಗೆ’ ಅಂತ ಹೇಳಿದ್ದರು. ಅವರ ಮೇಲೆ ಚುನಾವಣೆ ಎಷ್ಟು ಪರಿಣಾಮ ಬೀರಿರಬಹುದು ಎಂಬುದು ತಿಳಿಯುತ್ತದೆ. ಹಿಂದೆ ಯೋಗ್ಯರನ್ನು ನೋಡಿ ಚುನಾವಣೆಗೆ ಟಿಕೆಟ್ ನೀಡಲಾಗುತ್ತಿತ್ತು. ಈಗ ಚುನಾವಣೆ ದುಬಾರಿಯಾಗುತ್ತಿದೆ’ ಎಂದು ಹೇಳಿದರು.

‘ಸಾರ್ವಜನಿಕ ಜೀವನದಲ್ಲಿ ಯೋಗ್ಯರು, ಸಮರ್ಥರು, ವಿವೇಚನೆ ಉಳ್ಳವರು ಕಡಿಮೆಯಾಗುತ್ತಿದ್ದಾರೆ. ಸಾಂಸ್ಕೃತಿಕ ನಾಯಕತ್ವ ನಶಿಸಿ ಹೋಗುತ್ತಿದೆ’ ಎಂದರು.

ಮಾಜಿ ಶಾಸಕ ವೈ.ಎಸ್.ವಿ.ದತ್ತ, ಕವಿ ಎಲ್.ಹನುಮಂತಯ್ಯ, ಸಾಹಿತಿ ಜಿ. ರಾಮಕೃಷ್ಣ, ನಾಟಕಕಾರ ಕೆ.ವೈ.ನಾರಾಯಣಸ್ವಾಮಿ, ನಟ ‘ಮುಖ್ಯಮಂತ್ರಿ’ ಚಂದ್ರು ಉಪಸ್ಥಿತರಿದ್ದರು. ಬಳಿಕ ‘ಮತ್ತೆ ಮುಖ್ಯಮಂತ್ರಿ’ ನಾಟಕ ಪ್ರದರ್ಶನ ಕಂಡಿತು.




# ಸಂಗೀತಕ್ಕೆ ಪ್ರೋತ್ಸಾಹ ಹೆಚ್ಚಲಿ: ಶ್ರೀಷಾನಂದ

## ಬೆಂಗಳೂರು ಗಾಯನ ಸಮಾಜದಲ್ಲಿ ಪ್ರಶಸ್ತಿ ಪ್ರದಾನ, ಸಂಗೀತೋತ್ಸವ ಸಂಪನ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಭಾರತದಲ್ಲಿ ಸಂಗೀತ ಪ್ರಮುಖ ಕಲಾ ಪ್ರಕಾರವಾಗಿ ಬೆಳೆದು ಬಂದಿದ್ದು, ಈ ಕ್ಷೇತ್ರದಲ್ಲಿ ತೊಡಗಿದವರಿಗೆ ಸಂಸ್ಕಾರ ತಾನಾಗಿಯೇ ಬರಲಿದೆ. ಸಂಸ್ಕೃತಿ ಬೆಳೆಸುವ ನಿಟ್ಟಿನಲ್ಲಿ ಸಂಗೀತಕ್ಕೆ ಇನ್ನಷ್ಟು ಪ್ರೋತ್ಸಾಹ ನೀಡಬೇಕು’ ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಷಾನಂದ ಹೇಳಿದರು.

ಬೆಂಗಳೂರು ಗಾಯನ ಸಮಾಜದಲ್ಲಿ ಭಾನುವಾರ ನಡೆದ 55ನೇ ಸಂಗೀತ ಸಮ್ಮೇಳನದಲ್ಲಿ ಹಿರಿಯ ಕಲಾವಿದರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಸಂಗೀತ, ಸಂಸ್ಕೃತಿ ಕ್ಷೇತ್ರದಲ್ಲಿ ವಿಶ್ವದ ಇತರೆ ದೇಶಗಳಿಗಿಂತ ಭಾರತ ಸದಾ ಮುಂಚೂಣಿಯಲ್ಲಿದೆ. ಸಂಗೀತಕ್ಕೆ ವಿಶ್ವ ಮಟ್ಟದಲ್ಲಿ ಮಹತ್ವವಿದೆ. ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. ಭಾರತೀಯರ ಬದುಕಿನ ಭಾಗವೇ ಆಗಿರುವ ಸಂಗೀತಕ್ಕೆ ವ್ಯಕ್ತಿಯನ್ನು ಬದಲು ಮಾಡುವ ಶಕ್ತಿ ಇದೆ’ ಎಂದು ಅವರು ನುಡಿದರು.




ಬೆಂಗಳೂರಿನ ಗಾಯನ ಸಮಾಜದಲ್ಲಿ ಭಾನುವಾರ ನಡೆದ 55ನೇ ಸಂಗೀತ ಸಮ್ಮೇಳನದಲ್ಲಿ ಪದ್ಮಾ ಗುರುದತ್ ಅವರಿಗೆ ಸಂಗೀತ ಕಲಾರತ್ನ ಮತ್ತು ತಿರುಮಲೆ ಶ್ರೀನಿವಾಸ್ ಅವರಿಗೆ ‘ಕರ್ನಾಟಕ ಕಲಾಚಾರ್ಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು —ಪ್ರಜಾವಾಣಿ ಚಿತ್ರ

ಪ್ರಶಸ್ತಿ ಸ್ವೀಕರಿಸಿದ ಹಿರಿಯ ಕಲಾವಿದೆ ಪದ್ಮಾ ಗುರುದತ್ ಮಾತನಾಡಿ, ‘ನಿರಂತರವಾಗಿ ಸಂಗೀತ ಸೇವೆ ಮಾಡಲು ಬೆಂಗಳೂರು ಗಾಯನ ಸಮಾಜದಂತಹ ಹತ್ತಾರು ಸಂಸ್ಥೆಗಳು ಪ್ರೋತ್ಸಾಹ ನೀಡಿವೆ. ಕಲಾವಿದರಿಗೆ ಈ ರೀತಿ ಬೆಂಬಲ ಸಿಗದೇ ಇದ್ದರೆ ಸಾಧನೆ ಮಾಡಲು ಆಗದು’ ಎಂದು ನುಡಿದರು.

ಇದೇ ವೇಳೆ ಸಂಗೀತ ಕಲಾರತ್ನ ಪ್ರಶಸ್ತಿಯನ್ನು ಪದ್ಮಾ ಗುರುದತ್, ಕರ್ನಾಟಕ ಕಲಾಚಾರ್ಯ ಪ್ರಶಸ್ತಿಯನ್ನು ತಿರುಮಲೆ ಶ್ರೀನಿವಾಸ್, ಕಲಾಜ್ಯೋತಿ ಪ್ರಶಸ್ತಿಯನ್ನು ಟಿ.ಎಸ್. ವಸುಂಧರಾ, ಕೆ.ಎಸ್. ನಾಗಭೂಷಣಯ್ಯ, ಈಶ್ವರ ಭಟ್ ಕಾಂಚನ, ಉಪಾಸನಾ ಮೋಹನ್, ಸ್ವರಭೂಷಿಣಿ ಪ್ರಶಸ್ತಿಯನ್ನು ನಳಿನಾ ಮೋಹನ್ ಹಾಗೂ ಸ್ವರಲಿಪಿ ಪ್ರಶಸ್ತಿಯನ್ನು ತೇಜಸ್ವಿನಿ ಹೆಗಡೆ ಅವರಿಗೆ ಪ್ರದಾನ ಮಾಡಲಾಯಿತು.

ಗಾಯನ ಸಮಾಜದ ಅಧ್ಯಕ್ಷ ಎಂ.ಆರ್.ವಿ. ಪ್ರಸಾದ್, ಉಪಾಧ್ಯಕ್ಷ ಟಿ. ಅಚ್ಚುತರಾವ್ ಪದಕಿ, ಕಾರ್ಯದರ್ಶಿ ಕೆ. ನಾಗರಾಜ, ಖಜಾಂಚಿ ಜಿ.ಕೆ.ವೇಣು, ಕಲಾವಿದ ವಿ.ಅನೂರ್ ಅನಂತಕೃಷ್ಣ ಶರ್ಮ ಉಪಸ್ಥಿತರಿದ್ದರು.

## ಆರ್.ಡಿ.ಪಾಟೀಲ ವಿರುದ್ಧ ಮತ್ತೊಂದು ಪ್ರಕರಣ ದಾಖಲು

**ಕಲಬುರಗಿ:** ಪಿಎಸ್‌ಐ ನೇಮಕಾತಿ ಹಗರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ಹಾಗೂ ಕಲಬುರಗಿ ಕೇಂದ್ರ ಕಾರಾಗೃಹದ ವಾರ್ಡರ್ ನಡುವೆ ಇತ್ತೀಚೆಗೆ ‘ಜಟಾಪಟಿ’ ನಡೆದಿದೆ.

ಸುಪ್ರೀಂ ಕೋರ್ಟ್‌ನಿಂದ ಮಧ್ಯಂತರ ಜಾಮೀನು ಪಡೆದಿರುವ ಆರ್.ಡಿ.ಪಾಟೀಲ ಜೈಲಿನಿಂದ ಬಿಡುಗಡೆಯಾಗುವ ಹೊತ್ತಲ್ಲಿ ಈ ಗಲಾಟೆ ನಡೆದಿದೆ ಎಂದು ಮೂಲಗಳು ತಿಳಿಸಿವೆ. ವಾಗ್ವಾದ, ನೂಕಾಟ–ತಳ್ಳಾಟದ ಬೆನ್ನಲ್ಲೇ ಪರಸ್ಪರರು ನೀಡಿದ ದೂರುಗಳನ್ವಯ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

‘ನನಗೆ ಸುಪ್ರೀಂ ಕೋರ್ಟ್‌ನಿಂದ ಮೂರು ವಾರಗಳ ಮಧ್ಯಂತರ ಜಾಮೀನು ಸಿಕ್ಕಿತ್ತು. ಜೈಲಿನಿಂದ ಬಿಡುಗಡೆಯಾಗುವ ವೇಳೆ ವಾರ್ಡರ್ ಶಿವಕುಮಾರ, ನನ್ನ ಮೇಲೆ ಹಲ್ಲೆ ನಡೆಸಿದರು. ದಾಳಿಯಲ್ಲಿ ಎಡ ಕಿವಿಯಿಂದ ರಕ್ತಸ್ರಾವ, ಬೆನ್ನಿಗೆ ಗಾಯವಾಯಿತು. ಅಕ್ರಮ ಬಂಧನ, ಸಾರ್ವಜನಿಕ ಸೇವೆ ದುರುಪಯೋಗ ಮಾಡಿದ್ದು, ಎಫ್‌ಐಆರ್ ದಾಖಲಿಸಿ ಕ್ರಮಕೈಗೊಳ್ಳಬೇಕು’ ಎಂದು ಆರ್.ಡಿ. ಪಾಟೀಲ ದೂರಿನಲ್ಲಿ ಒತ್ತಾಯಿಸಿದ್ದಾರೆ.

‘ಆರ್.ಡಿ.ಪಾಟೀಲ ಜೈಲಿನ ಮುಖ್ಯ ಅಧೀಕ್ಷಕರಿಗೆ ಪತ್ರ ಬರೆದಿದ್ದು, ಅದನ್ನು ತೋರಿಸಲು ಏರುಧ್ವನಿಯಲ್ಲಿ ಅವಕಾಶ ಕೇಳಿ ಅವಸರಿಸಿದ. ನೀವು ಬೇಗ ಪತ್ರ ತೆಗೆದುಕೊಂಡು ಹೋಗದಿದ್ದರೆ, ತಾನೇ ತೆಗೆದುಕೊಂಡು ಹೋಗುವುದಾಗಿ ಮುಖ್ಯ ಜೈಲು ಅಧೀಕ್ಷಕರ ಕಚೇರಿಯತ್ತ ನುಗ್ಗಿದ. ಆತನನ್ನು ತಡೆದೆ. ಅವಾಚ್ಯವಾಗಿ ನಿಂದಿಸಿದ. 3 ವಾರ ಜಾಮೀನು ಸಿಕ್ಕಿದ್ದು, ಆ ಅವಧಿಯಲ್ಲಿ ಸಾಯಿಸುವುದಾಗಿ ಬೆದರಿಕೆ ಹಾಕಿದ್ದಾನೆ’ ಎಂದು ವಾರ್ಡರ್ ಶಿವಕುಮಾರ ದೂರಿನಲ್ಲಿ ಹೇಳಿದ್ದಾರೆ.

### ನಗರದಲ್ಲಿ ಇಂದು

**ಮಕ್ಕಳ ವಚನ ಮೇಳ:** ಅಧ್ಯಕ್ಷತೆ: ನಂಜುಂಡ ಸ್ವಾಮೀಜಿ, ಅತಿಥಿಗಳು: ಎಸ್. ಪಿನಾಕಪಾಣಿ, ವೂಡೇ ಪಿ. ಕೃಷ್ಣ, ಲೋಕಪ್ರಕಾಶ್, ರೇಖಾ ಪ್ರಕಾಶ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

**ಯುವಜನೋತ್ಸವದ ಉದ್ಘಾಟನೆ:** ಅತಿಥಿ: ಜಿ.ಎನ್. ನಾಗಮಣಿ ಶ್ರೀನಾಥ್, ಅಧ್ಯಕ್ಷತೆ: ಟಿ.ಟಿ. ಶ್ರೀನಿವಾಸನ್, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ವಿದ್ಯಾಸಾಗರ ಪ್ರೊ. ಎಂಪಿಎಲ್ ಶಾಸ್ತ್ರಿ ಪಿಯು ಕಾಲೇಜು, ರಾಜಾಜಿನಗರ, ಬೆಳಿಗ್ಗೆ 10

**ಗಾಂಧೀಜಿ ಅವರ ಆತ್ಮಕಥೆ ನೂರರ ಸಂಭ್ರಮ ‘ಯುವ ಜನತೆಗೆ ಗಾಂಧೀಜಿ ಅವರ ವಿಚಾರ ಪ್ರಸ್ತುತತೆ’ ಒಂದು ದಿನದ ರಾಜ್ಯಮಟ್ಟದ ವಿಚಾರಸಂಕಿರಣ:** ಉದ್ಘಾಟನೆ: ಕೀರ್ತನ್ ಕುಮಾರ್ ಎಂ., ಉಪಸ್ಥಿತಿ: ಬಿ.ಕೆ. ಸೋಮಶೇಖರಪ್ಪ, ಎಂ.ಆರ್. ಸ್ವಾಮಿ, ಅಧ್ಯಕ್ಷತೆ: ಬಿ.ಎ. ವಾಸು, ‘ದೇಶದ ಏಕತೆಯ ಕುರಿತು ಗಾಂಧೀಜಿ ನಿಲುವುಗಳು’ ಗೋಷ್ಠಿ: ಅಮರೇಂದ್ರ ಹೊಲ್ಲಂಬಳ್ಳಿ, ‘ಶಿಕ್ಷಣ ಮತ್ತು ಗಾಂಧೀಜಿ’ ಗೋಷ್ಠಿ: ಅಬಿದಾ ಬೇಗಂ, ‘ಗಾಂಧಿ–ಜನಸಾಮಾನ್ಯರ ನಾಯಕ’ ಸಿ.ಜಿ. ಲಕ್ಷ್ಮೀಪತಿ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್, ಸ್ಥಳ: ರತನ್ ಟಾಟಾ ಸಭಾಂಗಣ, ಬೆಳಿಗ್ಗೆ 10.30

**ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..**
**nagaradalli_indu@prajavani.co.in**



# ಭಗ್ನಪ್ರೇಮಿ ಮಗನನ್ನು ಹೇಗೆ ಸಂತೈಸಲಿ?



**ಸಮಾಧಾನ**

**ಡಾ. ಡಿ.ಎಂ. ಹೆಗಡೆ,** ಸಮಾಲೋಚಕ

- **ನಮ್ಮ ಒಬ್ಬನೇ ಮಗ ಎಂಜಿನಿಯರಿಂಗ್ ಆರನೇ ಸೆಮಿಸ್ಟರ್ ಓದುತ್ತಿದ್ದಾನೆ. ಇತ್ತೀಚೆಗೆ ತುಂಬಾ ಡಲ್ ಆಗಿ ಇರುತ್ತಾನೆ. ಪ್ರೀತಿಸಿದ ಹುಡುಗಿ ಕೈಕೊಟ್ಟಳು ಅಂತಾನೆ. ಕಾಲೇಜಿಗೆ ಹೋಗುತ್ತಿಲ್ಲ. ಸಾಯಬೇಕು ಅಂತಿರ್ತಾನೆ. ಎಷ್ಟು ಹೊತ್ತಿಗೋ ತಿನ್ನುತ್ತಾನೆ, ಅದೆಷ್ಟು ಹೊತ್ತಿಗೋ ಮಲಗುತ್ತಾನೆ. ಮೊಬೈಲ್ ನೋಡುತ್ತಿರುತ್ತಾನೆ. ಮೂರು ದಿನವಾದರೂ ಸ್ನಾನ ಮಾಡುವುದಿಲ್ಲ. ಸಮಾಧಾನದಿಂದ ಮಾತನಾಡಿಸಲು ಪ್ರಯತ್ನಿಸಿದರೆ ರೇಗುತ್ತಾನೆ ಅಥವಾ ಅಳುತ್ತಾನೆ. ಏನು ಮಾಡಬೇಕೋ ತೋಚುತ್ತಿಲ್ಲ. ಪರಿಹಾರ ತಿಳಿಸಬಹುದೇ?**

**ಶೈಲಾ ರಾಮಚಂದ್ರ,** ಸಾಗರ

ಹದಿಹರೆಯದ ಮಗ ಹೀಗೆ ಮಾಡುತ್ತಿದ್ದರೆ ಎಂಥವರಿಗಾದರೂ ಚಿಂತೆಯಾಗುತ್ತದೆ. ಇತ್ತೀಚೆಗೆ ಇಂಥ ಪ್ರಕರಣಗಳು ಹೆಚ್ಚಾಗುತ್ತಿವೆ. ಸಣ್ಣಪುಟ್ಟ ಕೊರತೆಯನ್ನು ಸಹ ಎದುರಿಸಲಾಗದ ಯುವಕರು ಕಂಗಾಲಾಗುತ್ತಾರೆ, ಕುಗ್ಗುತ್ತಾರೆ, ಅಭಾವ ವೈರಾಗ್ಯದಿಂದ ಮಾತನಾಡುತ್ತಾರೆ. ಜೀವನ ಮುಗಿದೇಹೋಯಿತು ಎನ್ನುವ ಹಾಗೆ ಕುಸಿಯುತ್ತಾರೆ. ಬೇಡ, ಇಲ್ಲ, ಆಗೋದಿಲ್ಲ, ಸಿಗೋದಿಲ್ಲ ಅನ್ನುವಂತಹ ಸ್ಥಿತಿಯನ್ನು ಸ್ವೀಕರಿಸಲಾಗದ ಮನಃಸ್ಥಿತಿಯಲ್ಲಿ ಇರುತ್ತಾರೆ. ಜೀವನದಲ್ಲಿ ನಮಗೆ ಬೇಕು ಬೇಕಾದ್ದೆಲ್ಲವೂ ಬೇಕು ಬೇಕಾದಾಗ ಸಿಗುವುದಿಲ್ಲ. ನಮಗೆ ಸಿಕ್ಕಿರುವುದನ್ನು ಸಿಕ್ಕಷ್ಟು ಸ್ವೀಕರಿಸಬೇಕು. ಅಷ್ಟರಲ್ಲಿ ಖುಷಿ ಪಡಬೇಕು. ಜೀವನ ಎಂದರೆ ಹೀಗೆಯೇ. ಇಷ್ಟನ್ನು ಅರ್ಥ ಮಾಡಿಕೊಳ್ಳುವ ವ್ಯವಧಾನ ಅವರಿಗೆ ಇರುವುದಿಲ್ಲ.

ಆಕೆ ಇವನನ್ನು ಮೆಚ್ಚುವುದಕ್ಕೆ, ಜೊತೆಗೆ ಇರುವುದಕ್ಕೆ ಹಾಗೂ ಈಗ ದೂರ ಹೋಗುವುದಕ್ಕೆ ಎಲ್ಲಕ್ಕೂ ಅವಳದೇ ಆದ ಒಂದಿಷ್ಟು ಕಾರಣಗಳು ಇರಬಹುದು. ಹದಿಹರೆಯದ ಯುವಕರಲ್ಲಿ ಇಂಥ ಆಕರ್ಷಣೆ, ವಿಕರ್ಷಣೆಗಳು ನಡೆಯುತ್ತಾ ಇರುತ್ತವೆ. ಅವನು ಸೂಕ್ಷ್ಮಸ್ವಭಾವದ ಹುಡುಗ. ಹಾಗಾಗಿ, ಅವನ ಮನಸ್ಸಿನಲ್ಲಿ ಪ್ರೀತಿಯ ಭಾವನೆ ಆಳವಾಗಿ ಬೇರೂರಿದೆ. ಇಂಥ ವಿಷಯದಲ್ಲಿ ಹುಡುಗಿಯರಿಗಿಂತ ಹುಡುಗರು ಹೆಚ್ಚು ಮೃದುಸ್ವಭಾವದವರಾಗಿರುತ್ತಾರೆ. ಇಂಥ ಹಸಿಬಿಸಿ ಸಂಬಂಧದಲ್ಲಿ ವ್ಯತ್ಯಾಸವಾದಾಗ ಆಘಾತಕ್ಕೊಳಗಾಗುತ್ತಾರೆ.

ಇಂಥ ವಿಷಯದಲ್ಲಿ ನಿಮ್ಮ ಮಗನ ಗೆಳೆಯರು ಉಪಯೋಗಕ್ಕೆ ಬರುತ್ತಾರೆ. ಅವರನ್ನು ಕರೆದು ಮಾತನಾಡಿಸಿ. ನಿಮ್ಮ ಮಗನ ಜೊತೆಗೆ ಅವನ ಆತ್ಮೀಯರು ಇರುವಂತೆ, ಮಾತನಾಡುವಂತೆ, ಜೊತೆಗೆ ಹೊರಗೆ ಕರೆದುಕೊಂಡು ಹೋಗುವಂತೆ ಕೇಳಿಕೊಳ್ಳಿ. ಅವನು ಇಡೀ ದಿನ ಮನೆಯಲ್ಲಿ ಇರುವುದು, ತನ್ನ ರೂಮನ್ನೇ ಪ್ರಪಂಚವನ್ನಾಗಿ ಮಾಡಿಕೊಂಡಿರುವುದು ಸರಿಯಲ್ಲ.

ನೀವೂ ಅವನ ಜೊತೆಗೆ ವಿಶ್ವಾಸದಿಂದ ಮಾತನಾಡಿ. ನಿಮ್ಮ ಜೀವನದ ಸೋಲುಗಳ ಬಗ್ಗೆ ಮನಸ್ಸು ಬಿಚ್ಚಿ ಮಾತನಾಡಿ. ತಿರಸ್ಕಾರವನ್ನು ಎದುರಿಸಿ ಮುನ್ನುಗ್ಗಿದರೆ ಮಾತ್ರ ಮುಂದೊಂದು ದಿನ ಪುರಸ್ಕಾರವನ್ನು ಗಳಿಸಿಕೊಳ್ಳಲಿಕ್ಕೆ ಸಾಧ್ಯ. ನಿಮ್ಮ ಬದುಕಿನ ಹೋರಾಟ, ಮಾನ, ಅವಮಾನಗಳನ್ನು ಹೇಳಿಕೊಳ್ಳುವುದರಿಂದ ಅವನಿಗೆ ಒಂದಿಷ್ಟು ಬೆಳಕು ಸಿಗಬಹುದು. ಅವನ ದಿನಚರಿ ಸರಿಯಾಗುವಂತೆ ಮನವೊಲಿಸಿ. ಬೆಳಿಗ್ಗೆ ಬೇಗ ಎಬ್ಬಿಸಿ, ವಾಕಿಂಗ್‌ಗೆ ಕರೆದುಕೊಂಡು ಹೋಗಿ. ಜಿಮ್ ಅಥವಾ ಯೋಗಾಸನದ ತರಗತಿಗೆ ಸೇರುವಂತೆ ಪ್ರೋತ್ಸಾಹಿಸಿ. ಒತ್ತಾಯ ಮಾಡಿಯಾದರೂ ಸ್ನಾನ ಮಾಡಿಸಿ. ನಿನ್ನ ಬದುಕನ್ನು ನೀನು ಸರಿಯಾಗಿ ಇಟ್ಟುಕೊಂಡರೆ, ಇನ್ನೂ ಒಳ್ಳೆಯ, ಚಂದನೆಯ ಹುಡುಗಿ ಸಿಗುತ್ತಾಳೆ ಎಂದು ವಿವರಿಸಿ. ಅವನಿಗೆ ಯಾವಾಗಲೂ ಪಾಲಕರ ಆಸರೆ ಇದ್ದೇ ಇರುತ್ತದೆ ಎನ್ನುವುದನ್ನು ಬಾಯಿಬಿಟ್ಟು ಹೇಳಿ. ಅವನೆದುರಿಗೆ ನೀವು ಸೋತವರಂತೆ, ಹತಾಶರಾದವರಂತೆ ಇರಬೇಡಿ.

ಒಂದು ವಾರದಮಟ್ಟಿಗಾದರೂ ಬೇರೆ ಊರಿಗೆ, ಅವನಿಷ್ಟದ ಸಂಬಂಧಿಕರ ಮನೆಗೆ ಕರೆದುಕೊಂಡು ಹೋಗಿದ್ದು ಬನ್ನಿ. ಅವನ ಜೊತೆಗೆ ಹಳೆಯ ಫೋಟೊ ಆಲ್ಬಮ್‌ಗಳನ್ನು ನೋಡಿ. ಅವನ ಬೆಳವಣಿಗೆಯ ದಿನಗಳಲ್ಲಿ ನಿಮ್ಮೆಲ್ಲರ ಸಂತೋಷದ ಕ್ಷಣಗಳನ್ನು ನೆನಪಿಸಿಕೊಂಡು ಮಾತನಾಡಿ.

ಇಷ್ಟಾಗಿಯೂ ಅವನಲ್ಲಿ ನಿರೀಕ್ಷಿಸಿದಷ್ಟು ಸಕಾರಾತ್ಮಕವಾದ ಬದಲಾವಣೆ ಕಾಣದಿದ್ದರೆ, ತಜ್ಞವೈದ್ಯರನ್ನು ಭೇಟಿಯಾಗುವುದು ಒಳ್ಳೆಯದು.




ಕೋಲಾರ ಜಿಲ್ಲೆಯ ಮಾಸ್ತಿಯಲ್ಲಿ ದಾನಿ ನೆರವಿನಿಂದ ಮರು ನಿರ್ಮಾಣಗೊಂಡಿರುವ ಕರ್ನಾಟಕ ಪಬ್ಲಿಕ್ ಶಾಲೆ

| 308 | 700 | ₹4 ಕೋಟಿ |
|---|---|---|
| ಪ್ರಸ್ತುತ ಇರುವ ಕೆಪಿಎಸ್ | 2026–27ನೇ ಸಾಲಿನಿಂದ ಆರಂಭವಾಗಲಿರುವ ಕೆಪಿಎಸ್ | ಒಂದು ಕೆಪಿಎಸ್ ಸ್ಥಾಪನೆಗೆ ನಿಗದಿ ಮಾಡಿರುವ ಮೊತ್ತ |

# ಕರ್ನಾಟಕ ಪಬ್ಲಿಕ್ ಶಾಲೆ ಹೆಚ್ಚುತ್ತಿದೆ ಮಕ್ಕಳ ಕಲರವ

- ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ ನಗರದ ಸೆರಗಿನಂಚಿನ ಪಿಳ್ಳಂಗೆರೆಯ ಸರ್ಕಾರಿ ಶಾಲೆಯಲ್ಲಿ ಮಕ್ಕಳ ದಾಖಲಾತಿ ಕಡಿಮೆಯಾಗಿ, ಶಾಲೆಯು ಬಾಗಿಲು ಮುಚ್ಚುವ ಹಂತಕ್ಕೆ ಬಂದಿತ್ತು. ಬಹುತೇಕ ಮಕ್ಕಳು ಶಾಲೆ ತೊರೆದು ನಗರದ ಖಾಸಗಿ ಶಾಲೆಗಳಿಗೆ ಸೇರಿದ್ದರು. ಅತ್ಯಂತ ಹಳೆಯ ಸರ್ಕಾರಿ ಶಾಲೆ ಇನ್ನೇನು ಬಾಗಿಲು ಮುಚ್ಚುತ್ತಿದೆ ಎನ್ನುವಾಗ ಸರ್ಕಾರ ಆ ಊರಿಗೆ ಕರ್ನಾಟಕ ಪಬ್ಲಿಕ್ ಶಾಲೆಯನ್ನು (ಕೆಪಿಎಸ್) ಮಂಜೂರು ಮಾಡಿತು. ಈಗ ಪರಿಸ್ಥಿತಿ ತಿರುವುಮುರುವಾಗಿದೆ. ಹಿಂದೆ ಶಾಲೆ ತೊರೆದ ಮಕ್ಕಳು ಮರಳಿ ಬಂದಿದ್ದಾರೆ. ಪ್ರತಿವರ್ಷ ಖಾಸಗಿ ಶಾಲೆ ತೊರೆದು ಈ ಸರ್ಕಾರಿ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ. 2025–26ನೇ ಸಾಲಿನಲ್ಲಿ 600ಕ್ಕೂ ಹೆಚ್ಚು ಮಕ್ಕಳು ಇಲ್ಲಿ ಕಲಿಯುತ್ತಿದ್ದಾರೆ.

ಇದು ಪಿಳ್ಳಂಗೆರೆ ಶಾಲೆಯೊಂದರ ಕಥೆಯಲ್ಲ. ರಾಜ್ಯದಲ್ಲಿ ಈಗಾಗಲೇ ಆರಂಭವಾಗಿರುವ 308 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಬಹುತೇಕ ಶಾಲೆಗಳು ಇಂತಹ ಯಶಸ್ಸಿನ ಪಯಣ ಆರಂಭಿಸಿವೆ. ಬೆಂಗಳೂರು ಉತ್ತರದ ಕೃಷ್ಣಾನಂದ ನಗರ, ಬೆಂಗಳೂರು ದಕ್ಷಿಣದ ಆಡುಗೋಡಿ, ಕೋಲಾರ ಜಿಲ್ಲೆ ಮಾಲೂರಿನ ಮಾಸ್ತಿ, ರಾಮನಗರ ಜಿಲ್ಲೆ ಚನ್ನಪಟ್ಟಣದ ಹೊಂಗನೂರು, ಮೈಸೂರು ಜಿಲ್ಲೆ ಟ.ನರಸೀಪುರದ ಮೂಗೂರು, ಬೆಳಗಾವಿಯ ರಾಮತೀರ್ಥ ನಗರ, ಯಾದಗಿರಿಯ ಗಜರ್‌ಕೋಟ್ ಸೇರಿದಂತೆ ನೂರಾರು ಶಾಲೆಗಳಲ್ಲಿ ಮಕ್ಕಳ ಕಲರವ ಹೆಚ್ಚುತ್ತಾ ಸಾಗಿದೆ.



> “ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ರಾಜ್ಯದಲ್ಲಿ ಬಹಳಷ್ಟು ಬೇಡಿಕೆ ಇದ್ದು, ಹಂತಹಂತವಾಗಿ 6 ಸಾವಿರ ಶಾಲೆಗಳನ್ನು ಸ್ಥಾಪಿಸಲಾಗುತ್ತದೆ.
>
> **ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ

ಶಾಲಾ ಶಿಕ್ಷಣ ಇಲಾಖೆಯು 2026–27ನೇ ಶೈಕ್ಷಣಿಕ ವರ್ಷದ ಆರಂಭದ ವೇಳೆಗೆ, ಈಗ ಇರುವುದೂ ಸೇರಿದಂತೆ ಸುಮಾರು ಒಂದು ಸಾವಿರ ಕೆಪಿಎಸ್ ಹೊಂದುವ ಗುರಿ ಇಟ್ಟುಕೊಂಡಿದ್ದು, 15 ಲಕ್ಷ ಮಕ್ಕಳು ಈ ಶಾಲೆಗಳ ತೆಕ್ಕೆಗೆ ಬರಲಿದ್ದಾರೆ. ರಾಜ್ಯದ ಆರು ಸಾವಿರ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ತಲಾ ಒಂದು ಶಾಲೆ ತೆರೆಯುವ ಯೋಜನೆ ರೂಪುಗೊಂಡಿದೆ. ಈ ಯೋಜನೆ ಅನುಷ್ಠಾನಗೊಂಡರೆ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಕಲಿಯುವ ಮಕ್ಕಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಲಿದೆ.

**ಕೆಪಿಎಸ್‌ನತ್ತ ಆಕರ್ಷಣೆ ಏಕೆ?:** ಮಕ್ಕಳನ್ನು ಪೋಷಕರು ಎಲ್‌ಕೆಜಿ, ಯುಕೆಜಿಗೆ ಖಾಸಗಿ ಶಾಲೆಗೆ ಸೇರಿಸುತ್ತಿದ್ದು, ಸಹಜವಾಗಿಯೇ ಒಂದನೇ ತರಗತಿಗೆ ಆ ಶಾಲೆಯಲ್ಲೇ ಮುಂದುವರಿಸುತ್ತಿದ್ದರು. ಇದನ್ನು ಮನಗಂಡ ಸರ್ಕಾರವು ಸರ್ಕಾರಿ ಶಾಲೆಗಳಲ್ಲೂ ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಿಸುವ ಮಹತ್ವದ ನಿರ್ಧಾರ ತೆಗೆದುಕೊಂಡಿತು. ಅಷ್ಟೇ ಅಲ್ಲದೆ, ದ್ವಿಭಾಷಾ ಮಾಧ್ಯಮ (ಕನ್ನಡ, ಇಂಗ್ಲಿಷ್) ಬೋಧನೆಗೆ ಅವಕಾಶ ಮಾಡಿಕೊಟ್ಟಿತು.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ 1,008 ಶಾಲೆಗಳಿಗೆ ಕಳೆದ ವರ್ಷ ದ್ವಿಭಾಷಾ ಮಾಧ್ಯಮಕ್ಕೆ ಅನುಮತಿ ನೀಡಿದ ಕೆಲ ದಿನಗಳಲ್ಲೇ 42,000 ಮಕ್ಕಳು ಪೂರ್ವ ಪ್ರಾಥಮಿಕಕ್ಕೆ ಪ್ರವೇಶ ಪಡೆದಿದ್ದರು. ಪ್ರಸಕ್ತ ಶೈಕ್ಷಣಿಕ ಸಾಲಿನಿಂದ 4,137 ಶಾಲೆಗಳಲ್ಲಿ ಒಂದನೇ ತರಗತಿಯಿಂದ ದ್ವಿಭಾಷಾ ಮಾಧ್ಯಮ ತರಗತಿ ಆರಂಭಿಸಲು ಅನುಮತಿ ನೀಡಿದ್ದು, ಪೂರ್ವ ಪ್ರಾಥಮಿಕ ಶಾಲೆಗೆ ಪ್ರವೇಶ ಪಡೆದ ಮಕ್ಕಳ ಸಂಖ್ಯೆ ಒಂದು ಲಕ್ಷ ದಾಟಿದೆ.

‘2025–26ನೇ ಸಾಲಿನಿಂದ ಎಲ್‌ಕೆಜಿ, ಯುಕೆಜಿ ಆರಂಭವಾಗಿದೆ. ಮೊದಲ ವರ್ಷವೇ ನಿಗದಿಗಿಂತ ಹೆಚ್ಚು ಮಕ್ಕಳು ಬಂದಿದ್ದಾರೆ. ಸಹಜವಾಗಿ ಅವರೆಲ್ಲರೂ ಒಂದನೇ ತರಗತಿಗೆ ಮುಂದುವರಿಯುತ್ತಾರೆ. ಇದರಿಂದ ಸರ್ಕಾರಿ ಶಾಲೆಗಳು ಬಲಗೊಳ್ಳುತ್ತವೆ’ ಎನ್ನುತ್ತಾರೆ ಪಿಳ್ಳಂಗೆರೆ ಕರ್ನಾಟಕ ಪಬ್ಲಿಕ್ ಶಾಲೆಯ ಕನ್ನಡ ಶಿಕ್ಷಕ ವೈ.ಎಂ.ಧರ್ಮಪ್ಪ. ‘ಸರ್ಕಾರದ ಅನುದಾನದ ಜತೆಗೆ ದಾನಿಗಳೂ ಕೈಜೋಡಿಸಿದ್ದಾರೆ. ಕೊಠಡಿಗಳನ್ನು ಕಟ್ಟಿಕೊಡುತ್ತಿದ್ದಾರೆ. ಭವಿಷ್ಯದ ಶಿಕ್ಷಣದ ದಾರಿದೀಪವಾಗಿ ಕೆಪಿಎಸ್ ಕಾಣುತ್ತಿದೆ ಎನ್ನುತ್ತಾರೆ’ ಎಸ್‌ಡಿಎಂಸಿ ಅಧ್ಯಕ್ಷ ಎ.ನಾಗರಾಜ್.

ಕೆಪಿಎಸ್‌ನ ಒಂದೇ ಕ್ಯಾಂಪಸ್‌ನಲ್ಲಿ ಎಲ್‌ಕೆಜಿಯಿಂದ ಪಿಯುವರೆಗೂ ವಿದ್ಯಾಭ್ಯಾಸ ಮಾಡಬಹುದು. ಅಂದರೆ, ನಾಲ್ಕು ವರ್ಷದ ಒಂದು ಮಗು ಕೆಪಿಎಸ್‌ಗೆ ಪ್ರವೇಶ ಪಡೆದರೆ, ಅದು 18 ವರ್ಷ ತುಂಬುವವರೆಗೂ ಒಂದೇ ಕ್ಯಾಂಪಸ್‌ನಲ್ಲಿ ಶಿಕ್ಷಣ ಪಡೆಯಲಿದೆ. ಇಂತಹ ಅವಕಾಶ ಪೋಷಕರನ್ನು ಆಕರ್ಷಿಸಿದೆ.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಪ್ರಕಾರ, ಕೆಪಿಎಸ್‌ಗೆ ಸೇರುವ ಮಕ್ಕಳಿಗೆ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಮಾಧ್ಯಮ ಲಭ್ಯವಾಗುತ್ತದೆ. ಅದೇ ವರ್ಷದಿಂದ ಕಂಪ್ಯೂಟರ್ ಶಿಕ್ಷಣ, ಇಂಗ್ಲಿಷ್ ಭಾಷಾ ಸಂವಹನ ಕಲಿಸಲಾಗುತ್ತದೆ. 7ನೇ ತರಗತಿಯಿಂದ ಪ್ರತಿ ಮಗುವಿಗೂ ಪಠ್ಯದ ಜತೆಗೆ ಕೌಶಲ ಕಲಿಕೆಗೆ ವ್ಯವಸ್ಥೆ ಮಾಡಲಾಗಿದೆ. ಭವಿಷ್ಯದಲ್ಲಿ ಕೌಶಲಾಧಾರಿತ ಉದ್ಯೋಗಗಳನ್ನು ಪಡೆಯಲು ಈ ಕ್ರಮ ನೆರವಾಗಲಿದೆ.



ಬೆಂಗಳೂರಿನ ಕೃಷ್ಣಾನಂದ ನಗರ, ನಂದಿನಿ ಬಡಾವಣೆಯ ಕರ್ನಾಟಕ ಪಬ್ಲಿಕ್ ಶಾಲೆಯ ಮಕ್ಕಳು

### ಉಚಿತ ಶಿಕ್ಷಣ, ಪಿಯುಗೂ ಬಿಸಿಯೂಟ

ಕರ್ನಾಟಕ ಪಬ್ಲಿಕ್ ಶಾಲೆಗೆ ಪ್ರವೇಶ ಪಡೆಯುವ ಮಕ್ಕಳಿಗೆ ಇತರ ಸರ್ಕಾರಿ ಶಾಲೆಗಳಲ್ಲಿ ಇರುವಂತೆ ಮಧ್ಯಾಹ್ನ ಬಿಸಿಯೂಟ, ಮೊಟ್ಟೆ, ಹಾಲು, ರಾಗಿ ಮಾಲ್ಟ್, ಪಠ್ಯಪುಸ್ತಕ, ಶೂ, ಸಮವಸ್ತ್ರ ಎಲ್ಲವನ್ನೂ ಉಚಿತವಾಗಿ ನೀಡಲಾಗುತ್ತಿದೆ. 2026–27ನೇ ಸಾಲಿನಿಂದ ಕೆಪಿಎಸ್‌ನ ಪಿಯು ಮಕ್ಕಳಿಗೂ ಮಧ್ಯಾಹ್ನದ ಬಿಸಿಯೂಟ ನೀಡಲು ಸರ್ಕಾರ ನಿರ್ಧರಿಸಿದೆ.

### ಶಿಕ್ಷಕರ ನೇಮಕಕ್ಕೆ ಆದ್ಯತೆ

ಶಾಲಾ ಶಿಕ್ಷಣ ಇಲಾಖೆಯಲ್ಲಿ ಸುಮಾರು 63 ಸಾವಿರ ಶಿಕ್ಷಕರ ಕೊರತೆ ಇತ್ತು. ಕೋರ್ಟ್ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಿಕೊಂಡು, 2024–25ನೇ ಸಾಲಿನ ಆರಂಭದ ವೇಳೆಗೆ 13 ಸಾವಿರ ಶಿಕ್ಷಕರನ್ನು ಭರ್ತಿ ಮಾಡಲಾಗಿತ್ತು. ಕಲ್ಯಾಣ ಕರ್ನಾಟಕ ಭಾಗಕ್ಕೆ 5,000 ಶಿಕ್ಷಕರೂ ಸೇರಿದಂತೆ ಇನ್ನೂ 18,000 ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.

ಕೆಪಿಎಸ್‌ನಲ್ಲಿ ವಿಷಯವಾರು ಶಿಕ್ಷಕರ ಕೊರತೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಬೋಧನೆಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮವಾಗಿ ಒಂದೇ ಕಂತಿನಲ್ಲಿ 51 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

## ವಿದ್ಯಾರ್ಥಿ ವೇತನ ಕೈಪಿಡಿ

### ನಿಕಾನ್ ವಿದ್ಯಾರ್ಥಿವೇತನ

ನಿಕಾನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ತನ್ನ ಸಿಎಸ್‌ಆರ್ ಉಪಕ್ರಮದಡಿ ಈ ವಿದ್ಯಾರ್ಥಿವೇತನ ನೀಡುತ್ತದೆ.

**ಅರ್ಹತೆ:** 12ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಕನಿಷ್ಠ 3 ತಿಂಗಳ ಅವಧಿಯ ವೃತ್ತಿಪರ ಛಾಯಾಗ್ರಹಣಕ್ಕೆ ಸಂಬಂಧಿಸಿದ ಕೋರ್ಸ್‌ಗೆ ದಾಖಲಾಗಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷ ಮೀರಿರಬಾರದು. ವಿದ್ಯಾರ್ಥಿವೇತನದ ಗರಿಷ್ಠ ಮೊತ್ತ ₹ 1 ಲಕ್ಷದವರೆಗೆ.

**ಸೂಚನೆ:** ವಿದ್ಯಾರ್ಥಿಯು ಸಲ್ಲಿಸಿದ ಶುಲ್ಕದ ಮಾಹಿತಿಯ ಆಧಾರದ ಮೇಲೆ ವಿದ್ಯಾರ್ಥಿವೇತನದ ಮೊತ್ತವನ್ನು ನಿರ್ಧರಿಸಲಾಗುತ್ತದೆ.

**ಅರ್ಜಿ ಸಲ್ಲಿಸಲು ಕೊನೇ ದಿನ:** 28-11-2025
**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್
**ಮಾಹಿತಿಗೆ:** Short Url: www.b4s.in/praja/NIKON13

### ಹೆಣ್ಣುಮಕ್ಕಳಿಗಾಗಿ ಬಿರ್ಲಾ ಸ್ಕಾಲರ್‌ಷಿಪ್

ಆದಿತ್ಯ ಬಿರ್ಲಾ ಕ್ಯಾಪಿಟಲ್ ಫೌಂಡೇಷನ್ ಈ ವಿದ್ಯಾರ್ಥಿ ವೇತನ ನೀಡುತ್ತದೆ.

**ಅರ್ಹತೆ:** ಭಾರತದಾದ್ಯಂತ ವಿದ್ಯಾರ್ಥಿನಿಯರಿಗೆ ಲಭ್ಯವಿದೆ. 9ರಿಂದ 12ನೇ ತರಗತಿಯವರೆಗಿನ ಹುಡುಗಿಯರು, ಸಾಮಾನ್ಯ ಪದವಿ (3 ವರ್ಷ), ವೃತ್ತಿಪರ ಪದವಿ (4 ವರ್ಷ) ಅಥವಾ ಐಐಟಿ, ಎನ್‌ಐಟಿ, ಐಐಎಂನಂತಹ ಪ್ರಮುಖ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿ/ವೃತ್ತಿಪರ ಕೋರ್ಸ್‌ಗೆ ದಾಖಲಾಗಿರಬೇಕು.

ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯ ₹ 6 ಲಕ್ಷ ಮೀರಿರಬಾರದು.

**ಆರ್ಥಿಕ ಸಹಾಯ:** ₹ 60,000ದವರೆಗೆ.
**ಅರ್ಜಿ ಸಲ್ಲಿಸಲು ಕೊನೇ ದಿನ:** 07-12-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
**ಮಾಹಿತಿಗೆ:** Short Url: www.b4s.in/praja/ABCC13

### ರೋಲ್ಸ್-ರಾಯ್ಸ್ ಸ್ಕಾಲರ್‌ಷಿಪ್

ರೋಲ್ಸ್-ರಾಯ್ಸ್ ಇಂಡಿಯಾ ಸಂಸ್ಥೆಯು ಎಂಜಿನಿಯರಿಂಗ್ ವಿದ್ಯಾರ್ಥಿನಿಯರಿಗಾಗಿ ನೀಡುವ ‘ರೋಲ್ಸ್-ರಾಯ್ಸ್ ವಿಂಗ್ಸ್‌ಫಾರ್‌ಹರ್’ ವಿದ್ಯಾರ್ಥಿವೇತನ ಇದಾಗಿದೆ.

**ಅರ್ಹತೆ:** ಏರೋಸ್ಪೇಸ್, ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್, ಮರೈನ್ ಮೊದಲಾದ ವಿಭಾಗಗಳಲ್ಲಿ ಎಂಜಿನಿಯರಿಂಗ್ ಕಲಿಯುತ್ತಿರುವ 1, 2 ಅಥವಾ 3ನೇ ವರ್ಷದ ವಿದ್ಯಾರ್ಥಿನಿಯರು. ಎಐಸಿಟಿಇ ಮಾನ್ಯತೆ ಪಡೆದ ಕಾಲೇಜಿನಲ್ಲಿ ಓದುತ್ತಿರಬೇಕು. ಸರ್ಕಾರಿ ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿನಿಯರಿಗೆ ಆದ್ಯತೆ ನೀಡಲಾಗುತ್ತದೆ. ಅರ್ಜಿದಾರರು ತಮ್ಮ 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ಕನಿಷ್ಠ ಶೇ 60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯವು ₹ 4 ಲಕ್ಷ ಮೀರಿರಬಾರದು. ಅಂಗವಿಕಲರು, ಏಕಪೋಷಕರ ಮಕ್ಕಳು, ಅನಾಥ ಮಕ್ಕಳಿಗೆ ಆದ್ಯತೆ.

**ಆರ್ಥಿಕ ನೆರವು:** ₹ 35,000
**ಅರ್ಜಿ ಸಲ್ಲಿಸಲು ಕೊನೇ ದಿನ:** 30-11-2025
**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್
**ಮಾಹಿತಿಗೆ:** Short Url:www.b4s.in/praja/UNSC4

‘ಶಿಕ್ಷಣ ಪುರವಣಿ’ಗೆ ಬರಹಗಳನ್ನು ಕಳುಹಿಸಬಹುದಾದ ಇ–ಮೇಲ್ ವಿಳಾಸ: shikshana@prajavani.co.in

## ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

## ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

### ಸಮಾಜವಿಜ್ಞಾನ

**ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು**

**ಪ್ರಶ್ನೋತ್ತರ:–**

**15) ಯಾವ ಒಪ್ಪಂದದ ಕಾರಣದಿಂದ ಮೊದಲ ಆಂಗ್ಲೋ ಮೈಸೂರು ಯುದ್ಧ ಅಂತ್ಯವಾಯಿತು?**
**ಉತ್ತರ:–** ಮದ್ರಾಸ್ ಒಪ್ಪಂದ

**16) ಮದ್ರಾಸ್ ಒಪ್ಪಂದ ಯಾವ ವರ್ಷ ಆಯಿತು?**
**ಉತ್ತರ:–** 1769ರಲ್ಲಿ

**17) ಮೊದಲನೆಯ ಆಂಗ್ಲೋ ಮೈಸೂರು ಯುದ್ಧದ ಬಗ್ಗೆ ಬರೆಯಿರಿ**
**ಉತ್ತರ:** ಮೊದಲನೆಯ ಆಂಗ್ಲೋ ಮೈಸೂರು ಯುದ್ಧವು ಕ್ರಿ.ಶ. 1767ರಲ್ಲಿ ಪ್ರಾರಂಭವಾಗಿ 1769ರಲ್ಲಿ ಅಂತ್ಯಗೊಂಡಿತು.

ದಕ್ಷಿಣ ಭಾರತದಲ್ಲಿ ಹೈದರಾಲಿ ಗಳಿಸುತ್ತಿದ್ದ ರಾಜಕೀಯ ಪ್ರಾಬಲ್ಯ ಬ್ರಿಟಿಷರು, ಹೈದರಾಬಾದಿನ ನಿಜಾಮ ಮತ್ತು ಮರಾಠರಲ್ಲಿ ರಾಜಕೀಯ ಅಸಹನೆ ಮೂಡಿಸಿತು. ಹೀಗಾಗಿ ಬ್ರಿಟಿಷರು ತಮ್ಮ ಸಾಮ್ರಾಜ್ಯಶಾಹಿ ಧೋರಣೆಗೆ ಮುಳ್ಳಾಗಿ ಪರಿಣಮಿಸಿದ್ದ ಹೈದರಾಲಿಯನ್ನು ರಾಜಕೀಯವಾಗಿ ಮಣಿಸಲು ಕುತಂತ್ರ ನೀತಿಗಳನ್ನು ಮಾಡಲಾರಂಭಿಸಿದರು. ಮರಾಠರ ದಾಳಿಯಿಂದ ರಾಜಕೀಯ ಮತ್ತು ಆರ್ಥಿಕ ನಷ್ಟವನ್ನು ಅನುಭವಿಸಿದ ಹೈದರಾಲಿಯು ಮರಾಠರು ಮತ್ತು ನಿಜಾಮನನ್ನು ತನ್ನೆಡೆಗೆ ಸೆಳೆದುಕೊಳ್ಳಲು ಯತ್ನಿಸಿದನಾದರೂ ಈ ಪ್ರಯತ್ನದಲ್ಲಿ ಸ್ವಲ್ಪ ಮಟ್ಟಿಗೆ ಜಯಶೀಲನಾದರೂ. ಹೈದರಾಲಿಯ ವಿರುದ್ಧ ಬ್ರಿಟಿಷರು, ಮರಾಠರು ಮತ್ತು ನಿಜಾಮನೊಂದಿಗೆ ಒಪ್ಪಂದ ಮಾಡಿಕೊಂಡರು. ಇದರನ್ವಯ ತ್ರಿಪಕ್ಷ ಒಕ್ಕೂಟ ರಚಿಸಲ್ಪಟ್ಟಿತು. ಆದರೆ ಹೈದರಾಲಿ ತನ್ನ ಚಾಣಾಕ್ಷ್ಯ ರಾಜಕೀಯ ತಂತ್ರಗಳನ್ನು ಪ್ರಯೋಗಿಸುವ ಮೂಲಕ ತನ್ನ ವಿರುದ್ಧ ರಚನೆಯಾಗಿದ್ದ ಮಿತ್ರಕೂಟವನ್ನು ಒಡೆದು ಮರಾಠರು ಮತ್ತು ನಿಜಾಮನನ್ನು ಬ್ರಿಟಿಷರ ವಿರುದ್ಧ ಎತ್ತಿಕಟ್ಟುವಲ್ಲಿ ಯಶಸ್ವಿಯಾದನು. ಈ ನಡುವೆ ಆರ್ಕಾಟ್‌ನಲ್ಲಿ ರಾಜಕೀಯ ಸಮಸ್ಯೆಗಳು ಕಂಡು ಬಂದವು. 1767ರಲ್ಲಿ ಹೈದರಾಲಿ ಮತ್ತು ನಿಜಾಮ, ಬ್ರಿಟಿಷರ ಆಶ್ರಿತ ದೇಶೀಯ ರಾಜ್ಯವಾಗಿದ್ದ ಆರ್ಕಾಟಿಗೆ ಮುತ್ತಿಗೆ ಹಾಕಿದರು. ಇದರಿಂದಾಗಿ ಯುದ್ಧ ಪ್ರಾರಂಭವಾಯಿತು. ತಿರುಚನಾಪಳ್ಳಿ, ತಿರುವಣ್ಣಾಮಲೈ, ಅಂಬೂರು ಮೊದಲಾದ ಸ್ಥಳಗಳಲ್ಲಿ ಕದನಗಳು ಸಂಭವಿಸಿದವು. ಈ ಸಂದರ್ಭದಲ್ಲಿ ಹೈದರಾಲಿ ಮಿಂಚಿನ ಸೈನಿಕ ಕಾರ್ಯಾಚರಣೆಗಳನ್ನು ನಡೆಸಿದನು. ಆದರೆ ಬ್ರಿಟಿಷ್ ಸೈನ್ಯ ಅನೇಕ ಸ್ಥಳಗಳನ್ನು ವಶಪಡಿಸಿಕೊಂಡಿತು. ಹೈದರ್ ತಾತ್ಕಾಲಿಕ ಹಿನ್ನೆಡೆ ಅನುಭವಿಸಿದನು. ಮುಂಬಯಿಯ ಬ್ರಿಟಿಷ್ ಸೈನ್ಯ ರಂಗವನ್ನು ಪ್ರವೇಶಿಸಿತು. ಹೈದರ್ ಈ ಯುದ್ಧವನ್ನು ತನ್ನ ಪ್ರತಿಷ್ಠೆಯ ಸಂಕೇತವೆಂದು ಭಾವಿಸಿ ಕಾರ್ಯಾಚರಣೆಯನ್ನು ಮುಂದುವರಿಸಿದನು. 1769ರ ವೇಳೆಗೆ ಆತನ ಸೈನ್ಯ ಮದರಾಸಿನ ಪ್ರಾಂತ್ಯವನ್ನು ತಲುಪಿದ್ದು ಬ್ರಿಟಿಷರಲ್ಲಿ ನಡುಕವನ್ನು ಹುಟ್ಟಿಸಿತು. ಅನಿವಾರ್ಯವಾಗಿ ಬ್ರಿಟಿಷರು ಹೈದರಾಲಿಯೊಂದಿಗೆ ಚರ್ಚೆ ಮತ್ತು ಸಂಧಾನಗಳ ಮೂಲಕ ‘ಮದ್ರಾಸ್ ಒಪ್ಪಂದ’ ಮಾಡಿಕೊಂಡರು. ಮೊದಲನೇ ಆಂಗ್ಲೋಮೈಸೂರು ಯುದ್ಧ 1769ರಲ್ಲಿ ಸಹಿ ಹಾಕಲಾದ ‘ಮದ್ರಾಸ್ ಒಪ್ಪಂದ’ದೊಂದಿಗೆ ಕೊನೆಯಾಯಿತು.

**18) ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಯಾವ ಒಪ್ಪಂದ ಮೂಲಕ ಅಂತ್ಯಗೊಳಿಸಲಾಯಿತು?**
**ಉತ್ತರ:** 1784ರ ಮಂಗಳೂರು ಒಪ್ಪಂದ

**19) ಹೈದರಾಲಿ ಯಾವ ವರ್ಷ ಮೃತಪಟ್ಟನು?**
**ಉತ್ತರ:– 1782**

**20) ಯಾವ ಯುದ್ಧದ ಸಂದರ್ಭದಲ್ಲಿ ಅನಾರೋಗ್ಯದ ಕಾರಣಕ್ಕಾಗಿ ಹೈದರಾಲಿ ತೀರಿಕೊಂಡನು?**
**ಉತ್ತರ:–** ಎರಡನೆಯ ಆಂಗ್ಲೋ–ಮೈಸೂರು

**21) ಎರಡನೆಯ ಆಂಗ್ಲೋ–ಮೈಸೂರು ಯುದ್ಧದ ಸಂದರ್ಭದಲ್ಲಿ ಎಲ್ಲಿ ನಡೆದ ಕದನದಲ್ಲಿ ಹೈದರಾಲಿ ಸೋತನು?**
**ಉತ್ತರ:–** 1781ರಲ್ಲಿ ಪೋರ್ಟೋನೋವೆ ಎಂಬಲ್ಲಿ ನಡೆದ ಕದನದಲ್ಲಿ ಹೈದರ್ ಪರಾಭವಗೊಂಡನು.

**22) ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಕುರಿತು ಬರೆಯಿರಿ**
**ಉತ್ತರ:** ಮದರಾಸು ಒಪ್ಪಂದ ದಕ್ಷಿಣ ಭಾರತದಲ್ಲಿ ತಾತ್ಕಾಲಿಕವಾಗಿ ರಾಜಕೀಯ ಬೆಳವಣಿಗೆಗಳನ್ನು ತಡೆಹಿಡಿದಿತ್ತು. ಆದರೆ ಬ್ರಿಟಿಷರು ಮದ್ರಾಸ್ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಲು ಯತ್ನಿಸಿದರು. ಮರಾಠರು ಮಾಧವರಾಯನ ನೇತೃತ್ವದಲ್ಲಿ ಸೈನ್ಯವನ್ನು ಮುನ್ನಡೆಸಿ ಶ್ರೀರಂಗಪಟ್ಟಣದ ಕಡೆ ನುಗ್ಗಿದಾಗ ಹೈದರ್ ಬ್ರಿಟಿಷರ ಸಹಾಯವನ್ನು ಅಪೇಕ್ಷಿಸಿದನು. ಆದರೆ ಬ್ರಿಟಿಷರು ಇದನ್ನು ತಿರಸ್ಕರಿಸಿ ಮದರಾಸು ಒಪ್ಪಂದಕ್ಕೆ ವಿರುದ್ಧವಾಗಿ ನಡೆದುಕೊಂಡರು. ಮಾಹೆಯು ಫ್ರೆಂಚರ ವಸಾಹತುವಾಗಿದ್ದು, ಹೈದರಾಲಿಯ ನಿಯಂತ್ರಣಕ್ಕೊಳಪಟ್ಟಿತ್ತು. ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು ಎರಡನೆಯ ಮೈಸೂರು ಯುದ್ಧಕ್ಕೆ ಕಾರಣವಾಯಿತು. ಹೈದರಾಲಿ 1780ರಲ್ಲಿ ಎರಡನೆಯ ಮೈಸೂರು ಯುದ್ಧ ಪ್ರಾರಂಭವಾಯಿತು. ಯುದ್ಧದ ಪ್ರಾರಂಭದಲ್ಲಿ ಹೈದರ್ ಮುನ್ನಡೆ ಸಾಧಿಸಿದನು. ಕರ್ನಾಟಕ ಪ್ರಾಂತ್ಯದ ಅನೇಕ ಕೋಟೆಗಳನ್ನು ವಶಪಡಿಸಿಕೊಂಡನು. ಕಾಂಚೀಪುರಂನಿಂದ ಕೋರಮಂಡಲ ತೀರದವರೆವಿಗೂ ತನ್ನ ಸೈನ್ಯವನ್ನು ಮುನ್ನುಗ್ಗಿಸಿದನು. ಇದು ಮದರಾಸಿನ ಬ್ರಿಟಿಷ್ ಸೈನ್ಯಾಧಿಕಾರಿಗಳಲ್ಲಿ ನಡುಕವನ್ನು ತಂದಿತು. ಹೈದರ್ ಆರ್ಕಾಟಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು. ಅದೇ ಸಂದರ್ಭದಲ್ಲಿ ಸರ್ ಐರ್‌ಕೂಟ್‌ನ ನೇತೃತ್ವದಲ್ಲಿ ಬ್ರಿಟಿಷರ ಸೈನ್ಯ ಸಜ್ಜುಗೊಂಡಿತು. ಹೈದರ್ ಈ ಅವಧಿಯಲ್ಲಿ ವೆಲ್ಲೂರು ಮತ್ತು ವಾಂಡಿವಾಶ್‌ಗಳನ್ನು ಮುತ್ತುವುದಾಗಿ ಬೆದರಿಸಿದನು. ಹೈದರನ ಸೈನ್ಯವನ್ನು ಸರ್ ಐರ್‌ಕೂಟ್ ಪಾಂಡಿಚೇರಿಯವರೆವಿಗೂ ಹಿಂಬಾಲಿಸಿದನು. ಫ್ರೆಂಚರು ಹೈದರನಿಗೆ ಬ್ರಿಟಿಷರ ವಿರುದ್ಧ ಸಹಕರಿಸಲು ನಿರಾಕರಿಸಿದರು. ಹೈದರ್, ಇದರಿಂದಾಗಿ ಯುದ್ಧಗತಿಯನ್ನು ಬದಲಿಸಿದನು. ಹೈದರ್ ಬ್ರಿಟಿಷರ ಹತೋಟಿಯಲ್ಲಿನ ಪ್ರದೇಶಗಳಿಗೆ ಮುತ್ತಿಗೆ ಹಾಕಿ ಕೊಳ್ಳೆಹೊಡೆದು ಅಪಾರ ಸಂಪತ್ತು ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದನು. 1781ರಲ್ಲಿ ಪೋರ್ಟೋನೋವೆ ಎಂಬಲ್ಲಿ ನಡೆದ ಕದನದಲ್ಲಿ ಹೈದರ್ ಪರಾಭವಗೊಂಡನು. ಇದು ಯುದ್ಧದ ಗತಿಯನ್ನು ಬದಲಾಯಿಸಿತು ಮತ್ತು ಬ್ರಿಟಿಷರಲ್ಲಿ ಸ್ಥೈರ್ಯವನ್ನು ಹೆಚ್ಚಿಸಿತು. ತರುವಾಯ ಪುಲಿಕಾಟ್ ಮತ್ತು ಸೋಲಿಂಗೂರ್‌ಗಳ ಕದನದಲ್ಲಿಯೂ ಆರ್ಥಿಕ ಹಾನಿ ಅನುಭವಿಸಿದನು. ಈ ವೇಳೆಗೆ ಬ್ರಿಟಿಷರು ಸಾಲ್ಬಾಯ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಹೈದರನ ಒಕ್ಕೂಟದಿಂದ ಮರಾಠರು ಹಾಗೂ ನಿಜಾಮನನ್ನು ಸೆಳೆಯುವಲ್ಲಿ ಸಫಲರಾದರು. ಯುದ್ಧದ ಮಧ್ಯದಲ್ಲಿ ಹೈದರಾಲಿ 1782ರಲ್ಲಿ ಅನಾರೋಗ್ಯದಿಂದ ಮೃತನಾದನು. ಆತನ ಮಗ ಟಿಪ್ಪು ಯುದ್ಧವನ್ನು ಮುನ್ನಡೆಸಿದನು. ಹೈದರನ ಮರಣ ಸಂದರ್ಭದಲ್ಲಿ ಮಲಬಾರ್ ಪ್ರಾಂತ್ಯದಲ್ಲಿ ನಡೆದ ಯುದ್ಧದಲ್ಲಿ ಟಿಪ್ಪು ತೊಡಗಿದ್ದನು. ಟಿಪ್ಪುವಿನ ಅನುಪಸ್ಥಿತಿಯ ಲಾಭ ಪಡೆದ ಬ್ರಿಟಿಷರು ಬಿದನೂರು ಮತ್ತು ಮಂಗಳೂರನ್ನು ವಶಪಡಿಸಿಕೊಳ್ಳಲು ಹವಣಿಸಿದರು. ತಿರುವಾಂಕೂರು, ಕಲ್ಲಿಕೋಟೆ ಮತ್ತು ಮಲಬಾರಿನ ಅನೇಕ ರಾಜರುಗಳನ್ನು ಟಿಪ್ಪುವಿನ ವಿರುದ್ಧ ಎತ್ತಿಕಟ್ಟುವ ಪ್ರಯತ್ನಗಳನ್ನು ಅವರು ನಡೆಸಿದರು. (ಮುಂದುವರಿಯುವುದು)

## ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

### PHYSICS

*CURRENT ELECTRICITY*

**27. What are the uses of superconductors?**

**Ans:-** The uses of superconductors are -

*(……….Contd)*

(1) They are used as a means of storing energy.
(2) High temperature superconductors are used in magnetometers and microwave devices.
(3) A thin insulating layer between two superconductors is called a Josephson junction. It is used in extremely sensitive magnetometers called SQUIDS – superconducting quantum interference devices. It is also used as a computer element.
(4) SQUIDS are currently used to measure and interpret the weak magnetic field generated by the brain.
(5) The Meissner effect exhibited by superconductors is used in magnetic levitation. That is, a small permanent magnet can be made to float above a superconductor.
(6) Super conducting magnets are used in MRI-magnetic resonance imaging.

**28. The resistance of the conductor is 6 ohms at $50^0$C and 7 ohms at $100^0$C. Calculate the mean temperature coefficient of resistance of the material. Find the resistance of the conductor at $0^0$ C?**

**Ans:-** $R_1 = 6\Omega s,\ t_1 = 50^0 C,\ R_2 = 7\Omega s$

$t_2 = 100^0 C,\ A = ?,\ R_0 = ?$

$$\alpha = \frac{R_2 - R_1}{R_1 t_2 - R_2 t_1} = \frac{7-6}{6 \times 100 - 7 \times 50}$$


$$= \frac{1}{250} = 0.004/^0 C$$

$$R_0 = \frac{R_2 - R_1}{\alpha (t_2 - t_1)} = \frac{1}{0.004 \times 50} = 5$$

Mean temperature co – efficient of resistance = $0.004/^0 C$

Resistance of the conductor at $0^0$C is 5 Ωs.

**29. The resistances of the four sides of a square ABCD are 10 Ω, 5Ω, 7Ω and 2Ω in that order. A resistance of 10 Ω is connected in between A and C. Calculate the equivalent resistance between A and B.**




Consider the part ADC of the network of the resistances.

It shows that the resistances AD and DC are connected in series.

Hence the effective resistance

$$R_1 = 2 + 7 = 9\,\Omega$$

And now we can see that the resistance of the path ADC and resistance AC are in parallel.

∴ Their effective resistance is given by,

$$R_2 = \frac{R_1 \times 10}{R_1 + 10} = \frac{9 \times 10}{9 + 10}$$

$$= \frac{90}{19}\,\Omega$$

And the effective resistance $R_2$ of the part ADC and resistance BC are in series.

∴ Their effective resistance is given by,

$$R_3 = R_2 + 5 = \frac{90}{19} + 5$$

$$= \frac{185}{19}\,\Omega$$

The effective resistance $R_3$ and resistance AB are in parallel.

∴ Their effective resistance is given by

$$R = \frac{R_3 \times 10}{R_3 + 10}$$

$$= \frac{185/19 \times 10}{185/19 + 10} = 4.933\Omega \approx 5.0\Omega$$

**30. The length of a wire of resistance 50 Ω is doubled by stretching it. What is resistance of the stretched wire?**

**Ans:-** The resistance of the wire is given by

$$R = \frac{\rho l}{A}$$

$$R_1 = \frac{\rho l_1}{A_1} \ldots(1) \text{ and } R_2 = \frac{\rho l_2}{A_2} \ldots\ldots(2)$$

Dividing (2) by (1) we get,

$$\frac{R_2}{R_1} = \frac{A_1}{A_2} \times \frac{l_2}{l_1}$$

$$\Rightarrow R_2 = \frac{A_1}{A_2} \times \frac{l_2}{l_1} \times R_1$$

$$l_1 = 1\ ;\ l_2 = 21$$

$$l_1 \times A_1 = l_2 \times A_2 \Rightarrow 1 \times A_1 = 21 \times A_2$$

$$\frac{A_1}{A_2} = 2 \text{ and } \frac{l_2}{l_1} = 2$$

$$\therefore R_2 = 2 \times 2 \times 50 = 200\Omega$$

**31. The light of the electric lamp gets dimmer for a moment when the geyser is switched on. Why?**

**Ans:-** The resistance of the coil of the geyser is small and hence it draws a large amount of current when switched on which affects the supply voltage. As a result of this, the voltage drops across the electric lamp for a moment till it is stabilized by the transmission line.

**32. Manganin or Eureka is used for making standard resistance coils. Why?**

**Ans:-** Manganin or Eureka has very high resistivity. Therefore,

*(Contd……)*

# ₹48 ಲಕ್ಷ ವಂಚನೆ: ಟೆಕಿ ಆರೋಪ

## ಲೈಂಗಿಕ ಸಮಸ್ಯೆಗೆ ಪರಿಹಾರ: ವಿಜಯ್ ಗುರೂಜಿ ಸೇರಿ ಇಬ್ಬರ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲೈಂಗಿಕ ಸಮಸ್ಯೆಗೆ ಶೀಘ್ರ ಪರಿಹಾರ ನೀಡುವುದಾಗಿ ನಂಬಿಸಿ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರಿಗೆ ₹48 ಲಕ್ಷ ವಂಚಿಸಿರುವ ಸಂಬಂಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟೆಕಿ ತೇಜಸ್ ಅವರ ದೂರಿನ ಮೇರೆಗೆ ವಿಜಯ್ ಗುರೂಜಿ ಹಾಗೂ ವಿಜಯಲಕ್ಷ್ಮಿ ಆಯುರ್ವೇದಿಕ್ ಶಾಪ್ ಮಾಲೀಕನ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಲೈಂಗಿಕ ಸಮಸ್ಯೆಯಿಂದ ಬಳಲುತ್ತಿದ್ದ ತೇಜಸ್, ಕೆಂಗೇರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆಸ್ಪತ್ರೆಗೆ ಹೋಗಿ ಬರುವಾಗ ರಸ್ತೆಯ ಪಕ್ಕದ ಟೆಂಟ್ ಬಳಿ ಹಾಕಲಾಗಿದ್ದ ಲೈಂಗಿಕ ಸಮಸ್ಯೆಗೆ ಚಿಕಿತ್ಸೆ ಎಂಬ ಫಲಕ ನೋಡಿ, ಮೇ ತಿಂಗಳಲ್ಲಿ ಅಲ್ಲಿಗೆ ಭೇಟಿ ಕೊಟ್ಟಿದ್ದರು. ಟೆಂಟ್‌ನಲ್ಲಿದ್ದ ವ್ಯಕ್ತಿಯು ವಿಜಯ್ ಗುರೂಜಿ ಎಂಬಾತನನ್ನು ಪರಿಚಯ ಮಾಡಿಕೊಟ್ಟಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಬಳಿಕ ತೇಜಸ್‌ನನ್ನು ಪರೀಕ್ಷಿಸಿದ್ದ ವಿಜಯ್ ಗುರೂಜಿ, ಯಶವಂತಪುರದ ವಿಜಯಲಕ್ಷ್ಮಿ ಆಯುರ್ವೇದ ಔಷಧ ಅಂಗಡಿಯಲ್ಲಿ ದೇವರಾಜ್ ಬೂಟಿ ಹೆಸರಿನ ಔಷಧ ಖರೀದಿಸಿ ಸೇವಿಸಬೇಕು. ಅದರ ಬೆಲೆ ಗ್ರಾಂಗೆ ₹1.60 ಲಕ್ಷ ಇದ್ದು, ಆ ಔಷಧ ಬೇರೆ ಕಡೆ ಸಿಗುವುದಿಲ್ಲ. ಅದನ್ನು ಹರಿದ್ವಾರದಿಂದ ತರಿಸಲಾಗಿದೆ. ನಗದು ಪಾವತಿಸಿ ಆ ಔಷಧ ಖರೀದಿಸಬೇಕು ಮತ್ತು ಅದರ ಖರೀದಿಗೆ ಯಾರನ್ನೂ ಜತೆಯಲ್ಲಿ ಕರೆದುಕೊಂಡು ಹೋಗಬಾರದು. ಬೇರೆ ವ್ಯಕ್ತಿಯನ್ನು ಜತೆಯಲ್ಲಿ ಕರೆದೊಯ್ದರೆ ಆ ಔಷಧಿಗೆ ಶಕ್ತಿ ಫಲಿಸುವುದಿಲ್ಲ ಎಂಬುದಾಗಿ ಷರತ್ತು ಹಾಕಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.


ವಿಜಯ್ ಗುರೂಜಿ ಸಲಹೆಯಂತೆ ತೇಜಸ್ ಹಲವು ಬಾರಿ ದೇವರಾಜ್ ಬೂಟಿ ಮತ್ತು ಭವನ ಬೂಟಿ ತೈಲ ಖರೀದಿಸಿದ್ದರು. ಬೇರೆ ಬೇರೆ ಔಷಧಗಳು ಹಾಗೂ ತೈಲಗಳ ಹೆಸರಿನಲ್ಲಿ ತೇಜಸ್‌ರಿಂದ ಹಂತ ಹಂತವಾಗಿ ₹48 ಲಕ್ಷ ವಸೂಲು ಮಾಡಲಾಗಿದೆ. ಬ್ಯಾಂಕ್ ಹಾಗೂ ಸ್ನೇಹಿತರಿಂದ ಸಾಲ ಪಡೆದು ಔಷಧಗಳನ್ನು ಖರೀದಿಸಿದ್ದರು. ಆದರೂ ಸಮಸ್ಯೆ ಪರಿಹಾರವಾಗದಿದ್ದಾಗ ವಿಜಯ್ ಗುರೂಜಿ, ಇನ್ನೂ ಹೆಚ್ಚಿನ ಚಿಕಿತ್ಸೆಯ ಅಗತ್ಯವಿದೆ. ಚಿಕಿತ್ಸೆ ಮುಂದುವರಿಸದಿದ್ದರೆ ಹೆಚ್ಚಿನ ಸಮಸ್ಯೆಯಾಗಿ ಜೀವಕ್ಕೆ ತೊಂದರೆಯಾಗುತ್ತದೆ ಎಂಬುದಾಗಿ ಹೆದರಿಸಿ ತೇಜಸ್‌ರಿಂದ ಮತ್ತೆ ಹಣ ಪೀಕಲು ಯತ್ನಿಸಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

### ಮೂತ್ರಪಿಂಡಕ್ಕೆ ಹಾನಿ

ವಿಜಯ್ ಗುರೂಜಿ ಕೊಟ್ಟಿದ್ದ ಔಷಧಗಳ ಸೇವನೆಯಿಂದ ತೇಜಸ್ ಅವರ ಮೂತ್ರಪಿಂಡಕ್ಕೆ ಹಾನಿಯಾಗಿರುವುದು ವೈದ್ಯಕೀಯ ಪರೀಕ್ಷೆಯಿಂದ ಗೊತ್ತಾಗಿದೆ. ಈ ಸಂಗತಿ ತಿಳಿದ ತೇಜಸ್, ಹಣ ಸಂಪಾದನೆಯ ದುರುದ್ದೇಶಕ್ಕೆ ಚಿಕಿತ್ಸೆ ನೆಪದಲ್ಲಿ ತಮಗೆ ಮೋಸ ಮಾಡಿರುವ ವಿಜಯ್ ಗುರೂಜಿ ಹಾಗೂ ವಿಜಯಲಕ್ಷ್ಮಿ ಆಯುರ್ವೇದ ಔಷಧ ಮಳಿಗೆ ಮಾಲೀಕರ ವಿರುದ್ಧ ದೂರು ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ಅಪರಾಧ ಸುದ್ದಿ

### ಮೊಬೈಲ್, ಬೆಳ್ಳಿ ಸರ ದೋಚಿದ್ದ ಮೂವರ ಸೆರೆ



**ಬೆಂಗಳೂರು:** ಶಾಂತಿನಗರದ ಚರ್ಚ್ ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರನನ್ನು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಮೊಬೈಲ್ ಹಾಗೂ ಬೆಳ್ಳಿ ಸರ ದೋಚಿದ್ದ ಆರೋಪಿಗಳನ್ನು ವಿಲ್ಸನ್‌ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಡುಗೋಡಿಯ ಸರವಣ, ಸೂರ್ಯ ಮತ್ತು ವಿಕ್ರಮ್ ಬಂಧಿತರು. ಆರೋಪಿಗಳು ನವೆಂಬರ್ 15ರ ನಸುಕಿನಲ್ಲಿ ಶಾಂತಿನಗರದ ಅಯ್ಯಪ್ಪ ದೇವಸ್ಥಾನದ ಬಳಿ ಗುರುರಾಜ್ ಎಂಬ ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಮೊಬೈಲ್, ಬೆಳ್ಳಿ ಸರ ದೋಚಿ ಪರಾರಿಯಾಗಿದ್ದರು. ಆರೋಪಿಗಳಿಂದ ಮೊಬೈಲ್, ಬೆಳ್ಳಿ ಸರ, ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ ಹಾಗೂ ಮಾರಕಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿದ್ದಯ್ಯ ರಸ್ತೆಯ ಗುರುರಾಜ್ ಅವರು ಖಾಸಗಿ ಕಂಪನಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದಾರೆ. ಅವರು ದ್ವಿಚಕ್ರ ವಾಹನದಲ್ಲಿ ಕೆಲಸಕ್ಕೆ ಹೋಗುತ್ತಿದ್ದಾಗ ಆರೋಪಿಗಳು ಅಡ್ಡಗಟ್ಟಿ ಸುಲಿಗೆ ಮಾಡಿದ್ದರು. ಆರೋಪಿಗಳ ದುಷ್ಕೃತ್ಯದ ದೃಶ್ಯವು ಘಟನಾ ಸ್ಥಳದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆ ದೃಶ್ಯದಲ್ಲಿದ್ದ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಯ ಸುಳಿವಿನ ಜಾಡು ಹಿಡಿದು ಆರೋಪಿಗಳನ್ನು ಪತ್ತೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.


---

## ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿದ್ದ ವಿಡಿಯೊ ಪ್ರಕರಣ

# ರೌಡಿಶೀಟರ್ ಮಂಜುನಾಥ ವಿಚಾರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿದ್ದ ಪ್ರಕರಣದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದ ವಿಡಿಯೊಗಳಿಗೆ ಸಂಬಂಧಿಸಿದಂತೆ ರೌಡಿಶೀಟರ್ ಮಂಜುನಾಥ್ ಅಲಿಯಾಸ್ ಕುದುರೆ ಮಂಜ ಎಂಬಾತನನ್ನು ಪೊಲೀಸರು ಭಾನುವಾರ ವಿಚಾರಣೆ ನಡೆಸಿದರು.



ಮಂಜುನಾಥ್

ನಟ ದರ್ಶನ್ ಅವರ ಆಪ್ತ ಧನ್ವೀರ್ ಸೇರಿ ಹಲವರ ವಿಚಾರಣೆ ನಡೆಸಿದ ಬೆನ್ನಲ್ಲೇ ವಿಡಿಯೊದಲ್ಲಿ ನೃತ್ಯ ಮಾಡುತ್ತಿದ್ದ ಮಂಜುನಾಥ್‌ನನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಮದ್ಯ ಕುಡಿದು ಸಹ ಕೈದಿಗಳ ಜತೆ ಮಂಜುನಾಥ್ ನೃತ್ಯ ಮಾಡಿರುವುದು ಹಾಗೂ ವಿಡಿಯೊವನ್ನು ಗುಬ್ಬಚ್ಚಿ ಸೀನ ಮತ್ತು ವಿಲ್ಸನ್ ಗಾರ್ಡನ್ ನಾಗನಿಗೆ ಹಂಚಿಕೊಂಡಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಕೊಲೆ ಸೇರಿ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮಂಜುನಾಥ್, ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದ ಎಂದು ಮೂಲಗಳು ಹೇಳಿವೆ.

ನ್ಯಾಯಾಲಯದ ಅನುಮತಿ ಪಡೆದು ಗುಬ್ಬಚ್ಚಿ ಸೀನ ಮತ್ತು ನಾಗ ಅವರ ವಿಚಾರಣೆ ನಡೆಸಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ. ಈ ಹಿಂದೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ದರ್ಶನ್‌ಗೆ ರಾಜಾತಿಥ್ಯ ನೀಡಿದ ಪ್ರಕರಣದಲ್ಲಿ ಈ ಇಬ್ಬರನ್ನು ಬೆಳಗಾವಿಯ ಹಿಂಡಲಗಾ ಜೈಲಿಗೆ ಸ್ಥಳಾಂತರಿಸಲಾಗಿತ್ತು. ನ್ಯಾಯಾಲಯ ಅನುಮತಿ ನೀಡಿದರೆ ಪರಪ್ಪನ ಅಗ್ರಹಾರ ಠಾಣೆಗೆ ಕರೆ ತರಲಾಗುವುದು. ಇಲ್ಲವಾದರೆ ಅಲ್ಲಿಗೆ ತೆರಳಿ ವಿಚಾರಣೆ ನಡೆಸಲಾಗುವುದು ಎಂದು ಮೂಲಗಳು ಹೇಳಿವೆ.

ಜೈಲಿನಿಂದ ಬಿಡುಗಡೆಯಾಗಿದ್ದ ಕೈದಿಯಿಂದ ವಿಡಿಯೊ ಹಾಗೂ ಫೋಟೊಗಳನ್ನು ಪಡೆದು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿರುವ ಅನುಮಾನದ ಅಡಿ ಧನ್ವೀರ್ ಅವರಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆ ನಡೆಸಲಾಗಿತ್ತು.

‘ವಕೀಲರೊಬ್ಬರು ವಿಡಿಯೊಗಳನ್ನು ನನಗೆ ಕಳುಹಿಸಿದ್ದರು. ಆ ವಿಡಿಯೊಗಳನ್ನು ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರಿಗೆ ಕಳುಹಿಸಿದ್ದೆ. ಯಾವುದೇ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿಲ್ಲ’ ಎಂದು ಧನ್ವೀರ್ ವಿಚಾರಣೆ ವೇಳೆ ತಿಳಿಸಿದ್ದರು ಎಂಬುದು ಗೊತ್ತಾಗಿತ್ತು.

### ಮೂವರು ಕೈದಿಗಳ ವಿರುದ್ಧ ಎಫ್ಐಆರ್




**ಬೆಂಗಳೂರು:** ನಗರ ಕೇಂದ್ರ ಕಾರಾಗೃಹದಲ್ಲಿನ ಕೈದಿಗಳಿಗೆ ವಿಶೇಷ ಸೌಲಭ್ಯ ನೀಡಿರುವ ಆರೋಪ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ದಾಖಲಾಗಿವೆ.

ಮೊದಲ ಪ್ರಕರಣದಲ್ಲಿ ದೂರುದಾರರಾದ ಇಮಾಮ್ ಸಾಬ್ ಮ್ಯಾಗೇರಿ (ಸದ್ಯ ಅಮಾನತುಗೊಂಡಿರುವ ಕಾರಾಗೃಹ ಅಧೀಕ್ಷಕ) ಅವರು ಉಮೇಶ್ ರೆಡ್ಡಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ ಜೈಲಿನಲ್ಲಿ ಮೊಬೈಲ್ ಫೋನ್ ಬಳಸಿರುವ ದೃಶ್ಯ ವಿಡಿಯೊದಲ್ಲಿ ದಾಖಲಾಗಿತ್ತು.

ಎರಡನೇ ಪ್ರಕರಣದಲ್ಲಿ, ಡ್ರಗ್ಸ್ ಪ್ರಕರಣದಲ್ಲಿ ಜೈಲು ಸೇರಿರುವ ಶಾಹಿದ್ ಖಾನ್ ಅಲಿಯಾಸ್ ಚೋರ್ ಶಾಹಿದ್ ನಿಷೇಧಿತ ವಸ್ತುಗಳ ಬಳಕೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ. ಮೂರನೇ ಪ್ರಕರಣದಲ್ಲಿ ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ ಸಹ ಮೊಬೈಲ್ ಫೋನ್ ಬಳಸಿದ್ದಾನೆ ಎಂದು ಆರೋಪಿಸಲಾಗಿದೆ.

ನಿಷೇಧಿತ ವಸ್ತುಗಳನ್ನು ಯಾರು ಪೂರೈಸಿದ್ದರು? ಮೂವರಿಗೆ ಯಾರು ಮೊಬೈಲ್ ಪೂರೈಸಿದ್ದರು? ವಿಡಿಯೊವನ್ನು ಯಾರು ಚಿತ್ರೀಕರಿಸಿದರು ಮತ್ತು ಹೇಗೆ ಸೋರಿಕೆಯಾಯಿತು? ಎಂಬುದರ ಬಗ್ಗೆ ತನಿಖೆ ಮಾಡುವಂತೆ ಪೊಲೀಸರಿಗೆ ಮನವಿ ಮಾಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ಪೈಲಟ್‌ನಿಂದ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲು

**ಹೈದರಾಬಾದ್ (ಪಿಟಿಐ):** ಬೆಂಗಳೂರಿನ ಹೋಟೆಲೊಂದರಲ್ಲಿ ತಮ್ಮ ಮೇಲೆ ವಿಶೇಷ ವಿಮಾನದ ಪೈಲಟ್ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಕ್ಯಾಬಿನ್ ಸಿಬ್ಬಂದಿ ಇಲ್ಲಿನ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪ್ರಕರಣ ದಾಖಲಾಗಿದೆ.

ನವೆಂಬರ್ 18ರಂದು ಬೆಂಗಳೂರಿನಲ್ಲಿ ಘಟನೆ ನಡೆದಿದೆ. ಬೇಗಂಪೇಟೆ ಠಾಣೆಯಲ್ಲಿ ಝೀರೊ ಎಫ್ಐಆರ್ (ಬೇರೊಂದು ಠಾಣೆಯ ವ್ಯಾಪ್ತಿಯಲ್ಲಿ ನಡೆದ ಅಪರಾಧದ ದೂರು) ದಾಖಲಾಗಿದೆ. ‘ಬೆಂಗಳೂರಿನಿಂದ ಮರಳಿದ ನಂತರ ಸಂತ್ರಸ್ತೆ, ಇಲ್ಲಿನ ಠಾಣೆಗೆ ಬಂದು ದೂರು ನೀಡಿದ್ದಾರೆ. ನಾವು ಪ್ರಕರಣ ದಾಖಲಿಸಿಕೊಂಡು ಅದನ್ನು ಬೆಂಗಳೂರಿನ ಹಲಸೂರು ಪೊಲೀಸ್ ಠಾಣೆಗೆ ವರ್ಗಾಯಿಸಿದ್ದೇವೆ. ಬೆಂಗಳೂರಿನ ಪೊಲೀಸರು ತನಿಖೆ ನಡೆಸಲಿದ್ದಾರೆ’ ಎಂದು ಬೇಗಂಪೇಟೆ ಠಾಣೆಯ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದರು.

## ನಾಳೆ ಮಾಂಸ ಮಾರಾಟ ನಿಷೇಧ

**ಬೆಂಗಳೂರು:** ಸಾಧು ವಾಸವಾನಿ ಜಯಂತಿಯ ಅಂಗವಾಗಿ ನ.25ರಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ನ.25ರಂದು ಕಸಾಯಿಖಾನೆಗಳಲ್ಲಿ ಪ್ರಾಣಿವಧೆ ಹಾಗೂ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಪಶುಪಾಲನೆ ವಿಭಾಗದ ಉಪ ನಿರ್ದೇಶಕ ತಿಳಿಸಿದ್ದಾರೆ.

---

# ಕೆನರಾ ಮ್ಯಾರಥಾನ್: 12 ಸಾವಿರ ಜನ ಭಾಗಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕೆನರಾ ಬ್ಯಾಂಕ್‌ನ ವಾರ್ಷಿಕ ಮ್ಯಾರಥಾನ್‌ನಲ್ಲಿ 12 ಸಾವಿರ ಓಟಗಾರರು ಭಾಗವಹಿಸಿದ್ದರು.

3ಕೆ, 5ಕೆ ಮತ್ತು 10ಕೆ ಎಂಬ ಮೂರು ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಕೆನರಾ ಮ್ಯಾರಥಾನ್‌ನಲ್ಲಿ 3 ವರ್ಷದವರಿಂದ ಹಿಡಿದು 97 ವರ್ಷದ ವೃದ್ಧರವರೆಗೆ ಭಾಗವಹಿಸಿದ್ದರು.

ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಕೆ. ಸತ್ಯನಾರಾಯಣ ರಾಜು, ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಓಟಕ್ಕೆ ಚಾಲನೆ ನೀಡಿದರು. 10 ಕೆ ಓಟದ ಪುರುಷರ ವಿಭಾಗದಲ್ಲಿ ಧರ್ಮೇಂದ್ರ ಪೂರ್ಣಿಯಾ, ಮಹಿಳೆಯರ ವಿಭಾಗದಲ್ಲಿ ಕವಿತಾ ಯಾದವ್ ಪ್ರಥಮ ಸ್ಥಾನ ಪಡೆದರು. 5 ಕೆ ಪುರುಷ, ಮಹಿಳಾ ವಿಭಾಗದಲ್ಲಿ ಕ್ರಮವಾಗಿ ಜಯೇಶ್ ಪಾಟೀಲ್ ಮತ್ತು ಚಂದಾ ಅಗ್ರ ಸ್ಥಾನವನ್ನು ಪಡೆದರು.

10 ಕೆ ವಿಭಾಗದ ವಿಜೇತರಿಗೆ ₹ 2 ಲಕ್ಷ, ದ್ವಿತೀಯ ಸ್ಥಾನ ಪಡೆದವರಿಗೆ ₹ 1 ಲಕ್ಷ, 5 ಕೆ ವಿಜೇತರಿಗೆ ₹1 ಲಕ್ಷ, ದ್ವಿತೀಯ ಸ್ಥಾನ ಪಡೆದವರಿಗೆ ₹50 ಸಾವಿರ ನೀಡಿ ಗೌರವಿಸಲಾಯಿತು. ಅಲ್ಲದೇ ವಿವಿಧ ಸ್ಥಾನಗಳನ್ನು ಪಡೆದವರಿಗೆ ಬಹುಮಾನ ನೀಡಲಾಯಿತು.



ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಕೆನರಾ ಬ್ಯಾಂಕ್‌ನ ವಾರ್ಷಿಕ ಮ್ಯಾರಥಾನ್ ನಡೆಯಿತು

---

## ಕಾನ್‌ಸ್ಟೆಬಲ್ ಸೇರಿ ಎಂಟು ಮಂದಿ ಬಂಧನ

# ಉದ್ಯೋಗಿಗಳ ಅಪಹರಿಸಿ, ಹಣ ಸುಲಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾಲ್‌ಸೆಂಟರ್ (ಬಿಪಿಒ) ಮೇಲೆ ಪೊಲೀಸರ ಸೋಗಿನಲ್ಲಿ ದಾಳಿ ಮಾಡಿ ನಾಲ್ವರು ಉದ್ಯೋಗಿಗಳನ್ನು ಅಪಹರಿಸಿ, ₹18.90 ಲಕ್ಷ ಸುಲಿಗೆ ಮಾಡಿರುವ ಪ್ರಕರಣ ಸಂಬಂಧ ಕೋರಮಂಗಲ ಠಾಣೆ ಪೊಲೀಸರು ಎಂಟು ಮಂದಿಯನ್ನು ಬಂಧಿಸಿದ್ದಾರೆ.

ಮಾಲೂರು ಟೌನ್ ಠಾಣೆಯ ಕಾನ್‌ಸ್ಟೆಬಲ್ ಚಲಪತಿ, ಪವನ್, ಜಬಿವುಲ್ಲಾ, ಅತೀಕ್, ಭರತ್, ಪ್ರಶಾಂತ್ ಕುಮಾರ್, ಶಹಬಾಜ್ ಅಹಮದ್, ತೇಜಸ್ ದೇವ್ ಎಂಬುವವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ನಾಲ್ಕು ದಿನ ಕಸ್ಟಡಿಗೆ ನೀಡಿದ್ದು, ಪೊಲೀಸರು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ.

ಕೋರಮಂಗಲ ವ್ಯಾಪ್ತಿಯಲ್ಲಿ ಗ್ಲೋಬಲ್ ಕನೆಕ್ಟ್ ಟೆಲಿಕಾಂ ಪ್ರೈವೆಟ್ ಲಿಮಿಟೆಡ್ ಹೆಸರಿನ ಕಾಲ್‌ಸೆಂಟರ್ ಕಾರ್ಯನಿರ್ವಹಿಸುತ್ತಿದೆ. ಅಮೆರಿಕ ಸೇರಿದಂತೆ ವಿವಿಧ ದೇಶಗಳಲ್ಲಿ ವ್ಯವಹಾರ ಹಾಗೂ ಗ್ರಾಹಕರನ್ನು ಹೊಂದಿದೆ. ಶನಿವಾರ ಬೆಳಗಿನ ಜಾವ 1 ಗಂಟೆ ಸುಮಾರಿಗೆ ಕಾಲ್ ಸೆಂಟರ್ ಬಳಿ ತೆರಳಿದ್ದ ಆರೋಪಿಗಳು, ಸೈಬರ್ ವಂಚನೆ ಮಾಡಲಾಗುತ್ತಿದೆ ಎಂದು ಹೆದರಿಸಿ ಉದ್ಯೋಗಿಗಳಾದ ಪವನ್, ರಾಜ್‌ವೀರ್, ಆಕಾಶ್, ಅನಸ್ ಎಂಬುವವರನ್ನು ಅಪಹರಿಸಿ, ಕಾರಿನಲ್ಲಿ ಕರೆದೊಯ್ದಿದ್ದರು. ಬಳಿಕ ಠಾಣೆಗೆ ಕರೆದೊಯ್ಯುವ ನೆಪದಲ್ಲಿ ಮಾಲೂರಿಗೆ ಕರೆದೊಯ್ದು, ₹25 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಕಂಪನಿಯ ಉದ್ಯೋಗಿಗಳ ಖಾತೆಯಿಂದ ₹ 18 ಲಕ್ಷ ವರ್ಗಾಯಿಸಿಕೊಂಡಿದ್ದರು. ಬಳಿಕ ಮುಂಜಾನೆ 4 ಗಂಟೆಗೆ ಕಾಲ್ ಸೆಂಟರ್ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಕಾರ್ಯಾಚರಣೆಗಿಳಿದ ಪೊಲೀಸರು, ಹಲವು ಆಯಾಮಗಳಲ್ಲಿ ತನಿಖೆ ನಡೆಸಿ, ಆರೋಪಿಗಳ ಜಾಡು ಪತ್ತೆ ಹಚ್ಚಿ ಉದ್ಯೋಗಿಗಳನ್ನು ರಕ್ಷಿಸಿದ್ದರು. ಜತೆಗೆ, ಕೃತ್ಯದಲ್ಲಿ ಶಾಮೀಲಾಗಿದ್ದ ಎಂಟು ಮಂದಿಯನ್ನು ಬಂಧಿಸಿ, ಎರಡು ಕಾರುಗಳನ್ನು ಜಪ್ತಿ ಮಾಡಿದ್ದರು.

ರಿಯಲ್ ಎಸ್ಟೇಟ್ ಸೇರಿ ಬೇರೆ ಕೆಲಸ ಮಾಡಿಕೊಂಡಿದ್ದ ಪವನ್, ವ್ಯವಹಾರದಲ್ಲಿ ನಷ್ಟ ಅನುಭವಿಸಿದ್ದ. ಸಾಕಷ್ಟು ಸಾಲ ಮಾಡಿಕೊಂಡಿದ್ದ. ಸಾಲ ತೀರಿಸಲು ಚಲಪತಿ ಜೊತೆ ಸೇರಿ ಅಪಹರಣ ಮಾಡಿದ್ದಾನೆ. ಆರೋಪಿಗಳಿಂದ ₹14 ಲಕ್ಷ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.



ಚಲಪತಿ



ಪವನ್



ಅತೀಕ್



ಪ್ರಶಾಂತ್



ತೇಜಸ್



ಜಬಿವುಲ್ಲಾ



ಭರತ್



ಶಹಬಾಜ್

# ಸಂಚಾರ ನಿಯಮ ಉಲ್ಲಂಘನೆ ಆಹಾರ ವಿತರಕರೇ ಮುಂದು

## ಮೂರು ವರ್ಷಗಳಲ್ಲಿ 1.46 ಲಕ್ಷ ಪ್ರಕರಣ ದಾಖಲಿಸಿರುವ ಸಂಚಾರ ಪೊಲೀಸರು

• ಅಶ್ವಿನ್ ಬಿ.ಎಂ.

**ಬೆಂಗಳೂರು:** ನಗರದಲ್ಲಿ ಸಂಚಾರ ನಿಯಮ ಉಲ್ಲಂಘಿಸುವವರಲ್ಲಿ ಆಹಾರ ವಿತರಿಸುವ ಹುಡುಗರ ಸಂಖ್ಯೆ ಅಧಿಕ ವಾಗಿದ್ದು ಅವರ ವಿರುದ್ಧ ಮೂರು ವರ್ಷಗಳಲ್ಲಿ 1.46 ಲಕ್ಷ ಪ್ರಕರಣಗಳು ದಾಖಲಾಗಿವೆ.

ನಗರದಲ್ಲಿ ಐಟಿಬಿಟಿ, ವಾಣಿಜ್ಯ ಕಾರಿಡಾರ್‌ಗಳು ಹೆಚ್ಚಿರುವ ಪ್ರದೇಶ ಗಳಲ್ಲಿಯೇ ಆಹಾರ ವಿತರಕರು ಸಂಚಾರದ ವೇಳೆ ಅಶಿಸ್ತು ತೋರುತ್ತಿರುವುದು ಹೆಚ್ಚಾಗಿದೆ ಎಂಬುದು ಅಂಕಿ ಸಂಖ್ಯೆಗಳಿಂದ ಗೊತ್ತಾಗಿದೆ.

ನಿಗದಿತ ಅವಧಿಯೊಳಗೆ ಆಹಾರ ಪೂರೈಸಬೇಕಾದ ಧಾವಂತದಲ್ಲಿ ಸಂಚಾರ ನಿಯಮ ಉಲ್ಲಂಘನೆಯಾಗುತ್ತಿದೆ. 2023ರಲ್ಲಿ 30,968 ಪ್ರಕರಣಗಳು 2024ರಲ್ಲಿ 52,153 ಮತ್ತು 2025ರಲ್ಲಿ 63,718 ಪ್ರಕರಣಗಳು ದಾಖಲಾಗಿವೆ. ವರ್ಷದಿಂದ ವರ್ಷಕ್ಕೆ ಉಲ್ಲಂಘನೆ ಪ್ರಕರಣಗಳು ಏರುಗತಿಯಲ್ಲಿ ಸಾಗಿವೆ.

ಬೆಂಗಳೂರು ಸಂಚಾರ ಪೊಲೀಸ್ ಪೂರ್ವ ವಿಭಾಗವು ವೈಟ್‌ಫೀಲ್ಡ್, ಕೆ.ಆರ್. ಪುರ, ಇಂದಿರಾನಗರ, ಹಲಸೂರು ಪ್ರದೇಶಗಳನ್ನು ಒಳಗೊಂಡಿದ್ದು, ಇದೇ ವಿಭಾಗವು ನಿಯಮ ಉಲ್ಲಂಘನೆಯ ಕೇಂದ್ರವೂ ಆಗಿದೆ. ಮೂರು ವರ್ಷಗಳಲ್ಲಿ 73,971 ಪ್ರಕರಣಗಳು ಇಲ್ಲೇ ದಾಖಲಾಗಿವೆ.

ವೈಟ್‌ಫೀಲ್ಡ್ ಉಪವಿಭಾಗ ಒಂದರಲ್ಲಿಯೇ 25,000ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಲಾಗಿದೆ.



ದ್ವಿಚಕ್ರ ವಾಹನದಲ್ಲಿ ಆಹಾರ ಒಯ್ಯುತ್ತಿರುವುದು (ಸಾಂದರ್ಭಿಕ ಚಿತ್ರ)

ಇದು ಅಧಿಕ ಸಂಚಾರ ಒತ್ತಡ ಮತ್ತು ಐಟಿ ವಲಯದ ಕ್ಯಾಂಪಸ್‌ಗಳು ಮತ್ತು ವಸತಿ ಅಪಾರ್ಟ್‌ಮೆಂಟ್‌ಗಳಿಗೆ ಆಹಾರ ವಿತರಣಾ ಚಟುವಟಿಕೆ ಹೆಚ್ಚಿರುವುದನ್ನು ಸೂಚಿಸುತ್ತದೆ.

ಹಲಸೂರು ಮತ್ತು ಬಾಣಸವಾಡಿ ವಿಭಾಗದ ಪ್ರಮುಖ ಹಾಟ್‌ಸ್ಪಾಟ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗಿವೆ ಎಂದು ಉಪ ಪೊಲೀಸ್ ಆಯುಕ್ತ (ಸಂಚಾರ, ಪೂರ್ವ) ಸಾಹಿಲ್ ಬಾಗ್ಲಾ ತಿಳಿಸಿದರು.

ಸಂಚಾರ ನಿಯಮ ಉಲ್ಲಂಘನೆ ಯನ್ನು ನಿಯಂತ್ರಿಸಲು ವಿಶೇಷ ಕಾರ್ಯಾಚರಣೆ ನಡೆಸಿದಾಗ ನೋ ಪಾರ್ಕಿಂಗ್‌ನಲ್ಲಿ ವಾಹನ ನಿಲ್ಲಿಸುವುದು, ಏಕಮುಖ ಸಂಚಾರ ಇರುವ ರಸ್ತೆಗಳಲ್ಲಿ ವಿರುದ್ಧ ದಿಕ್ಕಿನಿಂದ ಮತ್ತು ಪಾದಚಾರಿ ಮಾರ್ಗಗಳಲ್ಲಿ ಸವಾರಿ ಮಾಡುವುದು ಕಂಡು ಬಂದಿದೆ.

ದಕ್ಷಿಣ ವಿಭಾಗದಲ್ಲಿ 44,313 ಪ್ರಕರಣಗಳು ದಾಖಲಾಗಿವೆ. ಮೈಕೊ ಲೇಔಟ್, ಆಡುಗೋಡಿ ಮತ್ತು ಎಚ್‌ಎಸ್‌ಆರ್ ಲೇಔಟ್ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಪ್ರದೇಶಗಳಲ್ಲಿ ನಿರಂತರವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಉಲ್ಲಂಘನೆ ಪ್ರಕರಣಗಳು ವರದಿಯಾಗಿವೆ. ವಿರುದ್ಧ ದಿಕ್ಕಿನಲ್ಲಿ ಚಾಲನೆ, ಸಿಗ್ನಲ್ ಉಲ್ಲಂಘಿಸುವುದು ಮತ್ತು ಹೆಲ್ಮೆಟ್ ಧರಿಸದಿರುವುದು ಕಂಡು ಬಂದಿದೆ. ಸಂಚಾರ ಉಲ್ಲಂಘನೆ ಕುರಿತು ಆಹಾರ ಮತ್ತು ವಿತರಣಾ ಸಂಘಟಕರಿಗೆ ಸೂಚನೆಗಳನ್ನು ಪೊಲೀಸ್ ಆಯುಕ್ತರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ನೀಡಲಾಗಿದೆ ಎಂದು ಉಪ ಪೊಲೀಸ್ ಆಯುಕ್ತ (ಸಂಚಾರ, ದಕ್ಷಿಣ) ಗೋಪಾಲ್ ಎಂ. ಬ್ಯಾಕೋಡ್ ಮಾಹಿತಿ ನೀಡಿದರು.

ಆಹಾರ ಮತ್ತು ದಿನಸಿ ವಸ್ತುಗಳನ್ನು ಜೀವ ಪಣಕ್ಕಿಟ್ಟು 10 ನಿಮಿಷಗಳೊಳಗೆ ಮುಟ್ಟಿಸುವ ಧಾವಂತ ಯಾಕೆಂದು ಗೊತ್ತಾಗುತ್ತಿಲ್ಲ. ಇದೇನು ಔಷಧ ಅಥವಾ ಆಂಬುಲೆನ್ಸ್‌ಗಳಷ್ಟು ತುರ್ತು ಅಲ್ಲ. ಐದು ನಿಮಿಷ ತಡವಾದರೂ ಏನೂ ಆಗುವುದಿಲ್ಲ ಎಂದು ಪೊಲೀಸ್ ಅಧಿಕಾರಿ ಯೊಬ್ಬರು ತಿಳಿಸಿದರು.

ಆದರೆ, ಆಹಾರ ವಿತರಕರು ಹೇಳುವುದೇ ಬೇರೆ. 'ನಾವು ನಿಗದಿತ ಸಮಯದಲ್ಲಿ ತಲುಪಿದ್ದೇವೆಯೇ ಇಲ್ಲವೇ ಎಂಬುದನ್ನು ಕಂಪನಿ ಮೇಲ್ವಿಚಾರಣೆ ಮಾಡುತ್ತಿರುತ್ತದೆ. ಒಂದು ನಿಮಿಷ ತಡವಾದರೂ ನಮ್ಮ ವೇತನಕ್ಕೆ ಕತ್ತರಿ ಬೀಳುತ್ತದೆ' ಎಂದು ಅಸಹಾಯಕತೆ ತೋಡಿಕೊಂಡರು. ನಿಗದಿತ ಸಮಯದ ಒಳಗೆ ಗ್ರಾಹಕರಿಗೆ ಆಹಾರ ತಲುಪಿಸಿದರೆ ನಮಗೆ ಅಂಕ ಸಿಗುತ್ತದೆ. ತಡವಾದರೆ ದಂಡ ವಿಧಿಸುತ್ತಾರೆ. ವೇತನ ಹೆಚ್ಚಳ ವಾಗಬೇಕಿದ್ದರೆ ದಿನಕ್ಕೆ 18 ಬಾರಿ ವಿತರಣೆ ಮಾಡಬೇಕು ಎಂದು ಆಹಾರ ವಿತರಕರು ತಿಳಿಸಿದರು.

### ಇ–ಬೈಕ್‌ಗೆ ದಂಡ ಇಲ್ಲ!

ನಿಯಮ ಉಲ್ಲಂಘಿಸುವ ವಾಹನಗಳಿಗೆ ದಂಡ ವಿಧಿಸಲಾಗುತ್ತಿದೆ. ಆದರೆ, ಇ–ಬೈಕ್‌ಗಳು ದಂಡದಿಂದ ತಪ್ಪಿಸಿಕೊಳ್ಳುತ್ತಿವೆ. ಇ–ಬೈಕ್‌ಗಳನ್ನು ಸೈಕಲ್‌ಗಳಂತೆ ಪರಿಗಣಿಸಿರುವುದರಿಂದ ಮೋಟಾರ್ ವಾಹನ ಕಾಯ್ದೆಯಡಿ ಬರುವುದಿಲ್ಲ. ಹಾಗಾಗಿ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

### ಸುರಕ್ಷತಾ ತರಬೇತಿ

ಆಹಾರ ವಿತರಕರ ಅಗತ್ಯಗಳು ಅರ್ಥವಾದರೂ ರಸ್ತೆ ಸುರಕ್ಷತೆ ವಿಚಾರದಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ವಿತರಕ ಕಂಪನಿಗಳೊಂದಿಗೆ ಸಂವಾದ ನಡೆಸಲು, ಸುರಕ್ಷತಾ ತರಬೇತಿ ನೀಡಲು ಕ್ರಮ ವಹಿಸಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

---

## 'ಜಾತ್ಯತೀತ ತತ್ವದ ಮರ್ಯಾದಾ ಹತ್ಯೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಾತ್ಯತೀತ ತತ್ವದ ಮರ್ಯಾದಾ ಹತ್ಯೆ ನಡೆಯುತ್ತಿರುವ ಈ ಕಾಲಕ್ಕೆ ನಾರಾಯಣ ಗುರುಗಳ ಬದುಕು, ತತ್ವಗಳೇ ದಾರಿದೀಪ ಎಂದು ಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಹೇಳಿದರು.

ಕರ್ನಾಟಕ ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಸಂಪಾದಕರ ಮತ್ತು ವರದಿಗಾರರ ಸಂಘ ಆಯೋಜಿಸಿದ್ದ 'ನಾರಾಯಣಗುರು' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದಿನೇ ದಿನೇ ಜಾತಿ ವ್ಯವಸ್ಥೆ ಗಟ್ಟಿಗೊಳ್ಳುತ್ತಾ, ಜಾತ್ಯತೀತತೆಯ ಹತ್ಯೆ ನಡೆಯುತ್ತಿದೆ. ಆದರ್ಶಗಳನ್ನು ಅಳಿಸಿ ಮಾತುಗಳಿಗೆ ಮಾತ್ರ ಮಾನ್ಯತೆ ನೀಡಿದರೆ ಅಪಾರ್ಥದ ಆಚರಣೆಗಳಿಗೆ ದಾರಿ ಮಾಡಿ ಕೊಡುತ್ತದೆ ಎಂದರು.

ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳಲ್ಲಿ ಧರ್ಮದ ಹೆಸರಲ್ಲಿ ತಮ್ಮ ಬದುಕನ್ನು ಹಾಳು ಮಾಡಿಕೊಳ್ಳುತ್ತಿರುವವರು ಈಡಿಗ, ಬೆಸ್ತ ಮುಂತಾದ ಹಿಂದುಳಿದ ಸಮುದಾಯಗಳ ಮಕ್ಕಳೇ ಆಗಿದ್ದಾರೆ. ಇವರಿಗೆ ನಾರಾಯಣಗುರು ಗಳ ಬದುಕಿನ ಪಾಠವನ್ನು ಅರ್ಥ ಮಾಡಿಸಬೇಕಾದ ತುರ್ತು ಇದೆ ಎಂದು ಅಭಿಪ್ರಾಯಪಟ್ಟರು.

ಯಾವುದೇ ಧರ್ಮವಿರಲಿ, ಮನುಷ್ಯನನ್ನು ಉತ್ತಮಗೊಳಿಸಿದರೆ ಸಾಕು ಎನ್ನುವುದು ಗುರುಗಳ ವಿಶಾಲ ದೃಷ್ಟಿಕೋನವಾಗಿತ್ತು. ಎಲ್ಲ ರೀತಿಯ ತಾರತಮ್ಯದ ಮನಸ್ಥಿತಿಯಿಂದ ಮುಕ್ತವಾದ ಅಪ್ಪಟ ಮನುಷ್ಯನನ್ನು ರೂಪಿಸುವುದೇ ನಾರಾಯಣಗುರುಗಳ ಬದುಕಿನ ಸಂದೇಶವಾಗಿತ್ತು ಎಂದು ವಿವರಿಸಿದರು.

ಸಂಘದ ಅಧ್ಯಕ್ಷ ಗಂಧರ್ವ ಸೇನಾ ಅಧ್ಯಕ್ಷತೆ ವಹಿಸಿದ್ದರು. ಸಾಧಕರಾದ ಸರೋಜ ಬನಪ್ಪ, ಎಚ್.ಆರ್. ಜಯರಾಂ, ಅಮಿತಾ ಆನಂದ್ ಮಂತ, ನಾಗೇಶ್ ಬಸವರಾಜ್, ಪುಂಡಲೀಕ ಕಲ್ಲಿಗನೂರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಬ್ಯಾಸ್ಕೆಟ್‌ಬಾಲ್: ರಾಜಮಹಲ್ ಬಿ.ಸಿ ತಂಡಕ್ಕೆ ಸುಲಭ ಗೆಲುವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆನಂದ್ (32 ಅಂಕ) ಹಾಗೂ ಶಿಶಿರ್ (22 ಅಂಕ) ಅವರ ಆಟದ ಬಲದಿಂದ, ರಾಜಮಹಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 'ಸ್ಟೇಟ್ ಅಸೋಸಿಯೇಶನ್ ಕಪ್' ಗಾಗಿ ನಡೆಯುತ್ತಿರುವ ರಾಜ್ಯ ಮಟ್ಟದ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಭಾನುವಾರ 81-63ರಿಂದ ಮೈಸೂರು ಜಿಲ್ಲೆ ಎ ತಂಡವನ್ನು ಮಣಿಸಿತು.



ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಲೀಗ್ ಹಂತದ ಪಂದ್ಯದಲ್ಲಿ ಮೊದಲಾರ್ಧ ದಲ್ಲಿ 15 ಅಂಕಗಳಿಂದ (49-34) ಮುನ್ನಡೆಯಲ್ಲಿದ್ದ ರಾಜಮಹಲ್ ತಂಡವು ದ್ವಿತೀಯಾರ್ಧದಲ್ಲಿಯೂ ಪ್ರಾಬಲ್ಯ ಮುಂದುವರಿಸಿತು. ನಿರಾಯಾಸವಾಗಿ ಗೆಲುವು ತನ್ನದಾಗಿಸಿಕೊಂಡಿತು.

**ಫಲಿತಾಂಶಗಳು:** ಪುರುಷರು: ಚಿಕ್ಕಮಗಳೂರು ಜಿಲ್ಲಾ ತಂಡ 69-49ರಿಂದ ಧಾರವಾಡ ಜಿಲ್ಲೆ ಎ ತಂಡದ ವಿರುದ್ಧ; ರಾಜಮಹಲ್ ಬಿ.ಸಿ. ತಂಡ 81-63ರಿಂದ ಮೈಸೂರು ಜಿಲ್ಲೆ 'ಎ' ತಂಡದ ವಿರುದ್ಧ; ಭಾರತ್ ಸ್ಪೋರ್ಟ್ಸ್ ಯೂನಿಯನ್ ತಂಡ 69-38ರಿಂದ ರಾಜಕುಮಾರ್ ಬಿ.ಸಿ. ವಿರುದ್ಧ; ವಿಮಾನಪುರ ಸ್ಪೋರ್ಟ್ಸ್ ಕ್ಲಬ್ ತಂಡ 66-56ರಿಂದ ಎಚ್‌ಬಿಆರ್ ಬಿ.ಸಿ. ವಿರುದ್ಧ; ಡಿವೈಇಎಸ್ ಬೆಂಗಳೂರು ತಂಡ 80-41ರಿಂದ ವೈಎಂಎಂಎ ವಿರುದ್ಧ; ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ. ತಂಡವು 77-36ರಿಂದ ಧಾರವಾಡ ಜಿಲ್ಲೆ 'ಬಿ' ತಂಡದ ವಿರುದ್ಧ; ಹೂಪ್ 7 ಬಿ.ಸಿ. 84-68ರಿಂದ ಐಬಿಬಿಸಿ ವಿರುದ್ಧ; ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು 95-67ರಿಂದ ಬಾಷ್ ತಂಡದ ವಿರುದ್ಧ ಜಯ ಗಳಿಸಿದವು.

**ಮಹಿಳೆಯರು:** ಸದರ್ನ್ ಬ್ಲ್ಯೂಸ್ ತಂಡ 37-15ರಿಂದ ಲಕ್ಷ್ಯನ್ ಬಿ.ಸಿ. ವಿರುದ್ಧ; ಮೌಂಟ್ಸ್ ಕ್ಲಬ್ ತಂಡ 56-22ರಿಂದ ಪಟ್ಟಾಭಿರಾಮ ಬಿ.ಸಿ. ವಿರುದ್ಧ; ರಾಜಮಹಲ್ ಬಿ.ಸಿ. ತಂಡ 49-29ರಿಂದ ಯಲಹಂಕ ನ್ಯೂ ಟೌನ್ ಬಿ.ಸಿ. ವಿರುದ್ಧ ಹಾಗೂ ಎಚ್‌ಬಿಆರ್ ಬಿ.ಸಿ. ತಂಡವು 53-38ರಿಂದ ಹಲಸೂರು ಸ್ಪೋರ್ಟ್ಸ್ ಯೂನಿಯನ್ ವಿರುದ್ಧ ಜಯ ಸಾಧಿಸಿದವು.

### ಚಿತ್ರಾವಳಿ



ರಾಜ್ಯೋತ್ಸವದ ಅಂಗವಾಗಿ ನಗರದ ಎಪಿಎಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ನಡೆದ ಸೊಗಡು–ಕನ್ನಡ ಹಬ್ಬದಲ್ಲಿ ಪ್ರಾಧ್ಯಾಪಕಿ ಸುಷ್ಮಾ ಎಸ್. ವಿ., ಎಪಿಎಸ್ ಎಜುಕೇಶನಲ್ ಟ್ರಸ್ಟ್‌ನ ಉಪಾಧ್ಯಕ್ಷ ಆರ್.ವಿ. ವಿಜಯ್ ಭಾಸ್ಕರ್, ಪ್ರಧಾನ ಕಾರ್ಯದರ್ಶಿ ಎ. ಪ್ರಕಾಶ್, ಜಂಟಿ ಕಾರ್ಯದರ್ಶಿ ಟಿ. ಕೃಷ್ಣಸ್ವಾಮಿ, ಅಭಿಮಾನಿ ಟ್ರಸ್ಟಿ ಮತ್ತು ಎಪಿಎಸ್‌ಸಿಇ ಗವರ್ನಿಂಗ್ ಕೌನ್ಸಿಲ್ ಅಧ್ಯಕ್ಷ ಎ.ಆರ್. ಆಚಾರ್ಯ, ಟ್ರಸ್ಟಿಗಳಾದ ಕೆ.ಪಿ. ನರಸಿಂಹಮೂರ್ತಿ, ಟಿ.ವಿ. ಪ್ರಭು, ಎ. ರಾಮಪ್ರಸಾದ್ ಹಾಗೂ ಮಹಾವಿದ್ಯಾಲಯದ ಪ್ರಭಾರಿ ಪ್ರಾಂಶುಪಾಲ ಕೆ. ಎಸ್. ಆನಂದ್ ಉಪಸ್ಥಿತರಿದ್ದರು



ನಯನ ಸಭಾಂಗಣದಲ್ಲಿ ದಶಮುಖ ಸಾಮಾಜಿಕ ಸೇವಾ ಟ್ರಸ್ಟ್ ಏರ್ಪಡಿಸಿದ್ದ ರಾಜ್ಯೋತ್ಸವ ಸಮಾರಂಭದಲ್ಲಿ ಸಾಹಿತಿ, ಶೇಷಾದ್ರಿಪುರಂ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಎಸ್.ರಾಮಲಿಂಗೇಶ್ವರ (ಸಿಸಿರಾ) ಅವರಿಗೆ ಡಾ.ದೇಜಗೌ ಕನ್ನಡಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಾಸಕ ಉದಯ್ ಗರುಡಾಚಾರ್, ಆದಿಚುಂಚನಗಿರಿ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ಕನ್ನಡಪರ ಹೋರಾಟಗಾರ ಸಿ .ಕೆ.ರಾಮೇಗೌಡ, ಇತಿಹಾಸ ತಜ್ಞ ತಲಕಾಡು ಚಿಕ್ಕರಂಗೇಗೌಡ, ಸಂಸ್ಥೆಯ ಅಧ್ಯಕ್ಷ ಎಚ್.ಕೆ.ಬೊಮ್ಮೇಗೌಡ ಇದ್ದರು



ಎಐಸಿಸಿ ಕಾರ್ಯದರ್ಶಿಯಾಗಿ (ಗುಜರಾತ್ ಉಸ್ತುವಾರಿ) ನೇಮಕವಾದ ಬಳಿಕ ಬೆಂಗಳೂರಿಗೆ ಮೊದಲ ಬಾರಿಗೆ ಆಗಮಿಸಿದ ಬಿ.ವಿ. ಶ್ರೀನಿವಾಸ್ ಅವರನ್ನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ಸ್ವಾಗತಿಸಿದರು

---

### ಸತ್ಯ ಸಾಯಿಬಾಬಾ ಜನ್ಮ ಶತಮಾನೋತ್ಸವ ಸಂಪನ್ನ

## ವಿಶ್ವ ಸಾಂಸ್ಕೃತಿಕ ಮಹೋತ್ಸವಕ್ಕೆ ತೆರೆ

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** ಸತ್ಯ ಸಾಯಿಬಾಬಾ ಅವರ ಜನ್ಮಶತಮಾನೋತ್ಸವ ಪ್ರಯುಕ್ತ ತಾಲ್ಲೂಕಿನ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ನಡೆಯುತ್ತಿದ್ದ ನೂರು ದಿನಗಳ 'ಒಂದು ಜಗತ್ತು ಒಂದು ಕುಟುಂಬ ವಿಶ್ವ ಸಾಂಸ್ಕೃತಿಕ ಮಹೋತ್ಸವ'ಕ್ಕೆ ಭಾನುವಾರ ತೆರೆ ಬಿತ್ತು.

400ಕ್ಕೂ ಹೆಚ್ಚು ಕಲಾವಿದರು ಪ್ರಸ್ತುತಪಡಿಸಿದ 'ಸಾಯಿ ಸಿಂಫನಿ ಆರ್ಕೆಸ್ಟ್ರಾ'ದ ಅದ್ಭುತ ಸಂಗೀತ ಪ್ರಸ್ತುತಿಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು. ಭಾರತದ ಅತಿದೊಡ್ಡ ಸಿಂಫನಿ ಆರ್ಕೆಸ್ಟ್ರಾ ಎನ್ನುವ ಶ್ರೇಯಕ್ಕೆ ಪಾತ್ರವಾಗಿರುವ 'ಸಾಯಿ ಸಿಂಫನಿ ಆರ್ಕೆಸ್ಟ್ರಾ'ದಲ್ಲಿ ವಿಶ್ವದ 60 ದೇಶಗಳ 450 ಕಲಾವಿದರು, 70 ಗಾಯಕರು ಮತ್ತು 200 ವಿದ್ಯಾರ್ಥಿಗಳು ಇದ್ದರು.



ಸತ್ಯಸಾಯಿ ಗ್ರಾಮದಲ್ಲಿ ನಡೆದ ಸತ್ಯ ಸಾಯಿಬಾಬಾ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಕ್ತರು

ಫಿಜಿ ಅಧ್ಯಕ್ಷ ರತು ನೈಕಮಾ ಲಾಲಬಲವು ಅವರ ಸಮಕ್ಷಮದಲ್ಲಿ ಸತ್ಯ ಸಾಯಿ ಬಾಬಾ ಅವರ 21 ಅಡಿ ಎತ್ತರದ ಮಾರ್ಬಲ್ ವಿಗ್ರಹ ಅನಾವರಣ ಗೊಳಿಸಲಾಯಿತು. ಇದು ರೋಬೋಟ್ ಮೂಲಕ ಕೆತ್ತಲಾಗಿರುವ ವಿಶ್ವದ ಅತಿ ಎತ್ತರದ ಮಾರ್ಬಲ್ ವಿಗ್ರಹ. ಮಾಜಿ ಕ್ರಿಕೆಟಿಗ ಸುನಿಲ್ ಗವಾಸ್ಕರ್ ಮಾತನಾಡಿ, '100 ದೇಶಗಳಿಂದ ಬಂದ ಜನರು ಸತ್ಯಸಾಯಿ ಗ್ರಾಮದಲ್ಲಿ ಸೇವೆಗಾಗಿ ಒಗ್ಗೂಡಿರುವುದನ್ನು ನೋಡಿದಾಗ ಪ್ರೀತಿಗೆ ದೇಶ, ಭಾಷೆಯ ಗಡಿ ಇಲ್ಲ ಎನ್ನುವುದು ಮನವರಿಕೆ ಆಗುತ್ತದೆ ಎಂದರು.

ಸತ್ಯ ಸಾಯಿ ಆರೋಗ್ಯ ಮತ್ತು ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಡಾ.ಶ್ರೀನಿವಾಸ್, ಗೌರಿಗದ್ದೆ ಆಶ್ರಮದ ವಿನಯ್ ಗುರೂಜಿ, ಬೆಂಗಳೂರಿನ ಅಕ್ಷಯ ಪಾತ್ರ ಫೌಂಡೇಶನ್ ಮತ್ತು ಇಸ್ಕಾನ್ ಅಧ್ಯಕ್ಷ ಮಧು ಪಂಡಿತ ದಾಸ, ಶ್ರೀಲಂಕಾದ ಬೌದ್ಧ ಸಂಸ್ಥೆ ಜೇತವನರಾಮ ಧಾರ್ಮಿಕ ಸಂಸ್ಥೆಯ ಗುರು ಥಿರೋ- ವೆನ್ ನಿವರ್ಥಪ ಥಿರೋ, ಶ್ರೀಲಂಕಾದ ಮಾಜಿ ಕ್ರಿಕೆಟಿಗ ಅರವಿಂದ್ ಡಿಸಿಲ್ವಾ, ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ ಜಯಚಂದ್ರ, ಪ್ರಶಾಂತಿ ಬಾಲಮಂದಿರ ಟ್ರಸ್ಟ್ ಅಧ್ಯಕ್ಷ ಬಿ.ಎನ್.ನರಸಿಂಹಮೂರ್ತಿ ಉಪಸ್ಥಿತರಿದ್ದರು.

ಚಿಟಿಕೆ ಸುದ್ದಿ

## ₹3.2 ಕೋಟಿ ಮೌಲ್ಯದ ಚಿನ್ನಾಭರಣ ದರೋಡೆ: ಪರಾರಿ



ಹುಬ್ಬಳ್ಳಿ: ಜ್ಯುವೆಲ್ಲರಿ ಮಳಿಗೆಗಳಿಗೆ ಚಿನ್ನಾಭರಣ ಪೂರೈಸುತ್ತಿದ್ದ ಕೇರಳ ಮೂಲದ ವ್ಯಾಪಾರಿಯನ್ನು ಇ.ಡಿ ಅಧಿಕಾರಿಗಳ ಸೋಗಿನಲ್ಲಿ ಬೆದರಿಸಿದ ಐವರ ತಂಡ, ₹3.2 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ₹2 ಲಕ್ಷ ನಗದು ದೋಚಿದೆ.

ನಗರದ ಚನ್ನಮ್ಮ ವೃತ್ತದ ಬಳಿ ಚಿನ್ನದ ವ್ಯಾಪಾರಿ ಸುದೀನ್ ಎಂ.ಆರ್. ಅವರನ್ನು ಅಡ್ಡಗಟ್ಟಿದ ತಂಡ, ವಿಚಾರಣೆ ನೆಪದಲ್ಲಿ ಅವರನ್ನು ಕಾರಿನಲ್ಲಿ ಕರೆದೊಯ್ದು, ಚಿನ್ನಾಭರಣ ಹಾಗೂ ನಗದು ದೋಚಿದೆ ಎಂದು ಪೊಲೀಸರಿಗೆ ದೂರು ನೀಡಲಾಗಿದೆ. ಉಪನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಸಿಸಿಬಿಗೆ ವರ್ಗಾಯಿಸಲಾಗಿದೆ.

## ನಾಳೆ 8 ಸಾವಿರ ಮಹಿಳೆಯರ ಧರಣಿ

ಬೆಂಗಳೂರು: ಮದ್ಯದಂಗಡಿಗಳಿಗೆ ಅನುಮತಿ ನೀಡುವ ಅಧಿಕಾರವನ್ನು ಗ್ರಾಮಸಭೆಗಳಿಗೆ ನೀಡುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಇದೇ 25ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಎಂಟು ಸಾವಿರ ಮಹಿಳೆಯರು ಧರಣಿ ಸತ್ಯಾಗ್ರಹ ನಡೆಸಲಿದ್ದಾರೆ.

ಮದ್ಯ ನಿಷೇಧ ಆಂದೋಲನ ಈ ಹೋರಾಟ ನಡೆಸುತ್ತಿದ್ದು, ಹರಿಯಾಣ, ರಾಜಸ್ಥಾನ, ಮಹಾರಾಷ್ಟ್ರ ರಾಜ್ಯಗಳ ಮಾದರಿಯಲ್ಲಿ ಮದ್ಯದಂಗಡಿಗಳಿಗೆ ಅನುಮತಿ ನೀಡುವ ಅಧಿಕಾರವನ್ನು ಗ್ರಾಮಸಭೆಗಳಿಗೆ ನೀಡಬೇಕು. ಅಕ್ರಮ ಮದ್ಯ ಮಾರಾಟ ನಿಲ್ಲಿಸಬೇಕು. ಪ್ರತಿ ಗ್ರಾಮದಲ್ಲಿ ಮಹಿಳೆಯರನ್ನು ಒಳಗೊಂಡ ಜಾಗೃತ ಸಮಿತಿಗಳನ್ನು ರಚಿಸಿ, ಅರೆ ನ್ಯಾಯಿಕ ಅಧಿಕಾರ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಸಂಘಟನೆಯ ಸಂಚಾಲಕಿ ಸ್ವರ್ಣಾ ಭಟ್ ಹೇಳಿದ್ದಾರೆ.

## ಶಿವಕುಮಾರ್ ಸಿ.ಎಂ ಆಗಲೆಂದು ವಿಶೇಷ ಪೂಜೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): 'ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲಿ ಎಂದು ತಾಲ್ಲೂಕಿನ ಕಲ್ಲಹಳ್ಳಿಯ ವೆಂಕಟೇಶ್ವರ ದೇವಸ್ಥಾನದಲ್ಲಿಯುವ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ 1001 ತೆಂಗಿನಕಾಯಿ ಒಡೆದು ವಿಶೇಷ ಪೂಜೆ ಮಾಡಿದರು.

'ಶಿವಕುಮಾರ್ ಅವರು ಪಕ್ಷಕ್ಕಾಗಿ ದುಡಿದಿದ್ದಾರೆ. ಸಿ.ಎಂ ಆಗಬೇಕು ಎಂಬುದು ಕಾರ್ಯಕರ್ತರ ಬಯಕೆ' ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ಕುಮಾರ ಆಲಗೂರ ಹೇಳಿದರು.

## ಒಕ್ಕಲಿಗರ ಸಂಘಕ್ಕೆ ಶ್ರೀನಿವಾಸ್ ಅಧ್ಯಕ್ಷ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಎಲ್. ಶ್ರೀನಿವಾಸ್ ಚುನಾಯಿತರಾಗಿದ್ದಾರೆ.



ಶ್ರೀನಿವಾಸ್

ಸಂಘದ ಪದಾಧಿಕಾರಿಗಳ ಹುದ್ದೆಗೆ ಭಾನುವಾರ ಚುನಾವಣೆ ನಡೆದಿದ್ದು, ಉಪಾಧ್ಯಕ್ಷರಾಗಿ ಕೆ.ವಿ. ರೇಣುಕಾಪ್ರಸಾದ್, ಎಂ.ಪುಟ್ಟಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ಸಿ.ಜಿ. ಗಂಗಾಧರ್, ಸಹಾಯಕ ಕಾರ್ಯದರ್ಶಿ ಆಗಿ ಡಿ.ಕೆ. ರಮೇಶ್ ಹಾಗೂ ಖಜಾಂಚಿಯಾಗಿ ಕೆ.ವಿ. ಶ್ರೀಧರ್ ಆಯ್ಕೆಯಾಗಿದ್ದಾರೆ.

# 'ಆದೇಶ ಉಲ್ಲಂಘಿಸಿ ಗಣಿ ಹರಾಜು'

### ಸಂಡೂರಿನ ಐದು ಬ್ಲಾಕ್‌ಗಳ ಸಂಯೋಜನೆಯಲ್ಲಿ ಲೋಪ: ಸಿಇಸಿ ವರದಿ

• ಹರಿಶಂಕರ್ ಆರ್.



ಬಳ್ಳಾರಿ: ಸಂಡೂರು ತಾಲ್ಲೂಕಿನಲ್ಲಿ ರಾಜ್ಯ ಸರ್ಕಾರ ಹರಾಜು ಹಾಕಿರುವ ಸುಮಾರು 4,480 ಎಕರೆ ಪ್ರದೇಶದ ಐದು ಕಬ್ಬಿಣದ ಅದಿರು ಗಣಿ ಬ್ಲಾಕ್‌ಗಳ ಸಂಯೋಜನೆ ಮತ್ತು ಹರಾಜಿನಲ್ಲಿ ಕೋರ್ಟ್ ಆದೇಶ ಉಲ್ಲಂಘನೆ ಆಗಿರುವುದಾಗಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಗಿರುವ ಕೇಂದ್ರದ ಉನ್ನತಾಧಿಕಾರ ಸಮಿತಿ (ಸಿಇಸಿ) ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಹೊಸದಾಗಿ ಸಂಯೋಜಿಸಿ, ರಚಿಸಿರುವ, ಐದು ಗಣಿ ಬ್ಲಾಕ್‌ಗಳ ತ್ವರಿತ ಕಾರ್ಯಾಚರಣೆಗೆ ಅವಕಾಶ ಕೋರಿ 'ಕರ್ನಾಟಕ ಕಬ್ಬಿಣ ಮತ್ತು ಉಕ್ಕು ತಯಾರಕರ ಸಂಘ (ಕಿಸ್ಮಾ)' ಮತ್ತು ರಾಜ್ಯ ಸರ್ಕಾರ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿದ್ದ ಸುಪ್ರೀಂ ಕೋರ್ಟ್ ಈ ಕುರಿತು ವರದಿ ನೀಡುವಂತೆ ಸೆ.18 ರಂದು ಸಿಇಸಿಗೆ ಸೂಚಿಸಿತ್ತು. ಸಿಇಸಿ ನ. 3ರಂದು ವರದಿ (ಸಂಖ್ಯೆ 55) ಸಲ್ಲಿಸಿದೆ.

ರಾಜ್ಯ ಸರ್ಕಾರ 'ಅರಣ್ಯ ಸೃಷ್ಟಿ ಮತ್ತು ಪುನಶ್ಚೇತನ (ಆರ್ ಆ್ಯಂಡ್ ಆರ್)' ಯೋಜನೆಗಳನ್ನು ಸಿದ್ಧಪಡಿಸದೆ 'ಎ', 'ಬಿ' ಮತ್ತು 'ಸಿ' ವರ್ಗದ ಗಣಿಗಳನ್ನು ಒಳಗೊಂಡ ಹಲವಾರು ಗಣಿಗಳನ್ನು ದೊಡ್ಡ ಗಣಿ ಬ್ಲಾಕ್‌ಗಳಾಗಿ ಸಂಯೋಜಿಸಿ, ಹರಾಜು ಮಾಡಿದೆ. ಅದಿರು ಉತ್ಪಾದನಾ ಮಿತಿಗಳನ್ನು ನಿರ್ಧರಿಸಲು ಆರ್ ಆ್ಯಂಡ್ ಆರ್ ಅತ್ಯಗತ್ಯ. ಇದು ಇಲ್ಲದೆ ನ್ಯಾಯಬದ್ಧ ಉತ್ಪಾದನಾ ಮಿತಿ ನಿರ್ಧರಿಸುವುದು ಕಷ್ಟಸಾಧ್ಯ ಎಂದು ಸಿಇಸಿ ತಿಳಿಸಿದೆ.

ಹೊಸ ಬ್ಲಾಕ್ ಗಳು 217.20 ಎಕರೆ ಈವರೆಗೂ ಗಣಿಗಾರಿಕೆಗೆ ಬಳಕೆಯಾಗದ ಅರಣ್ಯ ಪ್ರದೇಶವನ್ನು ಒಳಗೊಂಡಿವೆ. ಗಣಿ ಗುತ್ತಿಗೆಗಳೊಂದಿಗೆ ಅರಣ್ಯವನ್ನು ಸಂಯೋಜಿಸಲು ಕಾನೂನಾತ್ಮಕ ಮತ್ತು ಪರಿಹಾರಾತ್ಮಕ ಕ್ರಮಗಳನ್ನು ಪಾಲಿಸಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಸಿ' ವರ್ಗದ (ಅಕ್ರಮ ಮಾಡಿ ರದ್ದಾಗಿದ್ದ) ಗಣಿಗಳ ಭಾಗಗಳನ್ನು ಹೊಂದಿರುವ ಬ್ಲಾಕ್‌ಗಳಿಗೆ ಸಂಬಂಧಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಸೂಚಿಸಿರುವ ನಿಯಮಾವಳಿಗಳನ್ನು ಮೀರಿದೆ ಎಂದು ಸಿಇಸಿ ಪತ್ತೆ ಮಾಡಿದೆ. ಇದು 'ಸಿ' ಗಣಿಗಳಿಗೆ ವಿಧಿಸಿದ್ದ ಮಿತಿಗಳನ್ನು ಸಡಿಲಗೊಳಿಸುತ್ತದೆ ಎಂದು ಸಿಇಸಿ ಎಚ್ಚರಿಸಿದೆ.

ಗಣಿ ಬಾಧಿತ ಜಿಲ್ಲೆಗಳಲ್ಲಿ ಪರಿಸರ ಪುನಶ್ಚೇತನಕ್ಕಾಗಿ ರಚಿಸಲಾಗಿರುವ ವಿಶೇಷ ಕಾರ್ಯಕ್ರಮಕ್ಕೆ (ಎಸ್‌ಪಿವಿ) ನೀಡಲಾಗುವ ಕೊಡುಗೆಯನ್ನು ಸರ್ಕಾರ ಈ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ಶೇ 25ರಿಂದ 10ಕ್ಕೆ ಇಳಿಸಿರುವುದನ್ನೂ ಸಿಇಸಿ ಪತ್ತೆ ಮಾಡಿದೆ.

ಹೊಸ ಅರಣ್ಯ ಪ್ರದೇಶವನ್ನು ಗಣಿಗಾರಿಕೆಗೆ ಬಳಸುವುದಕ್ಕೂ ಮೊದಲು, ಗಣಿಗಾರಿಕೆಯಿಂದ ಈಗಾಗಲೇ ನಾಶವಾಗಿರುವ ಪ್ರದೇಶವನ್ನು ಸರ್ಕಾರ ಪುನಶ್ಚೇತನಗೊಳಿಸಬೇಕು. ಇದು ಸುಸ್ಥಿರ ಗಣಿಗಾರಿಕೆ ಪ್ರೋತ್ಸಾಹಿಸಲು ಅತ್ಯಗತ್ಯ ಎಂದೂ ಸಿಇಸಿ ಪ್ರತಿಪಾದಿಸಿದೆ.

### ಸಂಯೋಜಿತ ಗಣಿಗಳು ಯಾವವು?

ಜೈಸಿಂಗಪುರ ದಕ್ಷಿಣ ಬ್ಲಾಕ್ (1,221.83 ಎಕರೆ), ಜೈಸಿಂಗಪುರ ಉತ್ತರ (1,490.44 ಎಕರೆ), ಸೋಮನಹಳ್ಳಿ ಅದಿರು ಬ್ಲಾಕ್ (670.94 ಎಕರೆ), ವ್ಯಾಸನಕೆರೆ ಬ್ಲಾಕ್ (1,001.76 ಎಕರೆ), ಎಚ್. ಆರ್ ಗವಿಯಪ್ಪ ಗಣಿ ಬ್ಲಾಕ್-(98.94 ಎಕರೆ)

ಈ ಬ್ಲಾಕ್‌ಗಳಲ್ಲಿ 108.62 ದಶಲಕ್ಷ ಟನ್ (10.8 ಕೋಟಿ ಟನ್) ಅದಿರು ನಿಕ್ಷೇಪ ದಾಸ್ತಾನು ಇರಬಹುದು ಎಂದು ಅಂದಾಜಿಸಲಾಗಿದೆ.

### ಸಿಇಸಿ ಶಿಫಾರಸುಗಳು

ಗಣಿ ಆರಂಭಕ್ಕೂ ಮುನ್ನ, ಎಲ್ಲಾ ಸಂಯೋಜಿತ ಗಣಿಗಳಿಗೆ ಏಕೀಕೃತ, ಬ್ಲಾಕ್ ಮಟ್ಟದ ಆರ್ ಆ್ಯಂಡ್ ಆರ್ ಸಿದ್ಧಪಡಿಸಬೇಕು. 'ಸಿ' ವರ್ಗದ ಗಣಿಗಳಿಗೆ ನಿಗದಿಪಡಿಸಲಾದ ಹರಾಜು ಷರತ್ತು ಪಾಲಿಸಬೇಕು. ಸಂಯೋಜಿತ ಗಣಿ ಬ್ಲಾಕ್‌ಗಳಲ್ಲಿ ಸೇರಿಸಲಾದ ಅರಣ್ಯ ಪ್ರದೇಶಗಳಿಗೆ ಪೂರ್ಣ ಅರಣ್ಯ ಭೂಮಿಯ ಮೌಲ್ಯ ಮತ್ತು ಇತರ ಶಾಸನಬದ್ಧ ಪರಿಹಾರ ಶುಲ್ಕಗಳನ್ನು ವಿಧಿಸಬೇಕು. ಶಾಸನಬದ್ಧ ಅನುಮೋದನೆಗಳು ಮತ್ತು ಅನುಸರಣೆ ಇಲ್ಲದೇ, ಅರಣ್ಯ ಪ್ರದೇಶಗಳಲ್ಲಿ ಯಾವುದೇ ಗಣಿಗಾರಿಕೆ ನಡೆಸಬಾರದು.

### ಸಾಹಿತಿ ಬಿ.ಟಿ.ಲಲಿತಾ ನಾಯಕ್ ಹೇಳಿಕೆ

'ಭಕ್ತಿಯ ಜೊತೆಗೆ ಬೆರೆತ ಮೌಢ್ಯಗಳು ಜನರ ವಿಚಾರ ಶಕ್ತಿಯನ್ನು ಹಾಳು ಮಾಡಿವೆ. ಮೌಢ್ಯಗಳಿಂದ ಹೊರಬರಲು ಶಿಕ್ಷಣವೇ ಪರಿಹಾರ' ಎಂದರು

## 'ರಾಮ, ಲಕ್ಷ್ಮಣ, ರಾವಣ ಕ್ರೂರಿಗಳು'

ದಾವಣಗೆರೆ: 'ರಾಮಾಯಣದಲ್ಲಿರುವ ಶ್ರೀರಾಮ, ಲಕ್ಷ್ಮಣ, ರಾವಣರು ಆದರ್ಶರಲ್ಲ. ಅವರು ಕ್ರೂರಿಗಳು' ಎಂದು ಬಂಡಾಯ ಸಾಹಿತಿ ಬಿ.ಟಿ. ಲಲಿತಾ ನಾಯಕ್ ಅಭಿಪ್ರಾಯಪಟ್ಟರು.

'ಬೇರು-ಚಿಗುರು' ಸಂಸ್ಥೆ ಇಲ್ಲಿ ಭಾನುವಾರ ಆಯೋಜಿಸಿದ್ದ 'ಕನ್ನಡ ಸಾಹಿತ್ಯ ಮಹಿಳಾ ಸಂವೇದನೆಗಳು' ವಿಚಾರ ಸಂಕಿರಣದ ಸಮಾರೋಪದಲ್ಲಿ ಅವರು ಮಾತನಾಡಿದರು.



ಬಿ.ಟಿ.ಲಲಿತಾ ನಾಯಕ್

'ಶೂರ್ಪನಖಿ ಮೂಗು ಕತ್ತರಿಸಿದ ಲಕ್ಷ್ಮಣ, ಸೀತೆಯ ಮೇಲೆ ಸಂಶಯ ವ್ಯಕ್ತಪಡಿಸಿ ಕಾಡಿಗೆ ಅಟ್ಟಿದ ಶ್ರೀರಾಮ ಆದರ್ಶರಾಗಲು ಸಾಧ್ಯವಿಲ್ಲ. ಭಕ್ತಿ ಹೆಸರಿನಲ್ಲಿ ಅವರನ್ನು ಆದರ್ಶರಂತೆ ಬಿಂಬಿಸಲಾಗಿದೆ. ಸೀತೆಯನ್ನು ಅಪಹರಿಸಿದ ರಾವಣ ಕೂಡ ಕ್ರೂರಿಯೇ' ಎಂದು ಪ್ರತಿಪಾದಿಸಿದರು.

'ದೇಗುಲಗಳು ಜನರನ್ನು ಮೌಢ್ಯದತ್ತ ತಳ್ಳುತ್ತಿವೆ. ಗ್ರಂಥಾಲಯಗಳು ಜ್ಞಾನಾರ್ಜನೆಯತ್ತ ಕರೆದೊಯ್ಯುತ್ತವೆ. ಮನುಷ್ಯನ ತಪ್ಪುಗಳೇ ಸಾಹಿತ್ಯ, ಮಹಾಕಾವ್ಯಗಳಾಗಿ ರೂಪಿತಗೊಂಡಿವೆ. ರಾಮಾಯಣ ಮತ್ತು ಮಹಾಭಾರತ ಕೂಡ ಇಂತಹದೇ ಸಾಹಿತ್ಯ. ಶಾಂತಿಯ ಪ್ರತೀಕವಾಗಿರುವ ಬುದ್ಧನ ಕೈಯಲ್ಲಿ ಕತ್ತಿ, ಗುರಾಣಿ, ಖಡ್ಗ ಏನೂ ಇಲ್ಲ. ಮಹಾತ್ಮಗಾಂಧಿ ಕೈಯಲ್ಲಿ ಚರಕ ಮಾತ್ರ ಇದೆ. ಇತ್ತೀಚೆಗೆ ಶ್ರೀರಾಮನ ಕೈಗೆ ಬಿಲ್ಲು, ಬಾಣವನ್ನು ನೀಡಲಾಗಿದೆ' ಎಂದರು.

# ಸರ್ಕಾರ ಬೀಳಲ್ಲ; ಮತ್ತಷ್ಟು ದೋಚಬೇಕಲ್ಲವೇ?: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: 'ಕಾಂಗ್ರೆಸ್ ಸರ್ಕಾರ ಅಷ್ಟು ಸುಲಭವಾಗಿ ಪತನ ಆಗುತ್ತದೆ ಎಂಬ ಭ್ರಮೆಯಲ್ಲಿ ನಾನಿಲ್ಲ. ಮುಖ್ಯಮಂತ್ರಿ ಕುರ್ಚಿಗೆ ಪೈಪೋಟಿ ಇದ್ದರೂ ಸಿಕ್ಕ ಅವಕಾಶದಲ್ಲೇ ಆದಷ್ಟು ದೋಚುವ ಭಾವನೆ ಅವರಲ್ಲಿದೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇಲ್ಲಿ ವ್ಯಂಗ್ಯವಾಡಿದರು.

ತಾಲ್ಲೂಕಿನ ಕಾಮದೇನಹಳ್ಳಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಆದರೆ, ಮುಂದೇನು ನಡೆಯುತ್ತದೆ ಎಂದು ಈಗಿನ ರಾಜಕಾರಣದಲ್ಲಿ ಅರ್ಥ ಮಾಡಿಕೊಳ್ಳುವುದು ಕಷ್ಟ. ಪರಿಸ್ಥಿತಿ ಗಮನಿಸಿದರೆ ಏನು ಬೇಕಾದರೂ ಆಗಬಹುದು. ಈ ನಿಟ್ಟಿನಲ್ಲಿ ಕಾರ್ಯಕರ್ತರು ಜನರ ಮಧ್ಯೆ ಕೆಲಸ ಮಾಡಿ ಎಂದಷ್ಟೇ ಪಕ್ಷದ ಕಾರ್ಯಕ್ರಮದಲ್ಲಿ ಹೇಳಿದ್ದೇನೆ' ಎಂದರು.

ಕಾಂಗ್ರೆಸ್‌ನಲ್ಲಿರುವ ಒಕ್ಕಲಿಗ ಶಾಸಕರ ದೆಹಲಿ ಭೇಟಿ ಕುರಿತು ಪ್ರತಿಕ್ರಿಯಿಸಿ, ದೆಹಲಿಗೆ ಹೋಗಿ ಏನು ಸಾಧನೆ ಮಾಡಿದರು. ಈ ಬಗ್ಗೆ ಅವರು ಏನಾದರೂ ಹೇಳಿದ್ದಾರೆಯೇ? ಎಂದರು.

'ಒಕ್ಕಲಿಗರಿಗೆ ಮಾತ್ರವಲ್ಲ; ಪ್ರತಿ ಜಾತಿಗೂ ಪ್ರಾಧಾನ್ಯ ಸಿಗಬೇಕು. ಸರ್ಕಾರ ಏಳು ಕೋಟಿ ಜನರ ಬದುಕು ಸರಿಪಡಿಸುವ ಕೆಲಸ ಮಾಡಬೇಕು. ಸರ್ಕಾರ ಒಂದು ಜಾತಿಗೆ ಸೀಮಿತವಲ್ಲ' ಎಂದರು.

> ಸ್ಥಳೀಯ ಸಂಸ್ಥೆ ಚುನಾವಣೆಗಳ ಸಂದರ್ಭದಲ್ಲಿ ಸ್ಥಳೀಯವಾಗಿಯೇ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ವಿಧಾನಸಭೆ, ಲೋಕಸಭೆ ಚುನಾವಣೆಗಳಲ್ಲಿ ಬಿಜೆಪಿ ಜೊತೆ ಮೈತ್ರಿಯಲ್ಲಿ ಕೆಲಸ ಮಾಡುತ್ತೇವೆ
> **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

## ಜಾನಪದ ಕಲರವ


ಚಿತ್ರ: ತಾಜುದ್ದೀನ್ ಆಜಾದ್



ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕಲಬುರಗಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಭುವನೇಶ್ವರಿ ಮಾತೆಯ ಭಾವಚಿತ್ರ ಮೆರವಣಿಗೆಯಲ್ಲಿ ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು

## 'ತಪ್ಪು ಮುಚ್ಚಿಕೊಳ್ಳಲು ರಾಜ್ಯ ಸರ್ಕಾರದ ಮೇಲೆ ಆರೋಪ'

ಪ್ರಜಾವಾಣಿ ವಾರ್ತೆ



ಶಿವಾನಂದ ಪಾಟೀಲ

ಹುಬ್ಬಳ್ಳಿ: 'ಕಬ್ಬಿಗೆ ಬೆಲೆ ನಿಗದಿಪಡಿಸುವಲ್ಲಿ ಕೇಂದ್ರ ಸರ್ಕಾರದ ತಪ್ಪು ಮುಚ್ಚಿಟ್ಟುಕೊಳ್ಳಲು ಸಚಿವ ಪ್ರಲ್ಹಾದ ಜೋಶಿ, ರಾಜ್ಯ ಸರ್ಕಾರದ ವಿರುದ್ಧ ಆರೋಪಿಸುತ್ತಿದ್ದಾರೆ' ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಭಾನುವಾರ ಇಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಸಕ್ಕರೆ, ಎಥೆನಾಲ್ ಮಾರಾಟ ಮತ್ತು ನಿಯಂತ್ರಣವು ಕೇಂದ್ರದ ಅಧೀನದಲ್ಲಿದೆ. ರಫ್ತು ಮತ್ತು ಆಮದು ಸಹ ಅದರ ವ್ಯಾಪ್ತಿಗೇ ಬರಲಿದೆ. ತನ್ನಲ್ಲಿ ಸಾಕಷ್ಟು ಗೊಂದಲ ಇಟ್ಟುಕೊಂಡು ರಾಜ್ಯ ಸರ್ಕಾರದ ವಿರುದ್ಧ ಮಾತನಾಡುವುದು ಸರಿಯಲ್ಲ' ಎಂದು ಅಭಿಪ್ರಾಯಪಟ್ಟರು.

'ರಾಜ್ಯದ ಖಾಸಗಿ ಸಕ್ಕರೆ ಕಾರ್ಖಾನೆ ಮಾಲೀಕರ ಸಂಘದ ಅಧ್ಯಕ್ಷರು ಬಿಜೆಪಿಯವರೇ. ಸಮಸ್ಯೆಗಳು ಸಂಘಕ್ಕೆ ತಿಳಿದಿವೆ. ಆದರೆ, ಏನೂ ಸಮಸ್ಯೆ ಇಲ್ಲ ಎಂದು ವರದಿ ನೀಡಲಾಗಿದೆ. ಈ ಕುರಿತು ಸಚಿವ ಜೋಶಿ ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದರು.

'ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ನಿಗದಿ ಮಾಡುವುದೂ ಕೇಂದ್ರದ ಜವಾಬ್ದಾರಿ. ಈ ವಿಷಯದಲ್ಲಿ ಪ್ರಲ್ಹಾದ ಜೋಶಿ, ಬಸವರಾಜ ಬೊಮ್ಮಾಯಿ ಜನರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ಟೀಕಿಸಿದರು.

# 'ಹೈಕಮಾಂಡ್'ನತ್ತ 'ಕೈ' ಬಿಕ್ಕಟ್ಟು

ಒಂದನೇ ಪುಟದಿಂದ...

ಖರ್ಗೆ ಜೊತೆಗಿನ ಮಾತುಕತೆಯ ಬಳಿಕ ಪ್ರತಿಕ್ರಿಯಿಸಿದ್ದ ಸಿದ್ದರಾಮಯ್ಯ, 'ಹೈಕಮಾಂಡ್ ತೀರ್ಮಾನವನ್ನು ನಾನು, ಡಿ.ಕೆ. ಶಿವಕುಮಾರ್, ಎಲ್ಲ ನಾಯಕರೂ ಒಪ್ಪಲೇಬೇಕು' ಎಂದಿದ್ದರು.

**ಸಚಿವರಿಂದ ಖರ್ಗೆ ಭೇಟಿ:** ಸಚಿವರಾದ ಎಚ್.ಸಿ. ಮಹದೇವಪ್ಪ, ಕೆ.ಜೆ ಜಾರ್ಜ್, ಕೆ. ವೆಂಕಟೇಶ್, ಲಕ್ಷ್ಮಿ ಹೆಬ್ಬಾಳಕರ, ಶಾಸಕರಾದ ಬಿ.ಜಿ. ಗೋವಿಂದಪ್ಪ, ಟಿ. ರಘುಮೂರ್ತಿ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಭಾನುವಾರ ಭೇಟಿ ಮಾಡಿದರು.

**ಡಿಕೆಶಿ–ಜಾರ್ಜ್ ಭೇಟಿ:** ಜ್ವರದಿಂದ ಬಳಲುತ್ತಿದ್ದ ಶಿವಕುಮಾರ್ ಅವರು ಭಾನುವಾರ ಬೆಳಿಗ್ಗೆ ಆಸ್ಪತ್ರೆಗೆ ತೆರಳಿದ್ದರು. ಸಂಜೆ ಸಚಿವ ಕೆ.ಜೆ. ಜಾರ್ಜ್ ಅವರ ಸರ್ಕಾರಿ ನಿವಾಸಕ್ಕೆ ತೆರಳಿ ಮಾತುಕತೆ ನಡೆಸಿರುವುದು ಕುತೂಹಲ ಮೂಡಿಸಿದೆ. ಖರ್ಗೆ ಅವರು ಸೋಮವಾರ ದೆಹಲಿಗೆ ತೆರಳುವ ಸಾಧ್ಯತೆ ಇದ್ದು, ಅದಕ್ಕೂ ಮೊದಲು ಅವರನ್ನು ಡಿ.ಕೆ.ಶಿವಕುಮಾರ್ ಭೇಟಿ ಮಾಡುವ ಸಂಭವವಿದೆ.

ಖರ್ಗೆ ಭೇಟಿ ಬಳಿಕ ಮಾತನಾಡಿದ ಮಹದೇವಪ್ಪ, 'ಇನ್ನೂ ಎರಡೂವರೆ ವರ್ಷ ಕಾಂಗ್ರೆಸ್ ಮುಖ್ಯಮಂತ್ರಿ ಇರುತ್ತಾರೆ. ಮುಖ್ಯಮಂತ್ರಿ ಬದಲಾವಣೆ ಸನ್ನಿವೇಶ ಬಂದಾಗ ಹೈಕಮಾಂಡ್ ತೀರ್ಮಾನ ಮಾಡುತ್ತದೆ' ಎಂದರು. ಆದರೆ, 'ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆಯೇ' ಎಂದು ಹಲವು ಬಾರಿ ಪ್ರಶ್ನಿಸಿದರೂ ಉತ್ತರಿಸದೆ ಜಾರಿಕೊಂಡರು. ಖರ್ಗೆ ಭೇಟಿಯ ಬಳಿಕ ಮುಖ್ಯಮಂತ್ರಿಯವರನ್ನೂ ಮಹದೇವಪ್ಪ ಭೇಟಿ ಮಾಡಿದರು.

ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮಾತನಾಡಿ, 'ನಮ್ಮ ಇಲಾಖೆಯಿಂದ ಇದೇ 28ರಂದು ಅಂಗನವಾಡಿ ಕಾರ್ಯಕ್ರಮ ಇದೆ. ಅದಕ್ಕೆ ರಾಹುಲ್ ಗಾಂಧಿ ಅವರಿಗೆ ಆಹ್ವಾನ ನೀಡಲು ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದೆ' ಎಂದರು.

### 'ನಾನೂ ರೇಸ್‌ನಲ್ಲಿದ್ದೇನೆ'

ಒಂದನೇ ಪುಟದಿಂದ...

'ಶಾಸಕಾಂಗ ಪಕ್ಷ ಸಭೆಯಲ್ಲಿ ನಾವೆಲ್ಲರೂ ಮುಖ್ಯಮಂತ್ರಿ ಅವರನ್ನು ಆಯ್ಕೆ ಮಾಡಿದ್ದೆವು. ಆಗ ಎರಡೂವರೆ ವರ್ಷ ಅಧಿಕಾರ ಹಂಚಿಕೆಯ ಚರ್ಚೆ ಆಗಿರಲಿಲ್ಲ. ದೆಹಲಿಯಲ್ಲಿ ಆ ಬಗ್ಗೆ ಚರ್ಚೆ ಆಗಿದ್ದರೆ, ಅದಕ್ಕೂ ನಮಗೂ ಸಂಬಂಧವಿಲ್ಲ. ಏನೂ ಬದಲಾಗುವುದಿಲ್ಲ ಎಂದೂ ಹೇಳಲಾಗದು' ಎಂದರು.

'ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದವರೇ ಆಗಿದ್ದು, ಇಲ್ಲಿನ ರಾಜಕಾರಣದ ಇಂಚಿಂಚೂ ಅವರಿಗೆ ಗೊತ್ತಿದೆ. ರಾಹುಲ್ ಗಾಂಧಿ ಅವರು ವಿದೇಶ ಪ್ರವಾಸದಿಂದ ವಾಪಸಾದ ನಂತರ, ಖರ್ಗೆ ಅವರು ಇಲ್ಲಿನ ವಿದ್ಯಮಾನಗಳನ್ನು ವಿವರಿಸುತ್ತಾರೆ. ಗೊಂದಲಗಳಿದ್ದರೆ, ರಾಹುಲ್ ಗಾಂಧಿ ಅವರು ಅವನ್ನು ಬಗೆಹರಿಸುತ್ತಾರೆ' ಎಂದರು.

### 'ಪರಮೇಶ್ವರ ಸಿ.ಎಂ ಆಗಲಿ'

ಒಂದನೇ ಪುಟದಿಂದ...

**ರಹಸ್ಯ ಮಾತುಕತೆ:** ಖಾಸಗಿ ಕಾರ್ಯಕ್ರಮದ ನಿಮಿತ್ತ ಶನಿವಾರ ನಗರಕ್ಕೆ ಬಂದಿದ್ದ ಡಾ. ಯತೀಂದ್ರ ಸಿದ್ದರಾಮಯ್ಯ ಅವರು, ಶಾಸಕ ಪ್ರಸಾದ ಅಬ್ಬಯ್ಯ ಮನೆಗೆ ಭೇಟಿ ನೀಡಿದ್ದರು. ಅದರ ಬೆನ್ನಲ್ಲೇ ಶಾಸಕರು, 'ಪರಮೇಶ್ವರ ಮುಖ್ಯಮಂತ್ರಿ ಆಗಬೇಕು' ಎಂದಿದ್ದಾರೆ.

### 'ಒಬ್ಬರಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿಲ್ಲ'

ಒಂದನೇ ಪುಟದಿಂದ...

'ಪರಮೇಶ್ವರ ಅವರು ಕೆಪಿಸಿಸಿ ಅಧ್ಯಕ್ಷರಾಗಿ 8 ವರ್ಷ ದುಡಿದಿದ್ದಾರೆ. ಅವರ ಕಾಲದಲ್ಲಿ ಮಾಡಿದ ಕಾರ್ಯಕ್ರಮಗಳಿಂದ ಪಕ್ಷಕ್ಕೆ ಬಲ ಬಂದಿದೆ. ಸರ್ಕಾರ ರಚನೆ ಮಾಡುವಷ್ಟು ಪಕ್ಷವನ್ನು ಸಿದ್ಧಪಡಿಸಿದವರಲ್ಲಿ ಅವರೂ ಒಬ್ಬರು. ಅವರಿಗೂ ಸಮಾನ ಅವಕಾಶ ಸಿಗಬೇಕು ಎಂಬುದು ನನ್ನ ಒತ್ತಾಸೆ' ಎಂದರು.

'ತಾವು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಪರಮೇಶ್ವರ ಅವರು ಹಿಂದೆಯೂ ಹೇಳಿದ್ದಾರೆ. ಅದರಲ್ಲಿ ತಪ್ಪಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಪರಿಶಿಷ್ಟರು, ಅಲ್ಪಸಂಖ್ಯಾತ ಸಮುದಾಯದವರೇ ಮುಖ್ಯ ಮತದಾರರು. ಆ ಸಮುದಾಯಗಳಿಗೆ ಪ್ರಾತಿನಿಧ್ಯ ಸಿಗಬೇಕು. ಎರಡೂವರೆ ವರ್ಷದ ನಂತರ ಅಧಿಕಾರ ಹಸ್ತಾಂತರ ವಿಚಾರ ನನಗೆ ಗೊತ್ತಿಲ್ಲ' ಎಂದರು.

**'ತೇನ್‌ಸಿಂಗ್ ಜತೆ ಹಿಮಾಲಯ ಏರಿದವರಿಗೆ ಬೆಲೆ ಇಲ್ಲವೇ?':** '1960ರಲ್ಲಿ ತೇನ್‌ಸಿಂಗ್ ನೋರ್ಗೆ ಹಿಮಾಲಯ ಪರ್ವತ ಏರಿದರು. ಆಗ ಜಗತ್ತಿನ ಎಲ್ಲ ಪತ್ರಿಕೆಗಳೂ ತೇನ್‌ಸಿಂಗ್ ಬಗ್ಗೆ ಬರೆದವು. ಅವರ ಜತೆ ಇನ್ನೂ 14 ಜನರೂ ಇದ್ದರು. ಅವರ ಹೆಸರು ಎಲ್ಲೂ ಬರಲಿಲ್ಲ. ಇದು ಹಾಗೇ ಆಗಿದೆ' ಎಂದು ಡಿ.ಕೆ.ಶಿವಕುಮಾರ್ ಅವರ ಹೆಸರು ಹೇಳದೆ ವ್ಯಂಗ್ಯವಾಡಿದರು.

## 'ಬೆಂಗಳೂರಿನಲ್ಲಿ ಕಾಸರಗೋಡು ಸಮ್ಮೇಳನ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಕಾಸರಗೋಡು ಜಿಲ್ಲೆಯಲ್ಲಿ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯ ಖಂಡಿಸಿ ಡಿಸೆಂಬರ್ 2ನೇ ವಾರ ಬೆಂಗಳೂರಿನಲ್ಲಿ 'ಕಾಸರಗೋಡು ಸಮ್ಮೇಳನ' ಆಯೋಜಿಸಲಾಗುವುದು' ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ತಿಳಿಸಿದರು.

ಡಿಸೆಂಬರ್ 3ನೇ ವಾರದಲ್ಲಿ ಮಂಗಳೂರು- ಕಾಸರಗೋಡು ಹೆದ್ದಾರಿ ಬಂದ್ ಮಾಡಲಾಗುವುದು ಎಂದು ತಿಳಿಸಿದರು.

## ದೈತ್ಯ ಜೇಡ ಪತ್ತೆ



ಜೈಂಟ್‌ವುಡ್ ಸ್ಪೈಡರ್
ಚಿತ್ರ: ಸಂಗಮೇಶ ಕಡಗದ

ಪ್ರಜಾವಾಣಿ ವಾರ್ತೆ

ಗದಗ: ದಟ್ಟ ಅರಣ್ಯಪ್ರದೇಶದಲ್ಲಿ ಕಾಣಿಸಿಕೊಳ್ಳುವ ದೈತ್ಯ ಜೇಡ (ಜೈಂಟ್‌ವುಡ್ ಸ್ಪೈಡರ್) ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಸಾಸರವಾಡ ಪ್ರದೇಶದಲ್ಲಿ ಗೋಚರವಾಗಿದೆ.

ಜೀವವೈವಿಧ್ಯ ಸಂಶೋಧಕ ಮಂಜುನಾಥ ಎಸ್.ನಾಯಕ ಮತ್ತು ಅವರ ತಂಡದ ಸಂಗಮೇಶ ಕಡಗದ, ಶರಣುಗೌಡರ ಅವರು ದೈತ್ಯ ಜೇಡವನ್ನು ಪತ್ತೆ ಮಾಡಿದ್ದಾರೆ.

'ಈ ಪ್ರಭೇದದ ಜೇಡದಲ್ಲಿ ಹೆಣ್ಣು ಬಲಿಷ್ಠ.ಇವುಗಳಿಂದ ಅಪಾಯ ಇಲ್ಲ. ಜೇಡದಲ್ಲಿರುವ ವಿಷದ ಅಂಶ ಕೀಟ ಹಿಡಿಯಲು ಬಳಕೆ ಆಗುತ್ತದೆ' ಎಂದು ಮಂಜುನಾಥ ಎಸ್.ನಾಯಕ ತಿಳಿಸಿದರು.

# ಸುರಕ್ಷತೆ ಇಲ್ಲದ ಹೊರ ರಾಜ್ಯ ಬಸ್‌ಗಿಲ್ಲ ಪ್ರವೇಶ

ಒಂದನೇ ಪುಟದಿಂದ...

ಅಲ್ಲದೇ 'ಅಖಿಲ ಭಾರತ ಪರವಾನಗಿ (ಆಲ್ ಇಂಡಿಯಾ ಪರ್ಮಿಟ್) ಹೊಂದಿರುವ ಬಸ್‌ಗಳ ಪರ್ಮಿಟ್‌ಗಳನ್ನು ರದ್ದು ಮಾಡುವ ಅಧಿಕಾರ ಇಲ್ಲದೇ ಇದ್ದರೂ ತಾತ್ಕಾಲಿಕವಾಗಿ ಅಮಾನತು ಮಾಡುವ ಅಧಿಕಾರವಿದೆ. ಮೊದಲು ಎಚ್ಚರಿಕೆ ಕೊಡುತ್ತೇವೆ. ಬಸ್ ಮಾಲೀಕರು ಎಚ್ಚೆತ್ತುಕೊಳ್ಳಬೇಕು' ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಾವು ರಾಜ್ಯದ ಮಾತ್ರವಲ್ಲ, ಹೊರರಾಜ್ಯಗಳ ಬಸ್‌ಗಳನ್ನೂ ತಪಾಸಣೆ ಮಾಡುತ್ತಿದ್ದೇವೆ. ಸುರಕ್ಷತಾ ಕ್ರಮಗಳಿಲ್ಲದ ಹೊರರಾಜ್ಯಗಳ ಬಸ್‌ಗಳ ಮಾಲೀಕರಿಗೆ ಎಚ್ಚರಿಕೆ ನೀಡಿದ್ದೇವೆ. ಇನ್ನೂ ಒಂದೆರಡು ತಿಂಗಳು ಸಮಯ ನೀಡುತ್ತೇವೆ. ಆನಂತರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಂದಾಗುತ್ತೇವೆ' ಎಂದು ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ಮಾಹಿತಿ ನೀಡಿದರು.


**The Printers (Mysore) Pvt. Ltd**
**Publishers of DECCAN HERALD, PRAJAVANI, SUDHA & MAYURA**
No.7-12, Kumbalgodu Indl. Area, Mysore Road, Bangalore - 74

**ALUMINUM WASTE FOR SALE**

Sealed Tenders are invited for the disposal of the following Scrapped Aluminum wastes from our Press at Bangalore, Dharwad , Mangalore, Harihara, Mysore, Gulbarga and Hospet.

| Details | Location - wise quantity in Tons available. | | | | | | |
|---|---|---|---|---|---|---|---|
| | Bangalore | Dharwad | Mangalore | Harihara | Mysore | Gulbarga | Hospet |
| Scrapped Aluminum Sheets | 6-7 Tons | 2-4 Tons | 2-3 Tons | 2-3 Tons | 2 Tons | 2-3 Tons | 1-2 Tons |

For clarification, contact Procurement Head at babu.v@printersmysore.co.in, venu.tl@printersmysore.co.in, 25880340 /430 Mob: 9900042650. Sealed Tenders/e-mail may be addressed within 7 days from the date of this advertisement.



**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

**ಟೆಂಡರ್ ಪ್ರಕಟಣೆ** (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

| ಕ್ರ ಸಂ. | ವಿಭಾಗ | ಐಎಫ್‌ಟಿ ಸಂಖ್ಯೆ | ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ. ಗಳಲ್ಲಿ) | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ | ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ |
|---|---|---|---|---|---|
| ಪ್ರಧಾನ ಮುಖ್ಯ ಅಭಿಯಂತರರ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009. | | | | | |
| 1 | ಯುಎಫ್ ಡಬ್ಲ್ಯೂ | ಬೆಂಜಮಂ/ಕಾನಿಅ(ಯುಎಫ್‌ಡಬ್ಲ್ಯೂ)/ಪಿಬಿ/615/2025–26 ದಿನಾಂಕ: 19.11.2025 | ರೂ. 73,17,252 / ರೂ. 1,47,000/– | 08.12.2025ರ ಸಂಜೆ 4.00 ಗಂಟೆಯವರೆಗೆ | 09.12.2025ರ ಸಂಜೆ 4.05 ಗಂಟೆಯ ನಂತರ |
| 2 | ಯುಎಫ್ ಡಬ್ಲ್ಯೂ | ಬೆಂಜಮಂ/ಕಾನಿಅ(ಯುಎಫ್‌ಡಬ್ಲ್ಯೂ)/ಪಿಬಿ/621/2025–26 ದಿನಾಂಕ: 20.11.2025 | ರೂ. 73,75,949/– / ರೂ. 1,48,000/– | 08.12.2025ರ ಸಂಜೆ 4.00 ಗಂಟೆಯವರೆಗೆ | 09.12.2025ರ ಸಂಜೆ 4.05 ಗಂಟೆಯ ನಂತರ |
| ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಯುಎಫ್‌ಡಬ್ಲ್ಯೂ) | | | | | |
| ಮುಖ್ಯ ಅಭಿಯಂತರರ ಕಛೇರಿ (ಕಾವೇರಿ–ಕಾ&ನಿ), 8ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009. | | | | | |
| 3 | ಕಾವೇರಿ (ಕಾ&ನಿ –2) | ಬೆಂಜಮಂ/ಕಾನಿಅ(ಕಾ–ಕಾ&ನಿ)–2/ಪಿಬಿ/1769/2025–26 ದಿನಾಂಕ: 13.11.2025 | ರೂ. 67,95,144/– / ರೂ. 1,36,000/– | 08.12.2025ರ ಸಂಜೆ 4.00 ಗಂಟೆಯವರೆಗೆ | 09.12.2025ರ ಸಂಜೆ 5.00 ಗಂಟೆಯ ನಂತರ |
| 4 | ಕಾವೇರಿ (ಕಾ&ನಿ –2) | ಬೆಂಜಮಂ/ಕಾನಿಅ(ಕಾ–ಕಾ&ನಿ)–2/ಪಿಬಿ/1771/2025–26 ದಿನಾಂಕ: 13.11.2025 | ರೂ. 69,35,312/– / ರೂ. 1,40,000/– | 08.12.2025ರ ಸಂಜೆ 4.00 ಗಂಟೆಯವರೆಗೆ | 09.12.2025ರ ಸಂಜೆ 5.00 ಗಂಟೆಯ ನಂತರ |
| ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಕಾವೇರಿ–ಕಾ&ನಿ)–2 | | | | | |
| ಮುಖ್ಯ ಅಭಿಯಂತರರ ಕಛೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009. | | | | | |
| 5 | ಉತ್ತರ–1 | ಬೆಂಜಮಂ/ಕಾನಿಅ(ಉ–1)/ತಾಂಅ/2706/2025–26 ದಿನಾಂಕ: 21.11.2025 (3ನೇ ಕರೆ) | ರೂ. 6,11,158/– / ರೂ. 15,500/– | 01.12.2025ರ ಮಧ್ಯಾಹ್ನ 3.00 ಗಂಟೆಯವರೆಗೆ | 02.12.2025ರ ಸಂಜೆ 4.00 ಗಂಟೆಯ ನಂತರ |
| ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)–1 | | | | | |
| ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009. | | | | | |
| 6 | ವಿನ್ಯಾಸ | ಬೆಂಜಮಂ/ಕಾನಿಅ(ವಿನ್ಯಾಸ)/ಪಿಬಿ/281/2025–26 ದಿನಾಂಕ: 24.11.2025 | ರೂ. 99.40 ಲಕ್ಷಗಳು / ರೂ. 1.98 ಲಕ್ಷಗಳು | 08.12.2025ರ ಮಧ್ಯಾಹ್ನ 3.00 ಗಂಟೆಯವರೆಗೆ | 09.12.2025ರ ಸಂಜೆ 4.30 ಗಂಟೆಯ ನಂತರ |
| ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ವಿನ್ಯಾಸ) | | | | | |

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/3971/Zen/2025-26


### ₹7.11 ಕೋಟಿ ದರೋಡೆ ಪ್ರಕರಣ: 7ಕ್ಕೇರಿದ ಬಂಧಿತರ ಸಂಖ್ಯೆ

# ಆರೋಪಿಯ ಸಹೋದರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಟಿಎಂ ಕೇಂದ್ರಕ್ಕೆ ಹಣ ತುಂಬಿಸಲು ತೆರಳುತ್ತಿದ್ದ ಸಿಎಂಎಸ್ ಏಜೆನ್ಸಿ ವಾಹನವನ್ನು ಅಡ್ಡಗಟ್ಟಿ ₹7.11 ಕೋಟಿ ದರೋಡೆ ಮಾಡಿದ ಪ್ರಕರಣ ಸಂಬಂಧ ಮತ್ತೊಬ್ಬ ಆರೋಪಿಯನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಒಟ್ಟು ಏಳು ಆರೋಪಿಗಳ ಬಂಧನವಾಗಿದೆ.

ಬಂಧಿತ ರಾಕೇಶ್, ದರೋಡೆ ಕೃತ್ಯದ ಪ್ರಮುಖ ಆರೋಪಿ ರವಿಯ ಸಹೋದರ. ತಲೆಮರೆಸಿಕೊಂಡಿರುವ ಆರೋಪಿ ದಿನೇಶ್‌ಗಾಗಿ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ರಾಜ್ಯಗಳಲ್ಲಿ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಉಳಿದ ₹ 80 ಲಕ್ಷ ನಗದು ಪತ್ತೆ ಕಾರ್ಯ ಮುಂದುವರಿದಿದೆ.

ದರೋಡೆ ಪ್ರಕರಣ ದಾಖಲಾಗುತ್ತಿದ್ದಂತೆ ಕಾರ್ಯಾಚರಣೆಗೆ ಇಳಿದ ನಗರ ಪೊಲೀಸರು, 54 ತಾಸುಗಳಲ್ಲಿ ಸಿಎಂಎಸ್ ಏಜೆನ್ಸಿ ವಾಹನದ ಮೇಲ್ವಿಚಾರಕ ಗೋಪಾಲ್ ಪ್ರಸಾದ್, ಸಿಎಂಎಸ್ ಮಾಜಿ ಉದ್ಯೋಗಿ ಕ್ಸೇವಿಯರ್, ಗೋವಿಂದಪುರ ಠಾಣೆಯ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯ್ಕ್ ಅವರನ್ನು ಬಂಧಿಸಿದ್ದರು. ಇದಾದ 6–7 ಗಂಟೆಯಲ್ಲಿ ಹೈದರಾಬಾದ್‌ನಲ್ಲಿ ನವೀನ್, ರವಿ, ನೆಲ್ಸನ್ ಮೂವರನ್ನು ಬಂಧಿಸಿದರು.

ಸಹೋದರನ ಜತೆ ಸೇರಿ ದರೋಡೆಗೆ ಸಂಚು ರೂಪಿಸಿದ್ದ ಆರೋಪ ಎದುರಿಸುತ್ತಿರುವ ರಾಕೇಶ್‌ನನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

ಹೊಸಕೋಟೆ ಬಳಿಯ ಪಾಳು ಬಿದ್ದ ಮನೆಯಲ್ಲಿ ಆರೋಪಿಗಳು ಬಚ್ಚಿಟ್ಟಿದ್ದ ₹5.76 ಕೋಟಿ ನಗದನ್ನು ಪೊಲೀಸರು ಶನಿವಾರ ಜಪ್ತಿ ಮಾಡಿದ್ದರು. ಹಣ ತುಂಬಿದ್ದ ಪೆಟ್ಟಿಗೆಗಳ ಸಮೇತ ಚಿತ್ತೂರಿಗೆ ಹೋಗುವ ಮೊದಲೇ ಹೊಸಕೋಟೆ ಟೋಲ್‌ಗೆ ಹೋಗದೇ, ಅಡ್ಡದಾರಿ ಮೂಲಕ ಕೆರೆ ಏರಿ ಮೇಲೆ ಸಾಗಿ ಪಾಳು ಬಿದ್ದ ಮನೆಯಲ್ಲಿ ಹಣವನ್ನು ಇರಿಸಿದ್ದರು. ಬಳಿಕ ಖಾಲಿ ಪೆಟ್ಟಿಗೆಗಳನ್ನು ಚಿತ್ತೂರು ಕಡೆ ಕೊಂಡೊಯ್ದು ಬಿಸಾಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಗಳು ಜೂಜಾಟ ಹಾಗೂ ದುಶ್ಚಟದಿಂದ ಹಣ ಕಳೆದುಕೊಂಡು, ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡಿದ್ದರು, ಸಾಲ ತೀರಿಸಲು ಕ್ಸೇವಿಯರ್ ಸಂಚಿಗೆ ಎಲ್ಲರೂ ಕೈ ಜೋಡಿಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

### ಕಾನ್‌ಸ್ಟೆಬಲ್ ಅಣ್ಣಪ್ಪ ಅಮಾನತು

ದರೋಡೆ ಪ್ರಕರಣದಲ್ಲಿ ಬಂಧಿತರಾಗಿರುವ ಗೋವಿಂದಪುರ ಠಾಣೆಯ ಕಾನ್‌ಸ್ಟೆಬಲ್ ಅಣ್ಣಪ್ಪ ನಾಯ್ಕ್ ಅವರನ್ನು ಅಮಾನತುಗೊಳಿಸಿ ಪೂರ್ವ ವಿಭಾಗದ ಡಿಸಿಪಿ ದೇವರಾಜ್ ಆದೇಶ ಹೊರಡಿಸಿದ್ದಾರೆ.

2018ರಲ್ಲಿ ಪೊಲೀಸ್ ಇಲಾಖೆಗೆ ಸೇರಿದ್ದ ಅಣ್ಣಪ್ಪ, ಬಾಣಸವಾಡಿ ಠಾಣೆಯಲ್ಲಿ ಅಪರಾಧ ವಿಭಾಗ ಮತ್ತು ಸಿಸಿಬಿಯಲ್ಲೂ ಕರ್ತವ್ಯ ನಿರ್ವಹಿಸಿದ್ದರು. ಹಲವು ಬಾರಿ ಅವರ ವಿರುದ್ಧ ಕರ್ತವ್ಯ ಲೋಪದ ಆರೋಪಗಳು ಬಂದಿದ್ದವು. ಹೀಗಾಗಿ ಬಂದೋಬಸ್ತ್ ಹೊರತುಪಡಿಸಿ, ಬೇರೆ ಕೆಲಸಗಳಿಗೆ ನಿಯೋಜಿಸಿರಲಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಲ್ಲಾ ಠಾಣೆಯ ಪಿಎಸ್‌ಐ, ಎಎಸ್‌ಐ, ಹೆಡ್ ಕಾನ್‌ಸ್ಟೆಬಲ್ ಮತ್ತು ಕಾನ್‌ಸ್ಟೆಬಲ್‌ಗಳ ಚಟುವಟಿಕೆಗಳ ಮೇಲೆ ನಿಗಾ ವಹಿಸುವಂತೆ ಆಯಾ ವಿಭಾಗದ ಎಸಿಪಿ ಮತ್ತು ಡಿಸಿಪಿಗಳಿಗೆ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಸೂಚನೆ ನೀಡಿದ್ದಾರೆ.

### ಸೇವೆಯಿಂದ ವಜಾ: ಗೃಹ ಸಚಿವ

'ಪೊಲೀಸ್ ಸಿಬ್ಬಂದಿ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾದರೆ ಮುಲಾಜಿಲ್ಲದೆ ಸೇವೆಯಿಂದ ವಜಾಗೊಳಿಸಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಎಚ್ಚರಿಕೆ ನೀಡಿದರು.

ಭಾನುವಾರ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿ, 'ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖೆಯಲ್ಲಿ ಎಚ್ಚರಿಕೆಯಿಂದ ಇರುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಈ ರೀತಿಯ ಕೃತ್ಯದಲ್ಲಿ ಪೊಲೀಸರು ಭಾಗಿಯಾದರೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

'ಎಟಿಎಂಗಳಿಗೆ ಹಣ ತುಂಬುವ ಏಜೆನ್ಸಿಯವರು ಆರ್‌ಬಿಐ ಮಾರ್ಗಸೂಚಿ ಪಾಲಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಏಜೆನ್ಸಿಯವರು ನಿರ್ಲಕ್ಷ್ಯ ತೋರಿದ್ದರೆ ಅವರ ಮೇಲೂ ಕಾನೂನು ಕ್ರಮ ಜರುಗಿಸುತ್ತೇವೆ' ಎಂದು ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

# ಅಭಿಮತ



## ಸುಭಾಷಿತ

ಯಾರೇ ಆಗಿರಲಿ, ಅವರು ಎಷ್ಟು ಸುಸಂಸ್ಕೃತರು ಎನ್ನುವುದು ‘ಜಗಳ’ದಲ್ಲವರು ಹೇಗೆ ನಡೆದುಕೊಳ್ಳುತ್ತಾರೆ ಎನ್ನುವುದರಲ್ಲಿ ತಿಳಿಯುತ್ತದೆ.

**ಜಾರ್ಜ್ ಬರ್ನಾರ್ಡ್ ಷಾ**

## ಸಂಪಾದಕೀಯ

# ಅಧಿಕಾರ ಹಸ್ತಾಂತರದ ಗೊಂದಲ ವರಿಷ್ಠರ ಮಧ್ಯಪ್ರವೇಶ ಅನಿವಾರ್ಯ

**ನಾಯಕತ್ವ** ಬದಲಾವಣೆ ಮತ್ತು ಸಂಪುಟ ಪುನರ್ ರಚನೆಗೆ ಸಂಬಂಧಿಸಿದ ಕಾಂಗ್ರೆಸ್ ಪಕ್ಷದೊಳಗಿನ ಮುಸುಕಿನ ಗುದ್ದಾಟ ಕಿರುತೆರೆಯ ಧಾರಾವಾಹಿಯಂತೆ ಮುಂದುವರಿದಿರುವುದು ಆಡಳಿತಯಂತ್ರ ದುರ್ಬಲಗೊಳ್ಳುವ ಅಪಾಯಕ್ಕೆ ಎಡೆಮಾಡಿಕೊಡುತ್ತಿದೆ. ಈ ಗುದ್ದಾಟ ಈಗಿನದ್ದಾಗಿರದೆ, 2023ರ ಚುನಾವಣೆಯಲ್ಲಿ ಕಾಂಗ್ರೆಸ್ ನಿಚ್ಚಳ ಬಹುಮತ ಪಡೆದ ದಿನವೇ ಆರಂಭಗೊಂಡಿದ್ದಾಗಿದೆ. ಮತದಾರರ ವಿಶ್ವಾಸ ಗಳಿಸಿದ ಕಾಂಗ್ರೆಸ್ ಮುಂದಿದ್ದ ಪ್ರಮುಖ ಸವಾಲು ಆಡಳಿತಕ್ಕೆ ಸಂಬಂಧಿಸಿದ್ದಾಗಿರದೆ, ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರಲ್ಲಿ ಮುಖ್ಯಮಂತ್ರಿ ಸ್ಥಾನದಲ್ಲಿ ಯಾರನ್ನು ಕೂರಿಸುವುದು ಎನ್ನುವುದಾಗಿತ್ತು. ದೆಹಲಿಯಲ್ಲಿ ನಡೆದ ಮಾತುಕತೆ ಸರಣಿಗಳ ನಂತರ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಹಾಗೂ ಶಿವಕುಮಾರ್ ಅವರನ್ನು ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಲಾಯಿತು. ಎರಡೂವರೆ ವರ್ಷಗಳ ನಂತರ ಸಿದ್ದರಾಮಯ್ಯ ಅವರು ಅಧಿಕಾರ ಹಸ್ತಾಂತರಿಸಬೇಕು ಎನ್ನುವ ಒಪ್ಪಂದದ ಮೇರೆಗೆ ಪಕ್ಷದ ವರಿಷ್ಠರು ಸಮಸ್ಯೆ ಬಗೆಹರಿಸಿದ್ದಾರೆ ಎನ್ನುವ ವದಂತಿಗಳಿದ್ದವು. ಈಗ ಆ ವದಂತಿ ಮೂರ್ತರೂಪ ತಳೆದಂತೆ ಕಾಣಿಸುತ್ತಿದ್ದು, ಶಿವಕುಮಾರ್ ಅವರನ್ನು ಬೆಂಬಲಿಸುವ ಶಾಸಕರ ಗುಂಪು ದೆಹಲಿಗೆ ತೆರಳಿ ತಮ್ಮ ನಾಯಕನಿಗೆ ಅಧಿಕಾರ ಹಸ್ತಾಂತರಿಸಬೇಕೆಂದು ಹೈಕಮಾಂಡ್ ಮೇಲೆ ಒತ್ತಡ ಹೇರುತ್ತಿದೆ. ಇದಕ್ಕೆ ಪ್ರತಿಕ್ರಿಯೆ ರೂಪದಲ್ಲಿ, ಅಧಿಕಾರ ಹಸ್ತಾಂತರದ ಯಾವ ಒಪ್ಪಂದವೂ ಆಗಿಲ್ಲ, ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಪೂರ್ಣಾವಧಿ ಪೂರೈಸುತ್ತಾರೆ ಎಂದು ಕೆಲವು ಸಚಿವರು ಹೇಳಿಕೆ ನೀಡಿದ್ದಾರೆ. ಈ ಎಲ್ಲ ಗೊಂದಲಗಳಿಗೆ ತೆರೆ ಎಳೆಯಬೇಕಾದ ಕಾಂಗ್ರೆಸ್‌ನ ದೆಹಲಿ ನಾಯಕತ್ವ ಮೌನವಾಗಿರುವುದರಿಂದ ಡೋಲಾಯಮಾನ ಪರಿಸ್ಥಿತಿ ಮುಂದುವರಿದಿದೆ.



> ಮುಖ್ಯಮಂತ್ರಿ ಸ್ಥಾನ ಬದಲಾವಣೆಗೆ ಸಂಬಂಧಿಸಿದ ಗೊಂದಲ ಆಡಳಿತದ ಮೇಲೆ ಪರಿಣಾಮ ಬೀರುತ್ತಿದೆ. ಈ ಗೊಂದಲವನ್ನು ಕಾಂಗ್ರೆಸ್ ಹೈಕಮಾಂಡ್ ತಕ್ಷಣ ಬಗೆಹರಿಸಬೇಕು.

ಪ್ರಸ್ತುತ ಗೊಂದಲದ ಪರಿಸ್ಥಿತಿ ರೂಪುಗೊಳ್ಳಲು ಸಿದ್ದರಾಮಯ್ಯ ಅವರ ವಿರೋಧಾಭಾಸದ ಹೇಳಿಕೆಗಳೂ ಕಾರಣವಾಗಿವೆ. 2018 ಹಾಗೂ 2023ರ ಚುನಾವಣೆಗಳಲ್ಲಿ, ಇದೇ ತಮ್ಮ ಕೊನೆಯ ಸ್ಪರ್ಧೆ ಎಂದು ಹೇಳಿದ್ದ ಅವರು, ಬೆಂಬಲಿಗರು ಒತ್ತಾಯಿಸಿದರೆ ಮತ್ತೊಂದು ಅವಧಿಗೆ ಸ್ಪರ್ಧಿಸುವುದಾಗಿ ಈಗ ಹೇಳುತ್ತಿದ್ದಾರೆ. ಮುಖ್ಯಮಂತ್ರಿಯಾಗಿ ಅವಧಿ ಪೂರ್ಣಗೊಳಿಸುವುದಾಗಿ ಹಾಗೂ ಮುಂದಿನ ಬಜೆಟ್ ತಾವೇ ಮಂಡಿಸುವುದಾಗಿ ಹೇಳಿರುವ ಅವರು, ಹೈಕಮಾಂಡ್ ಕೈಗೊಳ್ಳುವ ಯಾವುದೇ ತೀರ್ಮಾನವನ್ನು ಒಪ್ಪುವುದಾಗಿಯೂ ಹೇಳಿದ್ದಾರೆ. ಈ ವಿರೋಧಾಭಾಸದ ಮಾತುಗಳು ಊಹಾಪೋಹಗಳಿಗೆ ಮತ್ತಷ್ಟು ಪುಷ್ಟಿ ನೀಡಿವೆ. 2026ರ ಫೆಬ್ರುವರಿಯವರೆಗೆ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಮುಂದುವರಿಯಲಿದ್ದು, ಆ ಮೂಲಕ ದೀರ್ಘ ಕಾಲ ಮುಖ್ಯಮಂತ್ರಿ ಸ್ಥಾನದಲ್ಲಿದ್ದ ಡಿ. ದೇವರಾಜ ಅರಸು ಅವರ ದಾಖಲೆಯನ್ನು ಮುರಿಯಲಿದ್ದಾರೆ ಎಂದೂ ಹೇಳಲಾಗುತ್ತಿದೆ. ಸಿದ್ದರಾಮಯ್ಯ ಅವರ ಜಾಗಕ್ಕೆ ದಲಿತರೊಬ್ಬರು ಬರಲಿದ್ದಾರೆ ಎನ್ನುವ ಊಹಾಪೋಹವೂ ಇದೆ. ಈ ನಡುವೆ, ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಟ್ಟುಕೊಡಲು ತಾವು ಸಿದ್ಧ ಎಂದು ಶಿವಕುಮಾರ್ ಪ್ರಕಟಿಸಿರುವುದು ಇಡೀ ವಿದ್ಯಮಾನಕ್ಕೆ ಹೊಸ ತಿರುವು ನೀಡಿದೆ ಹಾಗೂ ಅವರ ಮಾತನ್ನು ಅಧಿಕಾರ ಹಸ್ತಾಂತರಕ್ಕೆ ಹೈಕಮಾಂಡ್ ನೀಡಿರುವ ಹಸಿರು ನಿಶಾನೆ ಎಂದು ವಿಶ್ಲೇಷಿಸಲಾಗುತ್ತಿದೆ.

ಕಾಂಗ್ರೆಸ್ ಪಕ್ಷದ ಆಂತರಿಕ ವಿದ್ಯಮಾನಗಳೇನೇ ಇರಲಿ, ನಾಯಕತ್ವಕ್ಕೆ ಸಂಬಂಧಿಸಿದಂತೆ ಉಂಟಾಗಿರುವ ಗೊಂದಲ ಆಡಳಿತದ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುತ್ತಿದೆ. ಸರ್ಕಾರವನ್ನು ಯಾರು ಮುನ್ನಡೆಸುತ್ತಾರೆ ಎನ್ನುವ ಅಸ್ಪಷ್ಟತೆ ಆಡಳಿತ ಯಂತ್ರವನ್ನು ದುರ್ಬಲಗೊಳಿಸಲಿದೆ ಹಾಗೂ ಅಧಿಕಾರಿಗಳು ನಿಷ್ಕ್ರಿಯಗೊಳ್ಳಲು ಕಾರಣವಾಗುತ್ತದೆ; ತ್ವರಿತವಾಗಿ ವಿಲೇವಾರಿ ಆಗಬೇಕಾದ ಕಡತಗಳು ನನೆಗುದಿಗೆ ಬೀಳುತ್ತವೆ. ಶಾಸಕರು ಹಾಗೂ ಸಚಿವರು ಗುಂಪು ರಾಜಕಾರಣದಲ್ಲಿ ತೊಡಗುವುದು ಸರ್ಕಾರವನ್ನು ದುರ್ಬಲಗೊಳಿಸಿದಂತಾಗುತ್ತದೆ; ಮತದಾರರಿಗೆ ಕೆಟ್ಟ ಸಂದೇಶ ನೀಡಿದಂತಾಗುತ್ತದೆ. ರಾಜಕೀಯ ದ್ವಂದ್ವದ ಪರಿಣಾಮ ಈಗಾಗಲೇ ಸ್ಪಷ್ಟವಾಗಿ ಗೋಚರಿಸುತ್ತಿದೆ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ತಮ್ಮ ಹಿಂದಿನ ಅವಧಿಯಂತೆ ಪರಿಣಾಮಕಾರಿ ಆಗಿಲ್ಲ ಹಾಗೂ ಶಿವಕುಮಾರ್ ಪಾಳಯದಲ್ಲಿನ ಅಸಹನೆ ಹೆಚ್ಚಾಗುತ್ತಿದೆ ಎಂದು ಹೇಳಲಾಗುತ್ತಿದೆ. ಈ ಪರಿಸ್ಥಿತಿ ಮತ್ತಷ್ಟು ವಿಷಮಿಸುವ ಮೊದಲು, ಕಾಂಗ್ರೆಸ್ ಹೈಕಮಾಂಡ್ ಮೌನ ಮುರಿದು, ಮಧ್ಯಪ್ರವೇಶಿಸಬೇಕಾಗಿದೆ; ಅಧಿಕಾರ ಹಸ್ತಾಂತರದ ಗೊಂದಲಕ್ಕೆ ತಾರ್ಕಿಕ ಅಂತ್ಯ ನೀಡಬೇಕಾಗಿದೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸುವುದು ಹೈಕಮಾಂಡ್ ಉದ್ದೇಶವಾಗಿದ್ದಲ್ಲಿ, ತಕ್ಷಣ ಆ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಲಿ. ಇಲ್ಲವಾದಲ್ಲಿ, 2028ರವರೆಗೂ ಮುಖ್ಯಮಂತ್ರಿ ಸ್ಥಾನದಲ್ಲಿ ಯಾವ ಬದಲಾವಣೆಯೂ ಇಲ್ಲ ಎನ್ನುವುದನ್ನು ಸ್ಪಷ್ಟಪಡಿಸಲಿ. ದೇಶದ ಅಭಿವೃದ್ಧಿ ಎಂಜಿನ್ ರೂಪದಲ್ಲಿ ಕರ್ನಾಟಕ ಗುರ್ತಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ, ರಾಜಕೀಯ ಗೊಂದಲಗಳಿಂದಾಗಿ ರಾಜ್ಯದಲ್ಲಿ ಅಸ್ಥಿರತೆ ಉಂಟಾಗಬಾರದು.

### ಜಾಲತಾಣ

## ನಾಗರಿಕರಿಗಿಲ್ಲ ಭೋಗಭಾಗ್ಯ



ನಾವು ಅಡ್ಡಾಡಲು ಒಳ್ಳೆಯ ರಸ್ತೆ ಮಾಡಿಸಲೆಂದು ಆರಿಸಿ ಕಳಿಸಿದವರು ಬರುತ್ತಿದ್ದಾರೆಂದು ಬೆಳಗಾವಿಯ ರಸ್ತೆಗಳು ಡಾಂಬರು ಕಾಣುತ್ತಿವೆ. ಸಾಮಾನ್ಯ ನಾಗರಿಕರು ಪ್ರಜಾಪ್ರಭುತ್ವದಲ್ಲಿ ಬರೀ ಭಾಗೀದಾರರೇ ಹೊರತು ಭೋಗ್ಯಭಾಗ್ಯ ಹೊಂದಿಲ್ಲ.

**ಸಿದ್ರಾಮ ಪಾಟೀಲ,** ‘ಫೇಸ್‌ಬುಕ್’ನಿಂದ

### ಕಿಡಿನುಡಿ



ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸುಮಾರು 369 ವಾರ್ಡ್‌ಗಳ ಪೈಕಿ ಯಾವುದೇ ವಾರ್ಡಿಗೆ ಪೃಥ್ವಿ, ವಾಯು, ಅಗ್ನಿ, ಜಲ, ಎಂದು ಹೆಸರಿಡದೆ (ಯಲಹಂಕ ಕ್ಷೇತ್ರದಲ್ಲಿ) ಒಂದು ವಾರ್ಡಿಗೆ ಮಾತ್ರ ‘ಆಕಾಶ್’ ಎಂದು ಹೆಸರಿಟ್ಟಿರುವುದು ಪಂಚಭೂತಗಳಿಗೆ ತೋರಿಸಿರುವ ತಾರತಮ್ಯ ಅಲ್ಲವೇ? ಈ ವಾರ್ಡಿಗೆ ‘ಆಕಾಶ್’ ಎಂದು ಹೆಸರಿಟ್ಟಿರುವ ಔಚಿತ್ಯವೇನು?

**ಎಸ್. ಸುರೇಶ್ ಕುಮಾರ್,** ಬಿಜೆಪಿ ಶಾಸಕ

## 25 ವರ್ಷಗಳ ಹಿಂದೆ

ಶುಕ್ರವಾರ, 24-11-2000

**• ಗ್ರಾಮೀಣ ಅಭ್ಯರ್ಥಿಗಳಿಗೆ ಶೇ 25 ಹುದ್ದೆ ಮೀಸಲು**

ಬೆಂಗಳೂರು, ನ. 23– ರಾಜ್ಯ ಸರ್ಕಾರಿ ಸಿವಿಲ್ ಸೇವೆಗಳಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಶೇ 25ರಷ್ಟು ಹುದ್ದೆಗಳನ್ನು ಮೀಸಲಿಡುವ ಮಸೂದೆಗೆ ಜನತಾದಳ (ಯು) ಸದಸ್ಯರ ವಿರೋಧದ ನಡುವೆ ಇಂದು ವಿಧಾನಸಭೆ ಅಂಗೀಕಾರ ನೀಡಿತು.

ಮಸೂದೆ ಮಂಡನೆ ಸಮಯದಲ್ಲಿ ಶೇ 10ರಷ್ಟು ಹುದ್ದೆಗಳನ್ನು ಮೀಸಲು ಇಡುವುದಾಗಿ ಸರ್ಕಾರ ಪ್ರಕಟಿಸಿತ್ತು. ಆದರೆ, ವಿರೋಧಿ ಸದಸ್ಯರು ಶೇ 70ರಷ್ಟು ಮೀಸಲಾತಿ ಬೇಕು ಎಂದು ಒಂದು ತಿದ್ದುಪಡಿಯನ್ನೇ ಮಂಡಿಸಿದಾಗ ಸರ್ಕಾರವೇ ಮುಂದಾಗಿ ಮೀಸಲು ಹುದ್ದೆಗಳ ಪ್ರಮಾಣವನ್ನು ಶೇ 25ಕ್ಕೆ ಏರಿಸಿತು.

**• ಪ್ರಯೋಗಾಲಯಕ್ಕೆ ದಾಖಲೆ**

ಮೈಸೂರು, ನ. 23– ಎಂಬಿಬಿಎಸ್ ಪರೀಕ್ಷೆ ಉತ್ತರಪತ್ರಿಕೆ ಮೌಲ್ಯಮಾಪನ ಅಂಕಪಟ್ಟಿ ತಿದ್ದಿರುವ ಪ್ರಕರಣಗಳನ್ನು ಗುರುತಿಸಲು ಫೊರೆನ್ಸಿಕ್ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಇಂದು ಇಲ್ಲಿ ನಡೆದ ಮೈಸೂರು ವಿ.ವಿ ಸಿಂಡಿಕೇಟ್ ಸಭೆ ನಿರ್ಧರಿಸಿದೆ.

## 75 ವರ್ಷಗಳ ಹಿಂದೆ

ಶುಕ್ರವಾರ, 24-11-1950

**• ಕೇಂದ್ರದ ಹತೋಟಿ: ಮೈಸೂರಿಗೆ ವಿನಾಯಿತಿ**

ಬೆಂಗಳೂರು, ನ. 22– ‘ಬಿ’ ವಿಭಾಗದ ಸಂಸ್ಥಾನಗಳ ಮೇಲೆ ಕೇಂದ್ರಕ್ಕಿರುವ ಮೇಲ್ವಿಚಾರಣೆ ಹಾಗೂ ಹತೋಟಿ ಅಧಿಕಾರಗಳಿಗೆ ಸಂಬಂಧಿಸಿದ ರಾಜ್ಯಾಂಗದ ವಿಧಿಗಳ ಬಗ್ಗೆ ಮೈಸೂರು ಸಂಸ್ಥಾನಕ್ಕೆ ಪೂರ್ಣ ವಿನಾಯಿತಿ ಕೊಡಲಾಗುವುದೆಂದು ಕೇಂದ್ರ ಸರ್ಕಾರ ಭರವಸೆಯಿತ್ತಿದೆ.

ಈ ರೀತಿ ಮೈಸೂರಿಗೆ ವಿನಾಯಿತಿ ಕೊಟ್ಟು ರಾಷ್ಟ್ರಾಧ್ಯಕ್ಷರಿಂದ ನಿರ್ದಿಷ್ಟ ಆಜ್ಞೆ ಹೊರಡಿಸುವ ವಿಷಯವನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರು ಇಂದು ಅವರ ಚೇಂಬರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

# ಮಗುಕನ್ನಡವೇ ಕನ್ನಡದ ನಾಳೆ



ವಿಶ್ಲೇಷಣೆ

**ಸಬಿತಾ ಬನ್ನಾಡಿ**

> ಕಲಿಕೆಯ ಪ್ರಕ್ರಿಯೆಯನ್ನು ಸರಳ ಹಾಗೂ ಸೃಜನಶೀಲ ಆಗಿಸದೆ ಹೋದರೆ ಕನ್ನಡ ಉಳಿಸುವ ಪ್ರಯತ್ನಗಳು ಪರಿಣಾಮಕಾರಿ ಆಗಲಾರವು. ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷೆ ಕಲಿಸಿ ಎನ್ನುವ ಹಕ್ಕೊತ್ತಾಯದ ಆಂದೋಲನವೂ ಇಂದಿನ ಅಗತ್ಯ.

**ನಾ**ವೇಕೆ ನಮ್ಮ ಮಕ್ಕಳಿಗೆ ಕನ್ನಡವನ್ನು ಸರಳವಾಗಿ ಕಲಿಸುತ್ತಿಲ್ಲ? ಕನ್ನಡದ ಬಗ್ಗೆ ಬಹಳ ಪ್ರೀತಿ ಎನ್ನುತ್ತೇವೆ. ಸುಲಭವಾಗಿರುವ ಕನ್ನಡವನ್ನು ಕಷ್ಟ ಮಾಡಿ, ಒಂದನೇ ತರಗತಿಯಿಂದಲೇ ಪ್ರಾಣ ಹಿಂಡೋಕೆ ಶುರು ಮಾಡುತ್ತೇವೆ. ಇವತ್ತಿನ ಮಕ್ಕಳಿಗೆ ಇವತ್ತಿನ ಕನ್ನಡ ಕಲಿಸಬೇಕು. ಅದೂ ಏಳನೇ ತರಗತಿಯವರೆಗೆ ಕತೆ, ಹಾಡು, ಕಾರ್ಟೂನ್‌ಗಳನ್ನು ಕೇಳಿಸೋದು, ತೋರಿಸೋದು ಮಾಡಿ ಕನ್ನಡವನ್ನು ಅವರ ಗೆಳೆಯರನ್ನಾಗಿ ಮಾಡಬೇಕು. ಉಹೂಂ, ಏಳುನೂರು ವರ್ಷಗಳ ಹಿಂದಿನ ಕೇಶೀರಾಜನ ‘ಶಬ್ದಮಣಿದರ್ಪಣ’ದ ಬಗ್ಗೆ ಇರುವಷ್ಟು ಮೋಹ, ಇವತ್ತು ಕನ್ನಡ ಉಳಿಸುವ ಕಡೆಗೆ ನಮಗಿಲ್ಲ. ಕನ್ನಡ ನಮ್ಮ ತಾಯಿ ಎಂದು ಹೇಳೋದೇ ಸೈ. ಅವಳ ಮಗುವನ್ನೇ ಕಿತ್ತುಕೊಳ್ಳುತ್ತಿರುವುದು ಗೊತ್ತೇ ಆಗಲ್ಲ. ಈಗ ಬೇಕಿರೋದು ‘ಮಗುಕನ್ನಡ’ ಅಂತ ಹೇಗೆ ವಿವರಿಸುವುದು? ಕಾಲ ಬದಲಾದರೂ ಭಾಷೆ ಕಲಿಸುವ ರೀತಿ ಬದಲಾಯಿಸದೇ ಎಡಬಿಡಂಗಿಗಳಾಗಿರುವ ನಾವು, ಎಂದೋ ಕನ್ನಡ ಸಾಯಬಹುದೆಂದು ಇಂದು ಅಳುತ್ತಾ ಕೂರಬೇಕಾ? ಅಥವಾ ಬದುಕಿಸುವ ದಾರಿ ಹುಡುಕಬೇಕಾ?

ಕನ್ನಡವನ್ನು ಮಗುಭಾಷೆ ಅಥವಾ ಮಕ್ಕಳ ನುಡಿಯಾಗಿ ಬದಲಿಸಲು ಬರೀ ಎರಡು ವಿಧಾನಗಳನ್ನು ಬಳಸಿದರೆ ಸಾಕು. ಆದರೆ, ಈ ಎರಡು ಸರಳ ವಿಧಾನಗಳನ್ನು ನಮ್ಮ ವಿದ್ವಾಂಸರಿಂದ ಹಿಡಿದು, ಸರ್ಕಾರದ ತನಕ ಮನಗಾಣಿಸಲು ಆಗದಿರುವುದಕ್ಕೆ ನಮ್ಮ ಅಹಂಕಾರವೇ ಕಾರಣ. ಇದಕ್ಕೆ ಹೆಚ್ಚುವರಿ ಬಂಡವಾಳ ಬೇಕಿಲ್ಲ, ಹೆಚ್ಚುವರಿ ಶಿಕ್ಷಕರೂ ಬೇಕಿಲ್ಲ. ಮನಸ್ಸು ಮತ್ತು ಕನ್ನಡ ಪ್ರೀತಿ ಇದ್ದರೆ ಸಾಕು.

ಮೊದಲು, ನಮ್ಮ ಪ್ರಾಥಮಿಕ ಕನ್ನಡ ಪಾಠ ಪುಸ್ತಕಗಳಲ್ಲಿ ಪ್ರತೀ ದಿನ ನಾವು ಮಾತಾಡುವ ಕನ್ನಡವನ್ನು ಬಳಸಬೇಕು. ಉದಾ: ಸಂಕಲನ, ವ್ಯವಕಲನ ಎಂದೆಲ್ಲ ಹೇಳುವ ಬದಲಿಗೆ ಕೂಡೋದು, ಕಳೆಯೋದು ಅಂದರೆ ಅರ್ಥ ಹೊರೆ ಇಳಿಯುತ್ತದೆ. ವ್ಯಾಕರಣ ಪಾಠವಂತೂ ಇರಲೇಬಾರದು. ಅದೆಲ್ಲಾ ಮುಂದೆ ವಿಶೇಷವಾಗಿ ಕನ್ನಡ ಕಲಿಯುವವರಿಗೆ ಇರಲಿ. ಈಗ ನಾನು ಹೇಳಹೊರಟಿರುವ ಎರಡು ವಿಧಾನಗಳನ್ನು ಗಮನಿಸೋಣ. ಒಂದನೆಯದು, ನಮ್ಮೊಳಗೇ ಇರುವ ಭಾಷಾ ಸಾಮರ್ಥ್ಯವನ್ನು ದುಡಿಸಿಕೊಳ್ಳುವುದು. ಈ ಬಗ್ಗೆ ಭಾಷಾ ವಿಜ್ಞಾನಿ ನೋಮ್ ಚಾಮ್‌ಸ್ಕಿ ಅರವತ್ತರ ದಶಕದಲ್ಲೇ ಹೇಳಿದ್ದಾರೆ. ಈ ಪ್ರಕಾರ, ಮಕ್ಕಳು ಹನ್ನೆರಡು ವರ್ಷಗಳ ಒಳಗೆ ಕಿವಿಯ ಮೇಲೆ ಬಿದ್ದ ಭಾಷೆಯನ್ನು ಸಲೀಸಾಗಿ ಕಲಿಯುತ್ತವೆ. ಮಕ್ಕಳಿಗೆ ಕನ್ನಡವನ್ನೋ ಇಂಗ್ಲಿಷನ್ನೋ ಆಟ ಆಡಿದಂತೆ ಕಲಿಸಬಹುದು. ಅದಕ್ಕೆ ಅವರಿಗೆ ‘ಕೇಳು ಪಾಠ’ ಮತ್ತು ‘ನೋಡು ಪಾಠ’ ಒದಗಿಸಬೇಕು. ಈಗ ಬೃಹದಾಕಾರವಾಗಿ ಬೆಳೆದಿರುವ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನೇ ನಾವೀಗ ಕನ್ನಡ ಕಲಿಕೆಯ ತಾಣವಾಗಿ ಬಳಸಿಕೊಳ್ಳುವ ಯೋಜನೆಯನ್ನು ರೂಪಿಸಬೇಕಿದೆ. ರಾಜ್ಯದ ಎಲ್ಲಾ ಮಾಧ್ಯಮದ ಶಾಲೆಗಳಲ್ಲಿ ಪ್ರತೀದಿನ ಕನಿಷ್ಠ ಒಂದು ಗಂಟೆಯಾದರೂ ಮಕ್ಕಳಿಗೆ ಹಾಡು–ಕತೆಯ ರೂಪದ ಪಾಠಗಳನ್ನು ತೋರಿಸಬೇಕು, ಕೇಳಿಸಬೇಕು. ಆ ಅವಧಿಯಲ್ಲಿ ಮಕ್ಕಳನ್ನು ಅವರಷ್ಟಕ್ಕೇ ಬಿಡಬೇಕು. ಆಮೇಲೆ ಅದರ ಬಗೆಗೆ ಅವರೇ ಮಾತಾಡಲು ಅವಕಾಶ ಕೊಡಬೇಕು. ಇದೊಂದು ಮನಸ್ಸು ಅರಳಿಸುವ ಖುಷಿಯ ಕ್ಷಣವಾಗಿರಬೇಕು. ಇದನ್ನೊಂದು ಆಂದೋಲನದ ರೀತಿಯಲ್ಲಿ ಮಾಡಬೇಕು.

ಎರಡನೆಯದು, ಕನ್ನಡದ ಮೇಲೆ ಕೆಲವರು ಯಜಮಾನಿಕೆ ಮಾಡುತ್ತಿದ್ದಾರೆ. ತಾವು ಹೇಳಿದ್ದೇ ಶುದ್ಧ ಕನ್ನಡ, ಉಳಿದದ್ದೆಲ್ಲಾ ಕನ್ನಡವೇ ಅಲ್ಲ ಎನ್ನುತ್ತಾ ಕನ್ನಡದ ಕೊಲೆಗೆ ಶಸ್ತ್ರ ಕೊಡುತ್ತಿದ್ದಾರೆ. ಆದರೆ, ಕರ್ನಾಟಕದಲ್ಲಿ ಹಲವು ಆಡುಕನ್ನಡಗಳಿವೆ; ಅವುಗಳ ಉಚ್ಚಾರ ಬೇರೆ ಬೇರೆ ರೀತಿಯಿದೆ. ಇದು ಕನ್ನಡದ ಶ್ರೀಮಂತಿಕೆಯ ಕುರುಹು. ಆದರೆ, ಕೆಲವರು ಅದನ್ನೆಲ್ಲಾ ಇಸ್ತ್ರಿ ಹಾಕಿ ‘ಗ್ರಂಥದ ಭಾಷೆ’ ಅಂತ ಒಂದನ್ನು ಕೃತಕವಾಗಿ ಸೃಷ್ಟಿಸಿ, ಅದರಂತೆಯೇ ಮಾತಾಡಬೇಕು, ಬರೆಯಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಆ ಮೂಲಕ ಕೆಲವರಲ್ಲಿ ಕೀಳರಿಮೆ ಹುಟ್ಟಿಸುವುದನ್ನು ಮೊದಲು ನಿಲ್ಲಿಸಬೇಕು. ಅವರು ಹಾಗೆಯೇ ಮಾತಾಡಲಿ, ಬರೆಯಲಿ. ಎಲ್ಲರೂ ಹಾಗೆ ಬರೆಯುವ– ಮಾತಾಡುವ ಅಗತ್ಯವಿಲ್ಲ. ಯಾವ್ಯಾವುದೋ ಭಾಷೆ ಅರ್ಥ ಮಾಡಿಕೊಳ್ಳುವವರು, ಆಡುಕನ್ನಡಗಳನ್ನು ಸ್ವಲ್ಪ ಸಮಾಧಾನದಿಂದ ಕೇಳಿಸಿಕೊಂಡು ಅರ್ಥ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೆ? ಆಗದಿದ್ದರೆ ಬಿಟ್ಟುಬಿಡಿ. ನಮ್ಮ ಕನ್ನಡ ನಮಗೆ. ಯಾರೂ ಯಾರನ್ನೂ ಲೇವಡಿ ಮಾಡಬೇಕಾಗಿಲ್ಲ.

ಕನ್ನಡ ಉಳಿಯಲೇಬೇಕು ಅನ್ನುವುದಾದರೆ, ಕನ್ನಡವನ್ನು ಇವತ್ತಿಗೆ ತಕ್ಕಂತೆ ಮರುರೂಪಿಸಿಕೊಳ್ಳುತ್ತಲೇ ಇರಬೇಕು. ಹಾಗೆಂದರೇನು?

ಕನ್ನಡದ ಉಳಿವಿನ ಬಗೆಗೆ ಬದುಕಿಡೀ ಧ್ಯಾನಿಸುತ್ತಿರುವ ಡಿ.ಎನ್. ಶಂಕರಬಟ್ಟರನ್ನು ಕನ್ನಡ ನಾಡು ಮೂಲೆಗುಂಪು ಮಾಡಿದೆ. ಬರಹಕ್ಕೂ ಮಾತಿಗೂ ನಂಟು ತಪ್ಪಿದರೆ ಆ ಭಾಷೆ ಕೇವಲ ಬರವಣಿಗೆಯಲ್ಲಷ್ಟೇ ಉಳಿದು ಜನ ಬೇರೆ ಭಾಷೆಯತ್ತ ಹೋಗುತ್ತಾರೆ ಎಂಬುದಕ್ಕೆ ಅವರು ಸಂಸ್ಕೃತದ ಉದಾಹರಣೆ ಕೊಡುತ್ತಾರೆ. ಹಳಗನ್ನಡ ಜೀವಂತಿಕೆ ಕಳೆದುಕೊಂಡಾಗ ವಚನಕಾರರು ‘ಜನರ ಕನ್ನಡ’ ಬಳಸಿದ ವಿವೇಕವನ್ನು ತೆರೆದು ತೋರಿಸುತ್ತಾರೆ. ಬಿಎಂಶ್ರೀ ಹೇಳುವ, ಉಳಿಯಲಾರದ್ದನ್ನು, ಉಳಿಯಬಾರದ್ದನ್ನು ತ್ಯಜಿಸುವ ಧೈರ್ಯ ನಮ್ಮಲ್ಲಿ ಬೆಳೆಯಬೇಕು. ಗಿಡವನ್ನು ಸಾಯಿಸದೆ, ಗಿಡವನ್ನು ನಾಶಮಾಡುವ ಒಣರೆಂಬೆಯನ್ನು ಕತ್ತರಿಸಿ ಕಸಿಮಾಡಿ ಹೂಹಣ್ಣು ಬೆಳೆವಂತೆ ಮಾಡಬೇಕು ಎಂಬ ಮಾತು ಉಲ್ಲೇಖಿಸಿ, ಒಳನುಡಿಗಳಲ್ಲಿಲ್ಲದ ಮಹಾಪ್ರಾಣಗಳು ಬರಹದಲ್ಲಿಲ್ಲದಿದ್ದರೆ ಅಪರಾಧವಲ್ಲ ಎನ್ನುತ್ತಾರೆ. ಕನ್ನಡದಲ್ಲಿರುವುದು ಕೇವಲ ಮೂರು ಸಂಧಿ, ಮೂರು ಸಮಾಸ. ಇದರಲ್ಲಿ ಕನ್ನಡದೊಳಗೆ ಬಂದಿರುವ ಎಲ್ಲಾ ಪದಗಳನ್ನೂ ವಿವರಿಸಬಹುದು. ಒಂದನೇ ತರಗತಿಗೇ ಸಂಸ್ಕೃತ ಪದಗಳೇ ಹೆಚ್ಚು ತುಂಬಿರುವ ಅನಾಕರ್ಷಕ ಕನ್ನಡ ಪುಸ್ತಕ ಮಾಡಿದರೆ, ಮಕ್ಕಳು ಕನ್ನಡ ಬಿಟ್ಟು ಇಂಗ್ಲಿಷ್‌ಗೆ ಹೋಗದೆ ಇನ್ನೇನು ಮಾಡುತ್ತವೆ?


ನಾವು ನಿಜವಾಗಲೂ ಹೋರಾಟ ಮಾಡಬೇಕಾದ ಜಾಗದಲ್ಲಿ ಹೋರಾಟವನ್ನೇ ಮಾಡುತ್ತಿಲ್ಲ. ಕರ್ನಾಟಕದಲ್ಲಿ ನೂರಾರು ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಿವೆ. ಆ ಲೆಕ್ಕದಲ್ಲಿ ಸಾವಿರಾರು ಕನ್ನಡ ಉಪನ್ಯಾಸಕರ ಹುದ್ದೆ ಹುಟ್ಟಬೇಕಿತ್ತು. ಆದರೆ ಅವುಗಳು ಬಿಎ, ಬಿಕಾಂ ಮಕ್ಕಳಿಗೂ ಕನ್ನಡ ಕಲಿಸುತ್ತಿಲ್ಲ. ಕೆಲವರು ಕಣ್ಣೊರೆಸಲು ಒಂದು ಸೆಮಿಸ್ಟರ್ ಕಲಿಸುತ್ತಾರೆ. ಕನ್ನಡದವರೇ ಕಟ್ಟುವ ಸಂಸ್ಥೆಗಳಲ್ಲೂ ಹೀಗೆಯೇ ಮಾಡುತ್ತಾರೆಂದರೆ, ಅದನ್ನು ಕನ್ನಡ ದ್ವೇಷ ಎಂದು ಕರೆಯಬೇಕಾ? ಬೇರೆ ರಾಜ್ಯದ ವಿದ್ಯಾರ್ಥಿಗಳನ್ನು ‘ಆದಾಯ’ಮೂಲ ಎಂದು ಓಲೈಸಲಾಗುತ್ತದೆ. ಕನ್ನಡದ ವಿದ್ಯಾರ್ಥಿಗಳು ಲೆಕ್ಕಕ್ಕಿಲ್ಲ. ಸರ್ಕಾರಿ ಕಾಲೇಜುಗಳು ಕೊಡುವಂತೆ ಕನ್ನಡ/ಹಿಂದಿ/ಉರ್ದು/ಸಂಸ್ಕೃತ ಇತ್ಯಾದಿ ಆಯ್ಕೆ ಕೊಡುವುದಕ್ಕೆ ಏನು ತೊಂದರೆ? ಈ ಕ್ಯಾಂಪಸ್‌ಗಳಲ್ಲಿ ಕನ್ನಡ ವಾತಾವರಣವೇ ಇರುವುದಿಲ್ಲ. ಲಕ್ಷಾಂತರ ರೂಪಾಯಿಯನ್ನು ಕನ್ನಡದ ಮಕ್ಕಳಿಂದ ಪಡೆದು, ಎಲ್‌ಕೆಜಿಯಿಂದ ಉನ್ನತ ಶಿಕ್ಷಣದ ತನಕ ಕನ್ನಡ ಮಾತನಾಡುವುದೇ ಕೀಳು ಎಂಬಂತೆ ಬಿಂಬಿಸುವುದರಿಂದ, ಈಗೀಗ ಬೆಂಗಳೂರಿನ ಮಕ್ಕಳು ತಮ್ಮ ಊರಿನ ನೆಂಟರೊಂದಿಗೂ ಕನ್ನಡ ಮಾತಾಡಲು ಇಷ್ಟಪಡುವುದಿಲ್ಲ. ಹೋರಾಟ ಇತ್ತ ಕಡೆ ಮುಖಮಾಡಲಿ.

ಇದೆಲ್ಲದರಾಚೆಗೆ ಒಳ್ಳೆಯ ಬೆಳವಣಿಗೆಗಳೂ ಆಗುತ್ತಿವೆ. ವಿದೇಶ ಪ್ರವಾಸದ ಕನ್ನಡಿಗರ ವ್ಲಾಗ್‌ಗಳನ್ನು ಗಮನಿಸಿ. ಅದರಲ್ಲಿ ಕೆಲವರಿಗೆ ಇಂಗ್ಲಿಷ್ ಬರುವುದಿಲ್ಲ. ಆದರ ಅಗತ್ಯವೇ ಇಲ್ಲ ಎಂಬುದನ್ನು ಅವರು ತೋರಿಸಿಕೊಡುತ್ತಿದ್ದಾರೆ. ಕನ್ನಡವನ್ನೇ ತಮ್ಮ ಅನ್ನದ ಭಾಷೆ ಮಾಡಿಕೊಂಡಿದ್ದಾರೆ. ನಮ್ಮ ಭ್ರಮೆಗಳನ್ನು ಪುಡಿಮಾಡಿದ್ದಾರೆ.

ಚೀನಾದ ಕೆಲವು ನಗರಗಳಲ್ಲಿ ಬಿಟ್ಟರೆ ಹೆಚ್ಚಿನೆಡೆ ಜನರಿಗೆ ಇಂಗ್ಲಿಷ್ ಗೊತ್ತಿಲ್ಲ. ಅವರಿಗೆ ಗೊತ್ತಿರುವುದು ‘ನೋ ಇಂಗ್ಲಿಷ್’ ಅಂತ ಹೇಳೋಕೆ ಮಾತ್ರ. ಪ್ರವಾಸೋದ್ಯಮದಿಂದಲೇ ಲಕ್ಷಾಂತರ ಉದ್ಯೋಗ ಸೃಷ್ಟಿ ಮಾಡಿರುವ ಅವರನ್ನು ನೋಡಿದರೆ ‘ಕನ್ನಡ ಅನ್ನದ ಭಾಷೆಯಲ್ಲ’ ಎಂದು ಇಂಗ್ಲಿಷ್ ಮಾಧ್ಯಮ ಮಾಫಿಯಾಗಳು ಹುಟ್ಟುಹಾಕಿದ ಖೆಡ್ಡಾಕ್ಕೆ ನಾವು ಎಷ್ಟು ಸಲೀಸಾಗಿ ಬಿದ್ದಿದ್ದೇವೆ ಎನ್ನುವುದು ಗೊತ್ತಾಗುತ್ತದೆ. ಇಂದಿನ ಯುವಜನ ಬೇರೆ ಬೇರೆ ಮಾಧ್ಯಮಗಳಲ್ಲಿ ಕನ್ನಡದ ಮೂಲಕ ಬದುಕು ಕಂಡುಕೊಂಡಿದ್ದಾರೆ. ಕನ್ನಡ ಅಂದ್ರೆ ಬರೀ ಪದಗಳಲ್ಲ. ಇಲ್ಲಿನ ಬದುಕು, ವೈವಿಧ್ಯ, ಸೊಬಗು. ಇದನ್ನೆಲ್ಲಾ ಆತ್ಮವಿಶ್ವಾಸದಿಂದ ಕನ್ನಡ ಸಿನಿಮಾಗಳಲ್ಲಿ ಬಳಕೆ ಮಾಡಿಕೊಳ್ಳುತ್ತಾ ಜಗತ್ತಿನ ಗಮನ ಕನ್ನಡದೆಡೆಗೆ ಸೆಳೆಯುತ್ತಿರುವುದು ಕೂಡ ಒಳ್ಳೆಯ ಬೆಳವಣಿಗೆ.

ಎಲ್‌ಕೆಜಿಯಿಂದ ಇಂಜಿನಿಯರಿಂಗ್ ಮುಗಿಯುವ ತನಕ ಹುಚ್ಚುಗಟ್ಟಿ ಓದಿ ಹತ್ತಿಪ್ಪತ್ತು ಸಾವಿರ ಸಂಬಳ ತೆಗೆದುಕೊಳ್ಳುವುದಕ್ಕೆ ಇಂಗ್ಲಿಷ್ ಮಾಧ್ಯಮವೇ ಬೇಕಾ? ಒಂದು ವೇಳೆ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಖಾಸಗಿಯವರು ಇಲ್ಲದೇ, ಎಲ್ಲವೂ ಅತ್ಯುತ್ತಮ ಸರ್ಕಾರಿ ಶಾಲಾ ಕಾಲೇಜುಗಳೇ ಆಗಿದ್ದರೆ, ಕನ್ನಡ ಅನ್ನದ ಭಾಷೆಯಲ್ಲ ಎಂಬ ಸುಳ್ಳು ಪ್ರಚಾರ ಹುಟ್ಟುತ್ತಲೇ ಇರಲಿಲ್ಲ, ಅಲ್ಲವೇ?

ಅಯ್ಯಾ, ಸರ್ಕಾರದವರೇ ಮತ್ತು ಕೆಲವು ಯಜಮಾನರುಗಳೇ, ಎಲ್ಲಾ ನಾಟಕ ಬಿಟ್ಟು ಕನ್ನಡ ಮಕ್ಕಳಿಗೆ ನ್ಯಾಯವಾಗಿ ಸಿಗಬೇಕಾದ ಕನ್ನಡನುಡಿಯ ಆಸ್ತಿಪಾಲನ್ನು ಕೊಟ್ಟುಬಿಡಿ. ಅದು ತಾಯಿ–ತಂದೆ, ಮಗು, ಎಲ್ಲರ ಕನ್ನಡವೂ ಆಗಲಿ. ಹಾಗೆಯೇ ನಾವೆಲ್ಲರೂ ನಮ್ಮ ಮೊಬೈಲ್, ಎಟಿಎಂ, ಸೇರಿದಂತೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಕನ್ನಡವನ್ನೇ ಬಳಸೋಣ. ಈಗ ‘ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷೆ ಕಲಿಸಿ’ ಮತ್ತು ‘ಕನ್ನಡ ಪಾಠ ಸರಳವಾಗಲಿ’ ಎಂಬ ಆಂದೋಲನ ಶುರುಮಾಡೋಣವೇ?




## ವಾಚಕರ ವಾಣಿ

### ಊಟ ಮುಗಿಸಿದವರು ಜಾಗ ಬಿಡಬೇಕು

**‘ಕೊಟ್ಟೋನು** ಕೋಡಂಗಿ, ಇಸ್ಕೊಂಡೋನು ಈರಭದ್ರ’ ಎನ್ನುವ ಗಾದೆಗೆ ಮತ್ತೆ ಜೀವ ಬಂದಿದೆ. ಕಾಂಗ್ರೆಸ್ ಹೈಕಮಾಂಡ್ ಮಿಕಿಮಿಕಿ ನೋಡುವಂತಾಗಿದೆ. ಕೆಲವೇ ವರ್ಷಗಳ ಹಿಂದೆ ಎಚ್.ಡಿ. ಕುಮಾರಸ್ವಾಮಿ ಮತ್ತು ಬಿ.ಎಸ್. ಯಡಿಯೂರಪ್ಪ ಅವರ ನಡುವೆ ನಡೆದ ಹಗ್ಗಜಗ್ಗಾಟ ಮತ್ತೆ ಬೀದಿಗೆ ಬಂದಿದೆ. ಪಾತ್ರಗಳು ಬೇರೆ, ಕಥಾವಸ್ತು ಒಂದೇ.

ಅರ್ಧ ಅವಧಿಗಾದರೂ ಮತ್ತೆ ಸಿ.ಎಂ. ಮಾಡಿರಿ, ದಾಖಲೆ ಆಸೆ ಈಡೇರಿಸಿಕೊಳ್ಳುವೆ ಎಂದು ದುಂಬಾಲು ಬಿದ್ದಿದ್ದ ಟಗರು ಈಗ ಮತ್ತೂ ಮತ್ತೂ ನಾನೇ ಸಿ.ಎಂ., ನಾನಿಲ್ಲದಿದ್ದರೆ ಸರ್ಕಾರವೇ ಇಲ್ಲ ಎಂದು ಗುಟುರು ಹಾಕುತ್ತಿದೆ. ಶ್ರಮಕ್ಕೆ ತಕ್ಕ ಕೂಲಿ ಕೊಡಿ ಎಂದು ಕೇಳುತ್ತಿರುವ ಬಂಡೆಗೆ ಸತ್ಯದರ್ಶನ ಆಗತೊಡಗಿದೆ. ಇಂದು ಇಲ್ಲವಾದರೆ ಮತ್ತೆಂದೂ ಇಲ್ಲ... ಎಂಬ ಅಂತರ್ಬೋಧೆ ಅದನ್ನು ಬಡಿದೆಬ್ಬಿಸುತ್ತಿದೆ.

ಊಟ ಆದ ಮೇಲೆ ಮೇಲೆದ್ದು ಹಸಿದವರಿಗೆ ಜಾಗ ಬಿಟ್ಟುಕೊಡುವುದು ಸುಸಂಸ್ಕೃತ ನಡವಳಿಕೆ. ಇದನ್ನು ಬೇರೆ ಯಾರಿಂದಲೂ ಬಾಯಿಬಿಟ್ಟು ಹೇಳಿಸಿಕೊಳ್ಳಬಾರದು.

**ಟಿ. ಗೋವಿಂದರಾಜು,** ಬೆಂಗಳೂರು

### ಹುದ್ದೆಯ ಗೌರವ ರಾಜ್ಯಪಾಲರದೇ ಹೊಣೆ

**ರಾಷ್ಟ್ರಪತಿ** ಮತ್ತು ರಾಜ್ಯಪಾಲರ ಅಧಿಕಾರ ವ್ಯಾಪ್ತಿಯ ಬಗ್ಗೆ ಸಂವಿಧಾನ ಜಾರಿಗೆ ಬಂದ 75 ವರ್ಷಗಳ ನಂತರ ನ್ಯಾಯಾಲಯ ವ್ಯಾಖ್ಯಾನ ಮಾಡಬೇಕಾಗಿ ಬರುವಂತಹ ಸ್ಥಿತಿ ಬಂದುದು ದುರದೃಷ್ಟಕರ. ಇದಕ್ಕೆ ಕಾರಣ, ಕೇಂದ್ರವು ಆ ಹುದ್ದೆಗಳಿಗೆ ರಾಜಕೀಯ ನಿರಾಶ್ರಿತರನ್ನು ನೇಮಿಸುತ್ತಿರುವುದು. ಕೇಂದ್ರದ ಆಣತಿಯಂತೆ ವರ್ತಿಸಿ ಅವರ ಋಣವನ್ನು ತೀರಿಸುವ ವ್ಯವಸ್ಥೆ ಬದಲಾಗಬೇಕಾಗಿದೆ. ರಾಷ್ಟ್ರಪತಿ ಹಾಗೂ ರಾಜ್ಯಪಾಲರ ಹುದ್ದೆಗಳಿಗೆ ಸಂವಿಧಾನದಡಿ ದತ್ತವಾಗಿರುವ ಘನತೆಯ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಸಂವಿಧಾನದ ವ್ಯಾಖ್ಯಾನ ಮಾಡಿದೆಯಷ್ಟೇ. ಅಂದಾಕ್ಷಣ ರಾಜ್ಯಪಾಲರ ನಿಷ್ಕ್ರಿಯತೆ ಅಥವಾ ನಿರ್ಧಾರಗಳು ಸರಿ ಎಂದು ಅರ್ಥ ಅಲ್ಲ. ಸ್ಥಾನದ ಗೌರವವನ್ನು ಕಾಪಾಡಬೇಕಾದ ಹೊಣೆ ಆ ಹುದ್ದೆ ಅಲಂಕರಿಸಿದವರದು.

**ಕೆ.ಎಂ. ನಾಗರಾಜು,** ಮೈಸೂರು

### ಸಾರ್ವಜನಿಕ ಎಚ್ಚರಕ್ಕೆ ಮೊಬೈಲ್ ಪೊರೆ

**ಟ್ರಾಫಿಕ್** ಪೊಲೀಸರು ತಪಾಸಣೆ ನೆಪದಲ್ಲಿ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ, ಚಿತ್ರದುರ್ಗದ ಗಾಂಧಿ ವೃತ್ತದಲ್ಲಿ ಆಟೋ ಚಾಲಕನೊಬ್ಬ ಆತ್ಮಹತ್ಯೆಗೆ ಯತ್ನಿಸಿದ ಸುದ್ದಿ ವರದಿಯಾಗಿದೆ. ಬೆಂಕಿ ಹಚ್ಚಿಕೊಳ್ಳಲು ಯತ್ನಿಸಿದ ಸಂದರ್ಭದಲ್ಲಿ ಆ ವ್ಯಕ್ತಿಯನ್ನು ತಡೆಯಲು ಸಾಕಷ್ಟು ಸಮಯವಿತ್ತು. ಆದರೆ, ಆ ವ್ಯಕ್ತಿಯ ಸುತ್ತ ನೆರೆದ ಅನೇಕರು ಮೂಕ ಪ್ರೇಕ್ಷಕರಂತೆ ಮೊಬೈಲ್‌ನಲ್ಲಿ ವಿಡಿಯೋ ಮಾಡುತ್ತಾ ನಿಂತಿದ್ದುದು ವಿಷಾದಕರ. ಬೆಂಕಿ ಹಚ್ಚಿಕೊಂಡ ವ್ಯಕ್ತಿ ಸುಟ್ಟ ಗಾಯಗಳಿಂದ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆ ಸೇರುವಂತಾಗಿದೆ. ಸ್ಥಳದಲ್ಲಿದ್ದವರು ಕೊಂಚ ಎಚ್ಚರ ವಹಿಸಿದ್ದರೆ ಅವಘಡ ತಪ್ಪಿಸಬಹುದಾಗಿತ್ತು.

**ಮುರುಗೇಶ ಡಿ.,** ದಾವಣಗೆರೆ

### ಮಾದಕ ದ್ರವ್ಯಗಳಿಂದ ಎಳೆಯರನ್ನು ರಕ್ಷಿಸಿ

**ರಾಜ್ಯದಲ್ಲಿ** ಮಾದಕ ವಸ್ತುಗಳ ಬಳಕೆ ಮತ್ತು ಮಾರಾಟದಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆಯ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ. 2021ರಲ್ಲಿ 52 ಮಕ್ಕಳನ್ನು ಮಾದಕ ದ್ರವ್ಯ ಪ್ರಕರಣಗಳಲ್ಲಿ ಬಂಧಿಸಲಾಗಿತ್ತು. 2023ರಲ್ಲಿ ಈ ಸಂಖ್ಯೆ 92ಕ್ಕೆ ಏರಿದೆ. 2024ರಲ್ಲಿ 120ಕ್ಕೂ ಹೆಚ್ಚು ಮಕ್ಕಳು ಬಂಧನಕ್ಕೊಳಗಾಗಿದ್ದಾರೆ. ಸಿಂಥೆಟಿಕ್ ಮಾದಕ ದ್ರವ್ಯಗಳು ಹೊಸ ರೀತಿಯ ಸಮಸ್ಯೆ ತಂದೊಡ್ಡಿವೆ ಎಂದು ವರದಿಯಾಗಿದೆ. ಐವತ್ತಕ್ಕೂ ಹೆಚ್ಚು ರಾಸಾಯನಿಕ ಸಂಯೋಜನೆಗಳನ್ನು ಹೊಂದಿರುವ ಇವುಗಳನ್ನು ಗುರುತಿಸುವುದು ವೈದ್ಯರಿಗೂ ಕಷ್ಟ. ಮಾದಕ ಪದಾರ್ಥಗಳ ಜಾಲದಲ್ಲಿ ಮಕ್ಕಳು ಬಳಕೆಯಾಗುತ್ತಿರುವುದನ್ನು ತಪ್ಪಿಸಲು ರಾಜ್ಯ ಸರ್ಕಾರ ಕಠಿಣ ಕ್ರಮಗಳನ್ನು ಜಾರಿಗೆ ತರಲಿ.

**ಡಾ. ವಿಜಯಕುಮಾರ್ ಎಚ್.ಕೆ.,** ರಾಯಚೂರು

### ಗಂಧದ ಘಮ ರೈತರ ಬದುಕಲ್ಲೂ ಇರಲಿ

**ಕರ್ನಾಟಕದ** ಶ್ರೀಗಂಧದ್ದು ವಿಶ್ವಪ್ರಸಿದ್ಧಿ. ಆದರೆ, ಗಂಧದ ಮರಗಳ ಕೃಷಿಯಲ್ಲಿ ತೊಡಗಿರುವ ಕೃಷಿಕರ ಬವಣೆ ಹೇಳತೀರದು. ಶ್ರೀಗಂಧದ ಮರಗಳನ್ನು ರಕ್ಷಿಸಿಕೊಳ್ಳುವಲ್ಲಿ ಹಾಗೂ ಮಾರಾಟ ಮಾಡುವಲ್ಲಿ ರೈತರು ಎದುರಿಸುವ ಸವಾಲು ಸಾಮಾನ್ಯವಾದುದಲ್ಲ. ಕಂದಾಯ ಹಾಗೂ ಅರಣ್ಯ ಇಲಾಖೆಗಳಿಗೆ ಸುತ್ತಿ ಸುತ್ತಿ ಬಸವಳಿಯಬೇಕು. ಕಾಗದಪತ್ರಗಳ ಜಂಜಾಟದಲ್ಲಿ ದಣಿಯಬೇಕು. ಇದರ ಜೊತೆಗೆ, ಹಗಲಿರುಳು ಕಾವಲು ಕಾಯುವ ಸ್ಥಿತಿ. ಈ ಸಮಸ್ಯೆ–ಸವಾಲುಗಳ ಕುರಿತು ‘ಒಳನೋಟ’ಗಳನ್ನು ನೀಡುವ ಗಾಣಧಾಳು ಶ್ರೀಕಂಠರ ಲೇಖನ (ಪ್ರ.ವಾ., ನ. 23), ಸರ್ಕಾರದ ಕಣ್ಣನ್ನೂ ತೆರೆಸುವಂತಾಗಲಿ. ಆ ಮೂಲಕ ಶ್ರೀಗಂಧದ ಮರಗಳ ಬೆಳೆಗಾರರಿಗೆ ಅನುಕೂಲವಾಗುವ ನೀತಿ ರೂಪುಗೊಳ್ಳಲಿ.

**ಬಸವಚೇತನ ಹೂಗಾರ್,** ಬೀದರ್


### ಮೌಲ್ಯಾಧಾರಿತ ಶಿಕ್ಷಣ ಈ ಹೊತ್ತಿನ ಅಗತ್ಯ

**ನೂರಕ್ಕೆ** ನೂರು ಅಂಕ ಅಥವಾ ಶೇ 100 ಫಲಿತಾಂಶವನ್ನೇ ಗುಣಮಟ್ಟದ ಶಿಕ್ಷಣದ ಮಾಪಕವಾಗಿ ನೋಡುವ ಪರಿಸ್ಥಿತಿ ರೂಪುಗೊಂಡಿದೆ. ಮಕ್ಕಳ ಚಿಂತನಾಶಕ್ತಿ, ಪ್ರಶ್ನಿಸುವ ಮನೋವೃತ್ತಿ, ಮೌಲ್ಯಗಳು, ಜೀವನ ಕೌಶಲ್ಯ ಇವುಗಳಿಗೆ ಮಹತ್ವ ಸಿಗುತ್ತಿಲ್ಲ. ಪಾಠಪುಸ್ತಕದ ಹೊರಗಿನ ಪ್ರಶ್ನೆ ಕೇಳಿದರೆ ಮಕ್ಕಳು ಕಣ್ಣು ಬಿಡುವಂತಾಗಿದೆ. ಶಿಕ್ಷಕರು ತರಗತಿಯಲ್ಲಿ ತೋರಿಸುವ ಶ್ರಮ ಹಾಗೂ ಬೋಧನೆಯಲ್ಲಿ ಅವರು ತರುತ್ತಿರುವ ಬದುಕಿನ ಅನುಭವ ಅಳೆಯಲು ಅಂಕಗಳೇ ಮಾನದಂಡವಲ್ಲ.

ಶಾಲೆಗಳಲ್ಲಿ ಪುಸ್ತಕದ ಜ್ಞಾನಕ್ಕೂ, ಬದುಕಿನ ಪಾಠಕ್ಕೂ ಸಮಾನ ಸ್ಥಾನ ಸಿಗಬೇಕು. ವಿಜ್ಞಾನ ಕಲಿಯುವ ಮಗುವಿಗೆ ತೆರೆದ ಮನಸ್ಸಿನಿಂದ ಪ್ರಶ್ನೆ ಕೇಳಲು ಧೈರ್ಯವಿರಬೇಕು. ಈ ಧೈರ್ಯ ಬೆಳೆಸಿದಾಗ ಮಾತ್ರ ಸಮಾಜ ಜ್ಞಾನವಂತವಾಗುತ್ತದೆ. ‘ಒಳ್ಳೆಯ ನಾಗರಿಕ’ರ ಸೃಷ್ಟಿ ಮೌಲ್ಯಾಧಾರಿತ ಶಿಕ್ಷಣದಿಂದ ಸಾಧ್ಯವೇ ಹೊರತು, ಅಂಕಗಳಿಂದಲ್ಲ.

**ಶಿವಯೋಗಿ ಎಂ.ವಿ.,** ರಾಂಪುರ

### ಚುರುಮುರಿ



## ಬಡವಾದ ಶ್ರೀಸಾಮಾನ್ಯ

• ಸುಮಂಗಲಾ

**‘ಅಲ್ಲಾ...** ಎರಡೂವರೆ ವರ್ಷ ತೆವಳಾಡಿಕೋತ ನಡೆದಿದ್ದಕ್ಕೇ ಇಷ್ಟು ಸಂಭ್ರಮಪಟ್ವರೆ ಹೆಂಗೆ?’ ಎಂದು ಬೆಕ್ಕಣ್ಣ ಕುಟುಕಿತು.

‘ಹಿಂದೆ ಜಗ್ಗೂ ಮಂದೀನೆ ಎಲ್ಲ ಕಡಿ ಇದ್ದಾಗ, ತೆವಳಾಡುತ್ತಲೇ ಆದ್ರೂ ನಡೆಯೂದೆ ಸಾಧನೆ ಅನ್ನಿಸಿಕೊಳ್ಳತೈತಿ’ ಎಂದು ನಾನು ಕುಟುಕಿದೆ.

‘ಹಂಗಾರೆ ದಶಕದಿಂದ ಖರೇಖರೇ ಮ್ಯಾರಾಥಾನ್ ಓಡುತಿರೋ ನಮ್ ಮೋದಿ ಮಾಮಾರು, ನಿತೀಶ್ ಅಂಕಲ್ಲು ಇನ್ನೆಷ್ಟು ಬೀಗಬೇಕು? ಅದು ಹೋಗಲಿ, ಈ ನಡಿಗೆಯ ನಡುವೆಯೇ ಕೈಕಿತ್ತಾಟ ನೋಡಿದ್ರೆ... ಆಹಾ!’ ಎನ್ನುತ್ತಾ ಬೆಕ್ಕಣ್ಣ ಮಾರ್ಮಿಕವಾಗಿ ತಲೆ ಚಚ್ಚಿಕೊಂಡಿತು.

‘ಇದು ಮ್ಯಾರಾಥಾನೂ ಅಲ್ಲ, ಐದು ವರ್ಷದ ನಡಿಗೇನೂ ಅಲ್ಲ, ಎರಡೂವರೆ ವರ್ಷದ ರಿಲೇ. ಹಿಂಗಾಗಿ ಈಗ ರಿಲೇ ಬ್ಯಾಟನ್ನು ತನಗ ಕೊಡಬಕು ಅಂತ ಡಿಕೇಶಂಕಲ್ಲು ವಾದ’ ಎಂದೆ.

‘ಯಾರಿಗೆ, ಯಾವಾಗ ರಿಲೇ ಬ್ಯಾಟನ್ನು ಒಪ್ಪಿಸಬಕು ಅಂತ ಸ್ಟಾಂಪ್ ಪೇಪರಿನಲ್ಲಿ ಆವಾಗಲೇ ಬರೆದು ಅಫಿಡವಿಟ್ ಮಾಡಿಸಿದ್ದರೆ ಇಷ್ಟೆಲ್ಲ ಮುಸುಕಿನ ಗುದ್ದಾಟವೇ ಇರತಿರಲಿಲ್ಲ’ ಎಂದಿತು ಬೆಕ್ಕಣ್ಣ.

‘ಗಾಳ ಹಾಕಿ ಮೀನು ಹಿಡಿಯೂ ಕಲೆ ತನಗ ಗೊತ್ತು ಅಂತ ಡಿಕೇಶಂಕಲ್ಲು ಹೇಳ್ಯಾರೆ. ನೋಡುತಿರು... ಅವರು ಹೆಂಗ ಮೀನು ಹಿಡಿದು ತಮ್ಮ ಬುಟ್ಟಿವಳಗೆ ಹಾಕಿಕೋತಾರ ಅಂತ!’

‘ಹಿಂಗ ಅವರವರೇ ಮೀನು ಹಿಡಿದು ತಮ್ಮ ಬುಟ್ಟಿಗೆ ಹಾಕಿಕೊಳ್ಳಾಕ ಶುರುಮಾಡಿದರೆ ಕರುನಾಡೂ ಇವರ ಕೈತಪ್ಪಿ ಹೋಗತೈತಿ ಅಷ್ಟೇ!’ ಬೆಕ್ಕಣ್ಣ ನಕ್ಕಿತು.

‘ಏನೇ ಆದರೂ ಕೈಗಳು ಬುದ್ಧಿ ಕಲಿಯಂಗಿಲ್ಲ ಬಿಡು! ಪರಸ್ಪರ ಕಾಲೆಳೆಯೋದು, ಕೆಸರೆರಚಿಕೊಳ್ಳದ್ರಲ್ಲೇ ಕೈಗಳಿಗೆ ಸಂತೃಪ್ತಿ ಇದ್ದಂಗೆ ಕಾಣತದೆ. ಕಮಲ–ತೆನೆಯನ್ನು ಹಿಡಿಯೋ ಬಯಕೆ ಒಳಗೊಳಗೇ ಕೈಗಳಿಗೆ ಇದ್ದಂಗೆ ಕಾಣತದೆ’ ಎಂದು ನಾನೂ ನಕ್ಕೆ.

‘ಕೈಗಳ ಜಗಳದಲ್ಲಿ, ಕಮಲದಳಗಳ ಗುದ್ದಾಟದಲ್ಲಿ ಶ್ರೀಸಾಮಾನ್ಯ ಬಡವಾದ! ಎಲ್ಲಾರೂ ಅವರವರ ಬೇಳೆ ಬೇಯಿಸಿಕೊಂಡು ತಿಂದುಂಡು, ಶ್ರೀಸಾಮಾನ್ಯರ ಕೈಗೆ ಖಾಲಿ ತಪ್ಪಲೆ ಕೊಡತಾರೆ ತಿಳಕೋರಿ!’ ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

ಬೆಕ್ಕಣ್ಣನ ಮಾತಿಗೆ ಮರುಮಾತು ಹುಟ್ಟಲಿಲ್ಲ.

## ಸಂಗತ

# ಸಂವಿಧಾನ: ಪ್ರಜಾಪ್ರಭುತ್ವದ ನಾಡಿ

**ಸಂವಿಧಾನ ಭಾರತೀಯರ ಸ್ವಾಭಿಮಾನದ ಸಂಕೇತ. ಸಂವಿಧಾನವನ್ನು ಅಲಕ್ಷಿಸಿರುವ ಕಾರಣದಿಂದಲೇ ಕಾಂಗ್ರೆಸ್ ಪಕ್ಷವನ್ನು ದೇಶದ ಜನ ಮತ್ತೆ ಮತ್ತೆ ತಿರಸ್ಕರಿಸಿದ್ದಾರೆ.**

• ಬಿ.ವೈ. ವಿಜಯೇಂದ್ರ

**‘ಸಂವಿಧಾನ ದಿವಸ’** ಭಾರತೀಯರ ಪಾಲಿಗೆ ಹೆಮ್ಮೆಯ ಆಚರಣೆ. ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಿರ್ವಹಿಸುವ ಹೃದಯ ಸ್ಥಾನದಲ್ಲಿ ನಿಂತಿರುವ ಸಂವಿಧಾನ ಭಾರತವನ್ನು ಬೆಳಗುತ್ತಿದೆ. ಭಾರತೀಯರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂರಕ್ಷಿಸಿ ಪ್ರಜಾತಂತ್ರ ವ್ಯವಸ್ಥೆಯ ನಾಡಿಮಿಡಿತವಾಗಿ ತನ್ನ ಮಹತ್ವವನ್ನು ಸಾರುತ್ತಿದೆ.

ಮಹಾಭಾರತ, ರಾಮಾಯಣದ ಜೊತೆಗೆ ಅನೇಕ ಶ್ರೇಷ್ಠ ಗ್ರಂಥಗಳು ಭಾರತದ ಭವ್ಯ ಪರಂಪರೆಯ ಸರ್ವಮಾನ್ಯ ಶ್ರೇಷ್ಠತೆಯನ್ನು ಗತಕಾಲದಿಂದಲೂ ಪ್ರತಿನಿಧಿಸುತ್ತಿವೆ. ಆದರೆ, ಬ್ರಿಟಿಷರ ದಾಸ್ಯಸಂಕೋಲೆಯನ್ನು ಮೆಟ್ಟಿ ಸ್ವಾತಂತ್ರ್ಯ ಪಡೆದ ನಮಗೆ ಬಾಬಾ ಸಾಹೇಬ್ ಅಂಬೇಡ್ಕರ್ ಕೊಡಮಾಡಿದ ಸಂವಿಧಾನ ಆತ್ಮವಿಶ್ವಾಸದ ಜ್ಯೋತಿಯಾಗಿ ಬೆಳಗುತ್ತಿದೆ.

‘ಸಂವಿಧಾನ’ ಪ್ರಜಾಪ್ರಭುತ್ವ ಕಾಯುವ ಏಕೈಕ ಗ್ರಂಥ. ಈ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿ ಅವರು, ‘ಸಂವಿಧಾನ ಬರೀ ನ್ಯಾಯಾಲಯಗಳಿಗೆ ಸೀಮಿತವಾಗಿರಬಾರದು. ಸಂವಿಧಾನವು ನಮ್ಮ ಜೀವನ, ನಮ್ಮ ಸಂಸ್ಕಾರಗಳಿಗೆ, ನಮ್ಮ ಭಾವನೆಗಳಿಗೆ ನವಚೈತನ್ಯವನ್ನು ಕೊಡಬಲ್ಲದು. ಅದಕ್ಕಾಗಿ ನಾವು ಅದನ್ನು ಜನಸಾಮಾನ್ಯರ ಹೃದಯಸ್ಪರ್ಶಿಸುವವರೆಗೂ ತೆಗೆದುಕೊಂಡು ಹೋಗಬೇಕು’ ಎನ್ನುವ ಹಿನ್ನೆಲೆಯಲ್ಲಿ, ನವೆಂಬರ್ 26ರ ದಿನವನ್ನು ‘ಸಂವಿಧಾನ ದಿವಸ’ ಎಂದು ಆಚರಿಸುವ ನಿರ್ಧಾರ ತೆಗೆದುಕೊಂಡರು.



ಸಂವಿಧಾನವು ದೇಶದ ಪ್ರತಿ ಪ್ರಜೆಯ ಸ್ವಾಭಿಮಾನದ ಸಂಕೇತವಾಗಬೇಕು. ಸಂವಿಧಾನದ ಜಾಗೃತಿ ಪ್ರತಿಯೊಬ್ಬರ ಮನದಲ್ಲೂ ಅಚ್ಚೊತ್ತಬೇಕು. ಸಂವಿಧಾನದ ಅರಿವು ಪ್ರತಿ ಪ್ರಜೆಯ ಕರ್ತವ್ಯವಾಗಬೇಕು. ಈ ಆಶಯವನ್ನು ಸಾಕಾರಗೊಳಿಸುವ ದೃಷ್ಟಿಯಿಂದಲೇ ಸಂವಿಧಾನ ದಿನ ಆಚರಿಸಲಾಗುತ್ತಿದೆ.

ಸಂವಿಧಾನದ ಉದ್ದೇಶ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಸಮಾನವಾಗಿ ವಿತರಿಸುವುದು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವುದಾಗಿದೆ. ಸಂವಿಧಾನದ ಅರ್ಥ, ಮಹತ್ವ ಹಾಗೂ ಜವಾಬ್ದಾರಿಯನ್ನು ನಮ್ಮ ಜನ ಅರ್ಥ ಮಾಡಿಕೊಳ್ಳಬೇಕು ಎಂಬುದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯವಾಗಿತ್ತು.

ಸತತ ಮೂರು ವರ್ಷಗಳ ಕಾಲ ಬಲಿಷ್ಠ ಭಾರತವನ್ನು ಕಟ್ಟುವ ಮಹಾಸಂಕಲ್ಪದಿಂದ ಸಂವಿಧಾನ ರಚನೆಯ ಕಾರ್ಯಕ್ಕಾಗಿ ಅಂಬೇಡ್ಕರ್ ಅವರ ನೇತೃತ್ವದ ಸಂವಿಧಾನ ರಚನಾ ಸಮಿತಿಯು ಶ್ರಮಿಸಿದ್ದನ್ನು ಸ್ವತಂತ್ರ ಭಾರತದ ಪ್ರಜಾಪ್ರಭುತ್ವದ ಸವಿಯನ್ನು ಅನುಭವಿಸುತ್ತಿರುವ ನಾವೆಲ್ಲರೂ ಕೃತಜ್ಞತೆಯಿಂದ ಸ್ಮರಿಸಬೇಕು. ಕಾಂಗ್ರೆಸ್ ಪಕ್ಷ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಂಡ ಪ್ರಸಂಗಗಳೇ ಹೆಚ್ಚು ಎನ್ನುವುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಪ್ರಸ್ತುತ, ಕಾಂಗ್ರೆಸ್ಸಿಗರು ಸಂವಿಧಾನವನ್ನು ಹಾಗೂ ಅಂಬೇಡ್ಕರ್ ಅವರನ್ನು ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಗುರಾಣಿಯಂತೆ ಬಳಸಿಕೊಳ್ಳುತ್ತಿದ್ದಾರೆ. ಅಧಿಕಾರ ರಾಜಕಾರಣಕ್ಕಾಗಿ ಸುಳ್ಳಿನ ಜಾಲವನ್ನು ಹೆಣೆದು, ಅದನ್ನು ಭಾರತೀಯ ಜನತಾ ಪಾರ್ಟಿಯ ಹಣೆಗೆ ಕಟ್ಟಲು ವಿಫಲಯತ್ನ ನಡೆಸಿದ್ದಾರೆ. ಇಡೀ ದೇಶದಲ್ಲಿ ಕಾಂಗ್ರೆಸ್ಸಿಗರ ಈ ಇಬ್ಬಂದಿತನಕ್ಕೆ ಜನತೆ ತಕ್ಕ ಪಾಠವನ್ನೇ ಕಲಿಸಿದ್ದಾರೆ. ಅದರಲ್ಲೂ ಪರಿಶಿಷ್ಟ ಸಮುದಾಯಗಳು ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣ ದೂರಸರಿಸಿದ್ದಾರೆ. ಬಿಹಾರದ ಚುನಾವಣೆಯಲ್ಲಂತೂ ಇದು ಸ್ಪಷ್ಟವಾಗಿ ಗೋಚರಿಸಿದೆ. ಪರಿಶಿಷ್ಟರು, ಹಿಂದುಳಿದವರು ಹಾಗೂ ಅತೀ ಹಿಂದುಳಿದವರು ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣವಾಗಿ ಧಿಕ್ಕರಿಸಿದ್ದಾರೆ. ಕಾಂಗ್ರೆಸ್ ತನ್ನ ಅಸ್ತಿತ್ವಕ್ಕಾಗಿ ರಾಜಕೀಯ ಭೂಪಟದಲ್ಲಿ ತಿಣುಕಾಡುತ್ತಿದೆ.

ಕಾಂಗ್ರೆಸ್‌ನ ಇಂದಿನ ಸ್ಥಿತಿಗೆ ಸಂವಿಧಾನದ ಆಶಯವನ್ನು ಬದಿಗೆ ಸರಿಸಿರುವುದೇ ಕಾರಣವಾಗಿದೆ. ಐತಿಹಾಸಿಕ ಸ್ವಾತಂತ್ರ್ಯ ಸಂಗ್ರಾಮದ ತ್ಯಾಗ– ಬಲಿದಾನಗಳನ್ನು ಅವಮಾನಿಸುವ ರೀತಿಯಲ್ಲಿ ಪ್ರಜಾತಂತ್ರ ವ್ಯವಸ್ಥೆಯ ಕತ್ತು ಹಿಸುಕಿ, ಸಂವಿಧಾನವನ್ನು ಅಮಾನತುಗೊಳಿಸಿ, ಎಪ್ಪತ್ತರ ದಶಕದಲ್ಲಿ ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್ ಪಕ್ಷಕ್ಕೆ ಸಂವಿಧಾನ ಹಾಗೂ ಬಾಬಾ ಸಾಹೇಬರ ಕುರಿತು ಮಾತನಾಡುವ ಯಾವ ನೈತಿಕತೆಯಿದೆ? ಕರ್ನಾಟಕದಲ್ಲಿ ಕಾಂಗ್ರೆಸ್ಸಿಗರು ರಾಷ್ಟ್ರಭಕ್ತ ಸಂಘಟನೆಗಳನ್ನು, ನೈಜ ಭಾರತೀಯತೆಯ ಪ್ರತಿಪಾದಕರನ್ನು ಅವಮಾನಿಸಲೆಂದೇ ಸಂವಿಧಾನದ ಹೆಸರನ್ನು ದುರ್ಬಳಕೆ ಮಾಡಿಕೊಂಡು, ಕಟ್ಟುಕಥೆಗಳನ್ನು ಹೆಣೆದು ದಮನಿತ ಸಮುದಾಯಗಳನ್ನು ದಿಕ್ಕುತಪ್ಪಿಸಲು ಹವಣಿಸುತ್ತಿದ್ದಾರೆ. ಇಂತಹ ಹಸಿ ಸುಳ್ಳಿನ ಅಪಪ್ರಚಾರಗಳಿಗೆ ಹೆಚ್ಚಿನ ಆಯುಷ್ಯವಿಲ್ಲ ಎಂಬುದನ್ನು ಬಿಹಾರದ ಫಲಿತಾಂಶ ತೋರಿಸಿಕೊಟ್ಟಿದೆ. ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲೂ ಇದರ ಪ್ರತಿಫಲನವಾಗಲಿದೆ. ಸಂವಿಧಾನದ ಮಾರ್ಗದಲ್ಲಿ ಭವಿಷ್ಯತ್ತಿನಲ್ಲಿ ಇವರಿಗೆ ತಕ್ಕ ಉತ್ತರ ಸಿಗಲಿದೆ.

ಭಾರತೀಯ ಜನತಾ ಪಾರ್ಟಿ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಎಂದಿಗೂ ನಡೆದುಕೊಂಡ ಉದಾಹರಣೆಗಳಿಲ್ಲ. ಕಾಂಗ್ರೆಸ್ಸಿಗರಂತೆ ಸ್ವಾರ್ಥಕ್ಕಾಗಿ ಹಲವು ಬಾರಿ ಸಂವಿಧಾನಕ್ಕೆ ತಿದ್ದುಪಡಿ ತರಲಿಲ್ಲ. ತಂದ ಬೆರಳೆಣಿಕೆಯ ತಿದ್ದುಪಡಿಗಳೆಲ್ಲವೂ ರಾಷ್ಟ್ರದ ಹಿತಕ್ಕಾಗಿಯೇ: ಅದು ಆರ್ಟಿಕಲ್ 370 ಇರಬಹುದು, ಸಿಎಎ ಇರಬಹುದು ಅಥವಾ ಇತರ ಯಾವುದೇ ತಿದ್ದುಪಡಿಗಳಿರಬಹುದು. ಅವೆಲ್ಲವೂ ರಾಷ್ಟ್ರ ರಕ್ಷಣೆ ಮತ್ತು ಪ್ರಜಾಪ್ರಭುತ್ವದ ಸಬಲತೆಗಾಗಿ ತಂದ ತಿದ್ದುಪಡಿಗಳಾಗಿವೆ. ಸಂವಿಧಾನ ಬದ್ಧತೆಯ ಪ್ರತೀಕದ ರೂಪದಲ್ಲೇ ‘ಸಂವಿಧಾನ ದಿನ’ದ ಆಚರಣೆಯ ಕೇಂದ್ರ ಸರ್ಕಾರದ ನಿರ್ಧಾರವನ್ನು ಗುರ್ತಿಸಬಹುದು. ನವೆಂಬರ್ 26ರಿಂದ ಡಿಸೆಂಬರ್ 6ರವರೆಗೆ ಸಂವಿಧಾನ ಸಮರ್ಪಣಾ ದಿನವನ್ನು ರಾಜ್ಯ ಬಿಜೆಪಿ ಹೆಮ್ಮೆಯಿಂದ ಆಚರಿಸುತ್ತಿದೆ; ‘ಭೀಮ ಸ್ಮರಣೆ’ ಅಭಿಯಾನವನ್ನೂ ಹಮ್ಮಿಕೊಂಡಿದೆ.

ಲೇಖಕ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಕುಂದೀತೇ ತೇಜಸ್ಸು?

● ಸೂರ್ಯನಾರಾಯಣ ವಿ.

**ಸ್ವದೇಶಿ** ತಂತ್ರಜ್ಞಾನದಲ್ಲಿ ಭಾರತದಲ್ಲೇ ನಿರ್ಮಿಸಲಾದ ತೇಜಸ್ ಹಗುರ ಯುದ್ಧ ವಿಮಾನವು ದುಬೈ ಏರ್ ಶೋನ ಕೊನೆಯ ದಿನ ಕಸರತ್ತು ನಡೆಸುತ್ತಿದ್ದ ಸಂದರ್ಭದಲ್ಲೇ ಪತನಗೊಂಡಿದ್ದು ಮಾತ್ರವಲ್ಲದೇ, ವಿಮಾನದ ಪೈಲಟ್ ವಿಂಗ್ ಕಮಾಂಡರ್ ನಮಾಂಶ್ ಸ್ಯಾಲ್ ಅವರು ಮೃತಪಟ್ಟಿರುವುದು ದೇಶದ ರಕ್ಷಣಾ ವಲಯದಲ್ಲಿ ಆಘಾತ ಉಂಟು ಮಾಡಿದೆ.

ದೇಶದ ರಕ್ಷಣಾ ಕ್ಷೇತ್ರಕ್ಕೆ ಹೊಸ ದಿಕ್ಕು ತೋರುವ ಸಾಮರ್ಥ್ಯವಿರುವ ತೇಜಸ್ ಯುದ್ಧವಿಮಾನವು ಜಾಗತಿಕ ಮಟ್ಟದಲ್ಲಿ ಈಗಷ್ಟೇ ಪ್ರವರ್ಧಮಾನಕ್ಕೆ ಬರುತ್ತಿದೆ. ರಕ್ಷಣಾ ವಲಯದಲ್ಲಿ ಸ್ವಾವಲಂಬನೆ ಸಾಧಿಸುವ ಮಹತ್ವಾಕಾಂಕ್ಷೆ ಹೊಂದಿರುವ ಕೇಂದ್ರ ಸರ್ಕಾರವು ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ನಿರ್ಮಿತ ಈ ಯುದ್ಧವಿಮಾನಗಳನ್ನು ದೊಡ್ಡ ಸಂಖ್ಯೆಯಲ್ಲಿ ವಾಯುಪಡೆ ಮತ್ತು ನೌಕಾ ಪಡೆಗಳಿಗೆ ಸೇರ್ಪಡೆಗೊಳಿಸಲು ನಿರ್ಧರಿಸಿದೆ. ಅಲ್ಲದೇ, ಬೇರೆ ದೇಶಗಳಿಗೂ ಈ ವಿಮಾನಗಳನ್ನು ರಫ್ತು ಮಾಡುವ ಯೋಜನೆಯನ್ನೂ ಹೊಂದಿದೆ. ಇಂತಹ ಸನ್ನಿವೇಶದಲ್ಲಿ ಜಾಗತಿಕವಾಗಿ ನಡೆಯುವ ಪ್ರತಿಷ್ಠಿತ ಏರ್‌ಶೋಗಳಲ್ಲಿ ಒಂದಾದ ದುಬೈ ವಾಯುಪ್ರದರ್ಶನದಲ್ಲಿ ವಿಮಾನ ಅಪಘಾತಕ್ಕೀಡಾಗಿರುವುದು, ಜಗತ್ತಿನ ಮುಂದೆ ಸ್ವದೇಶಿ ನಿರ್ಮಿತ ತಂತ್ರಜ್ಞಾನವನ್ನು ತೆರೆದಿಡುವ ಮತ್ತು ಹೊರದೇಶಗಳಿಗೆ ಈ ವಿಮಾನವನ್ನು ಮಾರಾಟ ಮಾಡುವ ಭಾರತದ ಯತ್ನಕ್ಕೆ ಕೊಂಚ ಹಿನ್ನಡೆ ಉಂಟು ಮಾಡಿದೆ ಎಂದು ಹೇಳಲಾಗುತ್ತಿದೆ.

### ಅಪಪ್ರಚಾರ

ಐಎಎಫ್ ಅಧಿಕಾರಿಗಳು, ನಿವೃತ್ತ ಸೇನಾಧಿಕಾರಿಗಳು, ತಜ್ಞರು ತೇಜಸ್‌ನ ಸಾಮರ್ಥ್ಯ, ಕಾರ್ಯಕ್ಷಮತೆಯ ಬಗ್ಗೆ ಈಗಲೂ ದೃಢವಾದ ನಂಬಿಕೆ ಹೊಂದಿದ್ದಾರೆ. ಆದರೆ, ವಿದೇಶಿಯರು ನಿರ್ವಹಿಸುತ್ತಿರುವ ವಿಶೇಷವಾಗಿ ಪಾಕಿಸ್ತಾನ ಮೂಲದ ಸಾಮಾಜಿಕ ಜಾಲತಾಣ ಖಾತೆಗಳ ಬಳಕೆದಾರರು ತೇಜಸ್ ಬಗ್ಗೆ ಅಪಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ.

ದುಬೈ ಏರ್‌ಶೋ ನಡೆಯುತ್ತಿದ್ದ ಸ್ಥಳದಲ್ಲಿ ನಿಲ್ಲಿಸಲಾಗಿದ್ದ ತೇಜಸ್ ವಿಮಾನದಲ್ಲಿ ತೈಲ ಸೋರಿಕೆಯಾಗುತ್ತಿದೆ ಎಂಬ ಸುಳ್ಳು ಸುದ್ದಿಯನ್ನು ಈ ಮೊದಲು ಹರಡಲಾಗಿತ್ತು. ಭಾರತ ಫ್ಯಾಕ್ಟ್‌ಚೆಕ್ ಮೂಲಕ ಅದನ್ನು ತಳ್ಳಿಹಾಕಬೇಕಾಯಿತು. ವಿಮಾನ ಪತನವಾದುದನ್ನು ನೋಡುತ್ತಿದ್ದ ಪಾಕ್ ಪತ್ರಕರ್ತರೊಬ್ಬರು ವ್ಯಂಗ್ಯ ವಾಡುತ್ತಿರುವ ವಿಡಿಯೊವೊಂದು ಈಗ ಹರಿದಾಡುತ್ತಿದೆ. ತೇಜಸ್ ವಿಮಾನ ಅಲ್ಲ, ಅದು ಸಮೋಸ... ಹೀಗೆ ಅಪಪ್ರಚಾರ ಮಾಡುವ ಹಲವು ಪೋಸ್ಟ್‌ಗಳು ಈಗ ಜಾಲತಾಣಗಳಲ್ಲಿ ಹರಿದಾಡುತ್ತಿವೆ.



ಶುಕ್ರವಾರ (ನ.21) ನಡೆದ ಅಪಘಾತಕ್ಕೆ ಏನು ಕಾರಣ ಎಂಬುದು ಇನ್ನೂ ತಿಳಿದು ಬಂದಿಲ್ಲ. ಆದರೆ, ಪತನಕ್ಕೂ ಮುನ್ನ ಪೈಲಟ್ ಸ್ಯಾಲ್ ಅವರು ನಡೆಸುತ್ತಿದ್ದ ಕಸರತ್ತು ಅತ್ಯಂತ ಸಂಕೀರ್ಣವಾದುದು ಮತ್ತು ಹೆಚ್ಚು ಕೌಶಲ ಬೇಕು. 'ಅಪಘಾತಕ್ಕೆ ತಾಂತ್ರಿಕ ಕಾರಣವೂ ಇರಬಹುದು, ಮಾನವ ಲೋಪವೂ ಇರಬಹುದು, ಉಪಕರಣಗಳು ಸರಿಯಾಗಿ ಕಾರ್ಯನಿರ್ವಹಿಸದೇ ಇದ್ದುದೂ ಕಾರಣವಾಗಿರಬಹುದು. ಅದು ತನಿಖೆಯಿಂದಷ್ಟೇ ತಿಳಿದುಬರಲಿದೆ' ಎಂದು ವಾಯುಪಡೆಯ ಅಧಿಕಾರಿಗಳು ಹೇಳಿದ್ದಾರೆ.

2011ರಲ್ಲಿ ತೇಜಸ್ ವಿಮಾನವು ಮೊದಲ ಬಾರಿಗೆ ಹಾರಾಟ ನಡೆಸಿದ ಬಳಿಕ ಪತನಕ್ಕೆ ಈಡಾಗುತ್ತಿರುವುದು ಇದು ಎರಡನೇ ಬಾರಿ. ಕಳೆದ ವರ್ಷದ ಮಾರ್ಚ್‌ನಲ್ಲಿ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಈ ವಿಮಾನ ಮೊದಲ ಬಾರಿಗೆ ಪತನಗೊಂಡಿತ್ತು. ಆ ಸಂದರ್ಭದಲ್ಲಿ ಪೈಲಟ್ ಅವರು ಪ್ಯಾರಾಚೂಟ್ ಮೂಲಕ ಸುರಕ್ಷಿತವಾಗಿ ಭೂಮಿಗೆ ಇಳಿದಿದ್ದರು.

ಯುದ್ಧ ವಿಮಾನಗಳು ಅಪಘಾತಕ್ಕೆ ಈಡಾಗುವುದು ಹೊಸದೇನಲ್ಲ. ಜಾಗತಿಕ ಮಟ್ಟದಲ್ಲಿ ಅತ್ಯುತ್ಕೃಷ್ಟ ವಿಮಾನಗಳು ಎಂದು ಹೆಸರು ಮಾಡಿದ ಯುದ್ಧವಿಮಾನಗಳು ವಾಯುಪ್ರದರ್ಶನಗಳಲ್ಲೇ ಪತನಗೊಂಡಿರುವ ಉದಾಹರಣೆಗಳು ಹಲವು ಇವೆ. ಹಾಗಾಗಿ, ಈಗ ತೇಜಸ್ ಯುದ್ಧವಿಮಾನ ಪತನಗೊಂಡಿರುವುದು ದೊಡ್ಡ ಸಂಗತಿ ಅಲ್ಲ. ಆದರೆ, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವೊಂದು ಅಭಿವೃದ್ಧಿ ಪಡಿಸಿರುವ ವಿಮಾನವೊಂದು ಜಾಗತಿಕ ಮಟ್ಟದ ಪ್ರದರ್ಶನದಲ್ಲಿ ಅಪಘಾತಕ್ಕೀಡಾಗಿರುವುದು ಪ್ರಪಂಚಕ್ಕೆ ಬೇರೆಯದೇ ಆದ ಸಂದೇಶ ರವಾನಿಸುತ್ತದೆ ಎಂಬುದು ತಜ್ಞರ ವಾದ.

ದೇಶೀಯವಾಗಿ ಬಳಸುವುದರ ಜೊತೆಗೆ ಏಷ್ಯಾ, ಅಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳಿಗೆ ಈ ವಿಮಾನವನ್ನು ಮಾರಾಟ ಮಾಡುವ ಗುರಿಯನ್ನೂ ಕೇಂದ್ರ ಸರ್ಕಾರ ಹಾಕಿಕೊಂಡಿದೆ. ಇದೇ ಉದ್ದೇಶಕ್ಕೆ 2023ರಲ್ಲಿ ಮಲೇಷ್ಯಾದಲ್ಲಿ ಎಚ್‌ಎಎಲ್ ಪ್ರಾದೇಶಿಕ ಕಚೇರಿಯನ್ನೂ ತೆರೆದಿದೆ.

'ಆದರೆ, ಈಗ ಅಪಘಾತ ಸಂಭವಿಸಿರುವುದರಿಂದ ಜಾಗತಿಕ ಮಟ್ಟದಲ್ಲಿ ವಿಮಾನದ ಸುರಕ್ಷತೆ, ಕಾರ್ಯಕ್ಷಮತೆ, ಸಾಮರ್ಥ್ಯದ ಬಗ್ಗೆ ಬೇರೆ ದೇಶಗಳಲ್ಲಿ ಗೊಂದಲ ಮೂಡಬಹುದು. ಹಾಗಾಗಿ, ಅವುಗಳು ತೇಜಸ್ ಖರೀದಿಗೆ ಆಸಕ್ತಿ ತೋರದಿರುವ ಸಾಧ್ಯತೆ ಇದೆ. ಹೀಗಾಗಿ ಸದ್ಯದ ಮಟ್ಟಿಗೆ ಎಚ್‌ಎಎಲ್ ದೇಶೀಯ ಬೇಡಿಕೆಯನ್ನು ಪೂರೈಸುವುದಕ್ಕಷ್ಟೇ ಗಮನ ನೀಡಬೇಕಾಗಬಹುದು' ಎಂದು ರಕ್ಷಣಾ ಕ್ಷೇತ್ರದ ತಜ್ಞರು ಹೇಳುತ್ತಿದ್ದಾರೆ.

1999ರ ಪ್ಯಾರಿಸ್ ಏರ್ ಶೋನಲ್ಲಿ ಕಸರತ್ತು ನಡೆಸುತ್ತಿದ್ದ ಸುಖೋಯ್ 30ಎಂಕೆಐ ಯುದ್ಧವಿಮಾನವು ಪತನಗೊಂಡಿತ್ತು. ಈ ವಿಮಾನವು ಭಾರತದ ಬಳಿ ಇದ್ದ ಸುಖೋಯ್–30ರ ಅತ್ಯಾಧುನಿಕ ಆವೃತ್ತಿ. ಯುದ್ಧ ವಿಮಾನ ಪತನಗೊಂಡ ಹೊರತಾಗಿಯೂ ಭಾರತವು 2002ರಲ್ಲಿ ಈ ವಿಮಾನಗಳನ್ನು ವಾಯುಪಡೆಗೆ ಸೇರ್ಪಡೆಗೊಳಿಸಿತ್ತು. ಒಂದು ಅಪಘಾತದಿಂದ ಯುದ್ಧವಿಮಾನದ ಸಾಮರ್ಥ್ಯವನ್ನು ಅಳೆಯಲಾಗದು. ಹಾಗಾಗಿ, ಹೊರ ದೇಶಗಳು ತೇಜಸ್ ಮೇಲೆ ಆಸಕ್ತಿ ತೋರಲಾರವು ಎಂದು ಈಗಲೇ ಹೇಳಲು ಸಾಧ್ಯವಿಲ್ಲ ಎಂಬ ವಾದವೂ ಇದೆ.

## ಹೇಗಿದೆ ತೇಜಸ್ ಯುದ್ಧ ವಿಮಾನ?

4.5 ಪೀಳಿಗೆಯ, ಎಂತಹುದೇ ಹವಾಮಾನ ಪರಿಸ್ಥಿತಿಯಲ್ಲಿ ಕಾರ್ಯಾಚರಿಸಬಲ್ಲ, ಬಹುಪಾತ್ರ ನಿರ್ವಹಿಸುವ ಸಾಮರ್ಥ್ಯವಿರುವ ಸ್ವದೇಶಿ ತಂತ್ರಜ್ಞಾನದಲ್ಲಿ ನಿರ್ಮಿಸಿರುವ ಯುದ್ಧ ವಿಮಾನ. ಈ ಶ್ರೇಣಿಯಲ್ಲೇ ಸಣ್ಣ ಮತ್ತು ಹಗುರ ಯುದ್ಧ ವಿಮಾನ ಎಂಬ ಹೆಗ್ಗಳಿಕೆ ಇದಕ್ಕಿದೆ

₹650 ಕೋಟಿ ಅಂದಾಜು ಬೆಲೆ

1 ಮತ್ತು 2* ಆಸನ ಸಾಮರ್ಥ್ಯಗಳು

* ತರಬೇತಿ ಉದ್ದೇಶದ ಯುದ್ಧವಿಮಾನಗಳು ಎರಡು ಆಸನ ಹೊಂದಿರುತ್ತವೆ

13.2 ಮೀಟರ್ ಉದ್ದ

8.2 ಮೀಟರ್ ಅಗಲ

4.4 ಮೀಟರ್ ಎತ್ತರ

13,500 ಕೆಜಿ ಗರಿಷ್ಠ ತೂಕ (ಟೇಕ್‌ಆಫ್ ಸಂದರ್ಭ)

4,000 ಕೆ.ಜಿ. ತೂಕ ಹೊರುವ ಗರಿಷ್ಠ ಸಾಮರ್ಥ್ಯ

ಜಿಇ ಎಫ್404–ಐಎನ್20 ಎಂಜಿನ್ (ಒಂದು)

1,975.68 ಕಿ.ಮೀ/ಪ್ರತಿ ಗಂಟೆಗೆ (1.6 ಮಾಕ್) ಗರಿಷ್ಠ ವೇಗ

50 ಸಾವಿರ ಅಡಿ ಗರಿಷ್ಠ ಹಾರಾಟ ಸಾಮರ್ಥ್ಯ (ಎತ್ತರ)



### ಎಲ್‌ಸಿಎ ಎಂಕೆ1ಎ

ತೇಜಸ್ ಯುದ್ಧವಿಮಾನದ ಅತ್ಯಂತ ಅತ್ಯಾಧುನಿಕ ಆವೃತ್ತಿ. ಈ ವಿಮಾನವು ಎಇಎಸ್‌ಎ ರೇಡಾರ್, ರೇಡಾರ್ ಎಚ್ಚರಿಕೆ ಮತ್ತು ಸ್ವಯಂ ರಕ್ಷಣೆಯ ಜ್ಯಾಮಿಂಗ್ ವ್ಯವಸ್ಥೆ, ಡಿಜಿಟಲ್ ಮ್ಯಾಪ್ ಜನರೇಟರ್ (ಡಿಜಿಎಂ), ಸ್ಮಾರ್ಟ್ ಮಲ್ಟಿ ಫಂಕ್ಷನ್ ಡಿಸ್ಪ್ಲೇಗಳು (ಎಸ್‌ಎಂಎಫ್‌ಡಿ), ಕಂಬೈನ್ಡ್ ಇಂಟರೊಗೇಟರ್ ಮತ್ತು ಟ್ರಾನ್ಸ್‌ಪಾಂಡರ್ (ಸಿಐಟಿ), ಅತ್ಯಾಧುನಿಕ ರೇಡಿಯೊ ಅಲ್ಟಿಮೀಟರ್ ಮತ್ತು ಇತರೆ ಅತ್ಯಾಧುನಿಕ ಸಲಕರಣಗಳನ್ನು ಒಳಗೊಂಡಿದೆ

### ಏರ್‌ಶೋ: ಪ್ರಮುಖ ದುರಂತಗಳು

- **2025 ಆಗಸ್ಟ್ 28:** ಪೋಲೆಂಡ್‌ನ ರಾದೊಮ್‌ನಲ್ಲಿ ಆಯೋಜಿಸಲಾಗಿದ್ದ ಏರ್‌ಶೋನಲ್ಲಿ ಭಾಗವಹಿಸುವುದಕ್ಕಾಗಿ ತಾಲೀಮು ನಡೆಸುತ್ತಿದ್ದಾಗ ಪೋಲೆಂಡ್ ವಾಯುಪಡೆಯ ಎಫ್–16 ಯುದ್ಧವಿಮಾನ ಪತನಗೊಂಡು ಪೈಲಟ್ ಸಾವಿಗೀಡಾಗಿದ್ದರು
- **2025 ಮಾರ್ಚ್ 22:** ದಕ್ಷಿಣ ಆಫ್ರಿಕಾದ ಸಲ್ಡಾನದಲ್ಲಿ ನಡೆದ ವೆಸ್ಟ್‌ಕೋಸ್ಟ್ ಏರ್ ಶೋನಲ್ಲಿ ಎಂಬಿ–326 ವಿಮಾನ ಪತನಗೊಂಡು ಪೈಲಟ್ ಮರಣ ಹೊಂದಿದ್ದರು
- **2024 ಜೂನ್ 2:** ಪೋರ್ಚುಗಲ್‌ನ ಬೇಜಾದಲ್ಲಿ ನಡೆದ ಏರ್‌ಶೋನಲ್ಲಿ ಸಾಹಸ ಪ್ರದರ್ಶನ ನೀಡುತ್ತಿದ್ದಾಗ ಎರಡು ಯಾಕೊವ್ಲೆವ್ ಯಾಕ್–52 ವಿಮಾನಗಳ ನಡುವೆ ಡಿಕ್ಕಿ ಸಂಭವಿಸಿ ಒಬ್ಬ ಪೈಲಟ್ ಮೃತಪಟ್ಟಿದ್ದರು
- **2023 ಆಗಸ್ಟ್ 13:** ಮಿಷಿಗನ್‌ನ ಇಪ್ಸಿಲಾಂಟಿಯಲ್ಲಿ ನಡೆದ ಏರ್‌ಶೋನಲ್ಲಿ ಮಿಗ್– 23ಯುಬಿ ಯುದ್ಧ ವಿಮಾನ ಅಪಘಾತಕ್ಕೀಡಾಗಿತ್ತು. ಅದೃಷ್ಟವಶಾತ್ ಇಬ್ಬರೂ ಪೈಲಟ್‌ಗಳು ಸುರಕ್ಷಿತವಾಗಿ ಭೂಮಿಗೆ ಇಳಿದಿದ್ದರು
- **2022, ನವೆಂಬರ್ 12:** ಡಲ್ಲಾಸ್ ಏರ್‌ಶೋ ನಡೆಯುತ್ತಿದ್ದ ವೇಳೆ ಬೋಯಿಂಗ್ ಬಿ–17ಜಿ ಮತ್ತು ಬೆಲ್ ಪಿ–63 ಕಿಂಗ್‌ಕೋಬ್ರಾ ವಿಮಾನಗಳು ಆಗಸದಲ್ಲಿ ಡಿಕ್ಕಿ ಹೊಡೆದು ಆರು ಮಂದಿ ಪ್ರಾಣ ಕಳೆದುಕೊಂಡಿದ್ದರು
- **2011, ಸೆಪ್ಟೆಂಬರ್ 16:** ಅಮೆರಿಕದ ನೆವಡಾ ರಾಜ್ಯದಲ್ಲಿ ನಡೆದ ರೆನೊ ಏರ್ ರೇಸ್‌ನಲ್ಲಿ ಮಾರ್ಪಡಿಸಿದ ರೇಸಿಂಗ್ ವಿಮಾನವೊಂದು ಪೈಲಟ್‌ನ ನಿಯಂತ್ರಣ ತಪ್ಪಿ ಪ್ರೇಕ್ಷಕರ ಗ್ಯಾಲರಿ ಮೇಲೆ ಅಪ್ಪಳಿಸಿದ್ದರಿಂದ 10 ಮಂದಿ ಕೊನೆಯುಸಿರೆಳೆದಿದ್ದರು
- **2009, ಆಗಸ್ಟ್ 30:** ಪೋಲೆಂಡ್‌ನ ರಾದೊಮ್‌ನಲ್ಲಿ ನಡೆದ ಏರ್‌ಶೋನಲ್ಲಿ ಕಸರತ್ತು ತೋರುತ್ತಿದ್ದ ಬೆಲಾರಸ್‌ನ ಸುಖೋಯ್–27 ಯುದ್ಧವಿಮಾನ ಅಪಘಾತಕ್ಕೀಡಾಗಿ ಇಬ್ಬರು ಪೈಲಟ್‌ಗಳು ಅಸು ನೀಗಿದ್ದರು
- **2002, ಜುಲೈ 27:** ಉಕ್ರೇನ್‌ನ ಲಿವ್ ಸಮೀಪ ನಡೆದ ಏರ್‌ಶೋದಲ್ಲಿ ಉಕ್ರೇನ್ ವಾಯುಪಡೆಯ ಸುಖೋಯ್ ಎಸ್‌ಯು–27 ವಿಮಾನವು ಕೆಳಮಟ್ಟದಲ್ಲಿ ಸಾಹಸ ಪ್ರದರ್ಶನ ನೀಡುತ್ತಿದ್ದಾಗ ಪತನವಾಗಿತ್ತು. ವಿಮಾನವು ವಾಯುನೆಲೆಯಲ್ಲಿ ನಿಲ್ಲಿಸಿದ್ದ ವಿಮಾನದ ಮೇಲೆ ಅಪ್ಪಳಿಸಿದ್ದರಿಂದ ಭಾರಿ ಸ್ಫೋಟ ಸಂಭವಿಸಿ 28 ಮಕ್ಕಳು ಸೇರಿ 77 ಮಂದಿ ದಾರುಣವಾಗಿ ಮೃತಪಟ್ಟಿದ್ದರು
- **1999:** ಪ್ಯಾರಿಸ್ ಏರ್‌ಶೋನಲ್ಲಿ ಸಾಹಸ ನಡೆಸುತ್ತಿದ್ದಾಗ ರಷ್ಯಾದ ಸುಖೋಯ್ ಎಸ್‌ಯು–30 ವಿಮಾನ ಪತನಗೊಂಡಿತ್ತು. ಪೈಲಟ್ ಅಪಾಯದಿಂದ ಪಾರಾಗಿದ್ದರು
- **1989:** ಪ್ಯಾರಿಸ್ ವಾಯು ಪ್ರದರ್ಶನದಲ್ಲಿ ಆಗಿನ ಸೋವಿಯತ್ ರಷ್ಯಾ ನಿರ್ಮಿತ ಮಿಗ್–29 ಅಪಘಾತವಾಗಿತ್ತು. ಆ ಸಂದರ್ಭದಲ್ಲೂ ಪೈಲಟ್ ಬದುಕುಳಿದಿದ್ದರು
- **1989 ಅಕ್ಟೋಬರ್ 8:** ಭಾರತೀಯ ವಾಯುಪಡೆ ದಿನದ ಅಂಗವಾಗಿ ನವದೆಹಲಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆಗಸದಲ್ಲಿ ಕಸರತ್ತು ನಡೆಸುತ್ತಿದ್ದ ಮಿರಾಜ್ 2000 ವಿಮಾನ ಪತನಗೊಂಡು ವಿಂಗ್ ಕಮಾಂಡರ್ ರಮೇಶ್ ಭಕ್ಷಿ ಹಾಗೂ ಒಬ್ಬ ಪ್ರೇಕ್ಷಕ ಪ್ರಾಣಕಳೆದುಕೊಂಡಿದ್ದರು
- **1988ರ ಆಗಸ್ಟ್ 28:** ಪಶ್ಚಿಮ ಜರ್ಮನಿಯಲ್ಲಿರುವ ಅಮೆರಿಕದ ರ್‍ಯಾಮ್‌ಸ್ಟೀನ್ ವಾಯುನೆಲೆಯಲ್ಲಿ ನಡೆದ ಪ್ರದರ್ಶನದ ವೇಳೆ ಇಟಲಿ ವಾಯುಪಡೆಯ ವಿಮಾನಗಳು ಆಗಸದಲ್ಲಿ ಡಿಕ್ಕಿ ಹೊಡೆದು ರನ್‌ವೇಗೆ ಪತನಗೊಂಡಿದ್ದರಿಂದ ಭಾರಿ ಪ್ರಮಾಣದಲ್ಲಿ ಬೆಂಕಿ ಆವರಿಸಿ ಮೂವರು ಪೈಲಟ್‌ಗಳು ಮತ್ತು 67 ಪ್ರೇಕ್ಷಕರು ಕೊನೆಯುಸಿರೆಳೆದಿದ್ದರು
- **1973:** ಪ್ಯಾರಿಸ್ ಏರ್‌ಶೋನಲ್ಲಿ ನಡೆದ ಪ್ರಾಯೋಗಿಕ ಹಾರಾಟದ ಮಧ್ಯೆ ಟ್ಯುಪೊಲೆವ್ ಟು–144 ಸೂಪರ್‌ಸಾನಿಕ್ ವಿಮಾನವು ಅಪಘಾತಕ್ಕೀಡಾಗಿ 14 ಜನರು ಮೃತಪಟ್ಟಿದ್ದರು
- **1972, ಸೆಪ್ಟೆಂಬರ್ 24:** ಕ್ಯಾಲಿಫೋರ್ನಿಯಾದ ಸ್ಯಾಕ್ರಮೆಂಟೊದಲ್ಲಿ ನಡೆದ ಗೋಲ್ಡನ್ ವೆಸ್ಟ್ ಸ್ಪೋರ್ಟ್ ವಾಯು ಪ್ರದರ್ಶನದ ವೇಳೆ ಕೆನಡಾಏರ್‌ನ ಎಂಕೆ.5 ವಿಮಾನವು ಟೇಕ್ ಆಫ್ ಆಗುವಾಗ ರನ್‌ವೇ ತುದಿಯಲ್ಲಿ ಪತನಗೊಂಡು ಸಮೀಪದಲ್ಲಿದ್ದ ಐಸ್‌ಕ್ರೀಂ ಪಾರ್ಲರ್‌ಗೆ ಅಪ್ಪಳಿಸಿದ್ದರಿಂದ 22 ಮಂದಿ ಮೃತಪಟ್ಟಿದ್ದರು



ಆಧಾರ: ಪಿಟಿಐ, ರಾಯಿಟರ್ಸ್, ಎಚ್‌ಎಎಲ್ ವೆಬ್‌ಸೈಟ್, ಮಾಧ್ಯಮ ವರದಿಗಳು

### ವಿಳಂಬಿತ ಯೋಜನೆ

ಸ್ವದೇಶಿ ನಿರ್ಮಿತ ಯುದ್ಧ ವಿಮಾನ ಹೊಂದುವ ಭಾರತದ ಬಹುದೊಡ್ಡ ಕನಸನ್ನು ನನಸು ಮಾಡಿರುವುದು ತೇಜಸ್. ಈ ವಿಮಾನಕ್ಕೆ ನಾಲ್ಕು ದಶಕಗಳ ಇತಿಹಾಸವೇ ಇದೆ. ಇದು ತುಂಬಾ ವಿಳಂಬವಾದ ಯೋಜನೆ. ಮಿಗ್ 21 ವಿಮಾನಗಳ ಜಾಗ ತುಂಬುವುದಕ್ಕಾಗಿ ಭಾರತವು 1980ರ ದಶಕದಲ್ಲೇ ತೇಜಸ್ ವಿಮಾನ ಅಭಿವೃದ್ಧಿ ಕಾರ್ಯಕ್ರಮ ಆರಂಭಿಸಿತ್ತು. 2001ರಲ್ಲಿ ವಿಮಾನ ತಂತ್ರಜ್ಞಾನದ ಮೊದಲ ಪರೀಕ್ಷೆ ನಡೆದಿತ್ತು. 2011ರಲ್ಲಿ ತೇಜಸ್ ಮೊದಲ ಪರೀಕ್ಷಾರ್ಥ ಹಾರಾಟ ನಡೆಸಿತ್ತು. 2016ರಲ್ಲಿ ಐಎಎಫ್ ಸೇರ್ಪಡೆಗೊಂಡಿತ್ತು.

ಸದ್ಯ, ಭಾರತದ ವಾಯುಪಡೆಯು ತೇಜಸ್ (ಮಾರ್ಕ್–1) ಯುದ್ಧವಿಮಾನಗಳ ಎರಡು ಸ್ಕ್ವಾಡ್ರನ್‌ಗಳನ್ನು (38 ವಿಮಾನಗಳು) ಹೊಂದಿದೆ. ಆದರೆ, ಈವರೆಗೂ ಇದನ್ನು ಸೇನಾ ಕಾರ್ಯಾಚರಣೆಯಲ್ಲಿ ಬಳಸಲಾಗಿಲ್ಲ. ರಕ್ಷಣಾ ಇಲಾಖೆಯು 2021ರಲ್ಲಿ ₹46,898 ಕೋಟಿ ವೆಚ್ಚದಲ್ಲಿ 83 ಅತ್ಯಾಧುನಿಕ ತೇಜಸ್ ಯುದ್ಧವಿಮಾನ (ಎಂಕೆ1ಎ) ಮತ್ತು 2025ರಲ್ಲಿ ₹66,500 ಕೋಟಿ ವೆಚ್ಚದಲ್ಲಿ 97 ಯುದ್ಧವಿಮಾನಗಳ ಖರೀದಿಗೆ ಎಚ್‌ಎಎಲ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಆದರೆ, ಅಮೆರಿಕದ ಜಿಇ ಏರೋಸ್ಪೇಸ್‌ನಿಂದ ಎಂಜಿನ್ ಪೂರೈಕೆ ವಿಳಂಬವಾಗಿರುವುದರಿಂದ ನಿಗದಿತ ಸಮಯದಲ್ಲಿ ವಿಮಾನಗಳನ್ನು ಹಸ್ತಾಂತರ ಮಾಡಲು ಎಚ್‌ಎಎಲ್‌ಗೆ ಆಗುತ್ತಿಲ್ಲ.

## ರಾಷ್ಟ್ರೀಯ



ಹಿಮಾಚಲ ಪ್ರದೇಶ ಕಾಂಗ್ರಾ ಜಿಲ್ಲೆಯಲ್ಲಿರುವ ನಮಾಂಶ್ ಸ್ಯಾಲ್ ಅವರ ಗ್ರಾಮಕ್ಕೆ ಭಾನುವಾರ ಪಾರ್ಥಿವ ಶರೀರ ತಂದಾಗ ಭಾರಿ ಸಂಖ್ಯೆಯಲ್ಲಿ ಗ್ರಾಮಸ್ಥರು ಸೇರಿದ್ದರು

### ನಮಾಂಶ್ ಅಂತ್ಯಕ್ರಿಯೆ: ಪತ್ನಿ, ಮಗಳಿಂದ ಅಂತಿಮ ಸೆಲ್ಯೂಟ್

ಶಿಮ್ಲಾ/ಕೊಯಮತ್ತೂರು (ಪಿಟಿಐ): ದುಬೈ ಏರ್ ಶೋ ವೇಳೆ ತೇಜಸ್ ಲಘು ಯುದ್ಧ ವಿಮಾನ ಪತನಗೊಂಡು ಸಂಭವಿಸಿದ ದುರ್ಘಟನೆಯಲ್ಲಿ ಹುತಾತ್ಮರಾದ ವಿಂಗ್ ಕಮಾಂಡರ್ ನಮಾಂಶ್ ಸ್ಯಾಲ್ ಅವರ ಅಂತ್ಯಕ್ರಿಯೆ ಸೇನಾ ಗೌರವದೊಂದಿಗೆ ಭಾನುವಾರ ನೆರವೇರಿತು.

ಹಿಮಾಚಲ ಪ್ರದೇಶದ ಗಗ್ಗಲ್ ವಿಮಾನನಿಲ್ದಾಣಕ್ಕೆ ತರಲಾದ ಸ್ಯಾಲ್ ಅವರ ಪಾರ್ಥಿವ ಶರೀರವನ್ನು ಸೇನೆಯ ವಾಹನದಲ್ಲಿ ಅವರ ಗ್ರಾಮ ಪಟಿಯಾಲ್ಕರ್‌ಗೆ ತೆಗೆದುಕೊಂಡು ಹೋಗಲಾಯಿತು. ಹೂವುಗಳಿಂದ ಅಲಂಕೃತಗೊಳಿಸಲಾಗಿದ್ದ ವಾಹನವು, ಸಶಸ್ತ್ರ ಪಡೆಗಳ ಹಾಗೂ ಜಿಲ್ಲೆಯ ಜನರು ಬೆಂಗಾವಲು ವಾಹನಗಳೊಂದಿಗೆ ಗ್ರಾಮ ತಲುಪಿತು.

ವಾಯುಪಡೆ ಅಧಿಕಾರಿಯೂ ಆಗಿರುವ ಸ್ಯಾಲ್ ಅವರ ಪತ್ನಿ ಅಫ್ಶಾನ್ ಹಾಗೂ ಆರು ವರ್ಷದ ಮಗಳು ಗದ್ಗದಿತರಾಗಿದ್ದರು. ಯಾವ ಸಾಂತ್ವನದ ಮಾತುಗಳೂ ಅವರಿಗೆ ಸಮಾಧಾನ ತರುವಂತಿರಲಿಲ್ಲ. ಸ್ಯಾಲ್ ಅವರ ಸೋದರ ಸಂಬಂಧಿ ಚಿತೆಗೆ ಅಗ್ನಿಸ್ಪರ್ಶ ಮಾಡಿದಾಗ, ತಾಯಿಯನ್ನು ಬಿಗಿದಪ್ಪಿದ್ದ ಮಗಳನ್ನು ಕಂಡು ಎಲ್ಲರ ಮನಸ್ಸು ಭಾರವಾಗಿತ್ತು. ಇಬ್ಬರೂ, ಸ್ಯಾಲ್ ಅವರಿಗೆ ಅಂತಿಮ ಸೆಲ್ಯೂಟ್ ಸಲ್ಲಿಸಿದರು.



ಪತಿಗೆ ಪತ್ನಿಯ ಕೊನೆಯ ಸೆಲ್ಯೂಟ್

ಸ್ಯಾಲ್ ಅವರನ್ನು ಗ್ರಾಮದ ಜನರು ಪ್ರೀತಿಯಿಂದ 'ನಮ್ಮು' ಎಂದೇ ಕರೆಯುತ್ತಿದ್ದರು. ಅವರ ಪಾರ್ಥಿವ ಶರೀರ ಪಂಚಭೂತಗಳಲ್ಲಿ ಲೀನವಾಗುತ್ತಿದ್ದಂತೆಯೇ, 'ಜಬ್ ತಕ್ ಸೂರಜ್ ಚಾಂದ್ ರಹೇಗಾ, ನಮ್ಮು ತೇರಾ ನಾಮ್ ರಹೇಗಾ' ಎಂಬ ಘೋಷಣೆಗಳು ಮುಗಿಲು ಮುಟ್ಟಿದ್ದವು.

ಇದಕ್ಕೂ ಮುನ್ನ, ಪಾರ್ಥಿವ ಶರೀರವನ್ನು ತಮಿಳುನಾಡಿನ ಸುಲೂರು ವಾಯುನೆಲೆಗೆ ಭಾನುವಾರ ತರಲಾಯಿತು.

### ಹಸೀನಾ ಹಸ್ತಾಂತರಕ್ಕೆ ಬಾಂಗ್ಲಾ ಪತ್ರ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರನ್ನು ಹಸ್ತಾಂತರಿಸುವಂತೆ ಕೋರಿ ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಭಾರತಕ್ಕೆ ಅಧಿಕೃತ ಪತ್ರ ಬರೆದಿದೆ ಎಂದು ಸರ್ಕಾರದ ಸಲಹೆಗಾರರೊಬ್ಬರು ಭಾನುವಾರ ತಿಳಿಸಿದ್ದಾರೆ.

2024ರಲ್ಲಿ ಬಾಂಗ್ಲಾದೇಶದಲ್ಲಿ ನಡೆದ ದಂಗೆಯ ಸಂದರ್ಭದಲ್ಲಿ 'ಸಾಮೂಹಿಕ ಮಾರಣಹೋಮದ ಅಪರಾಧ'ಕ್ಕಾಗಿ ಆಗಿನ ಪ್ರಧಾನಿ ಹಸೀನಾ ಅವರಿಗೆ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು (ಐಸಿಟಿ) ಮರಣದಂಡನೆ ವಿಧಿಸಿದೆ.

ಕಳೆದ ವರ್ಷದ ಆಗಸ್ಟ್ 5ರಂದು ಸರ್ಕಾರ ಪತನವಾದ ನಂತರ ದೇಶ ತೊರೆದಿರುವ ಹಸೀನಾ ಅವರು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ.

'ಹಸೀನಾ ಅವರ ಹಸ್ತಾಂತರ ಕೋರಿ ನವದೆಹಲಿಯಲ್ಲಿರುವ ಬಾಂಗ್ಲಾದೇಶ ಹೈಕಮಿಷನ್ ಮೂಲಕ ಅಧಿಕೃತ ರಾಜತಾಂತ್ರಿಕ ಪತ್ರ ಕಳುಹಿಸಲಾಗಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಲಹೆಗಾರ ಮೊಹಮ್ಮದ್ ತೌಹೀದ್ ಹೊಸೇನ್ ಹೇಳಿದ್ದಾರೆ.


### 'ಬುಲ್ಡೋಜರ್ ಆಡಳಿತದತ್ತ ಬಿಹಾರ'

ಹಾಜಿಪುರ (ಬಿಹಾರ) (ಪಿಟಿಐ): 'ಬಿಹಾರದಲ್ಲಿ ಗೃಹ ಇಲಾಖೆಯನ್ನು ನಿತೀಶ್ ಕುಮಾರ್ ಅವರಿಂದ ಬಿಜೆಪಿ ಕಸಿದುಕೊಂಡಿದೆ. ಸಾಮ್ರಾಟ್ ಚೌಧರಿ ಗೃಹ ಸಚಿವರಾದ ಬಳಿಕ ಬಿಹಾರ ಬುಲ್ಡೋಜರ್ ಆಡಳಿತದತ್ತ ಸಾಗುತ್ತಿದೆ' ಎಂದು ಸಿಪಿಐ (ಎಂಎಲ್) ಲಿಬರೇಶನ್ ಪ್ರಧಾನ ಕಾರ್ಯದರ್ಶಿ ದೀಪಾಂಕರ್ ಭಟ್ಟಾಚಾರ್ಯ ಆರೋಪಿಸಿದರು.

ಸುಪೌಲ್‌ನಲ್ಲಿ ಚುನಾವಣಾ ಪ್ರಚಾರದ ವೇಳೆ ನಿಧನರಾದ ಪಕ್ಷದ ನಾಯಕ ವಿಶ್ವೇಶ್ವರ ಪ್ರಸಾದ್ ಯಾದವ್ ಅವರ ಸ್ಮರಣಾರ್ಥ ಹಾಜಿಪುರದಲ್ಲಿ ಭಾನುವಾರ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, 'ಇನ್ನು ಮುಂದೆ ಉತ್ತರ ಪ್ರದೇಶದ ಮಾದರಿಯಲ್ಲಿ ಬುಲ್ಡೋಜರ್ ಆಡಳಿತ ಬರಲಿದೆ. ಕಾನೂನು ಇರುವುದಿಲ್ಲ. ಬುಲ್ಡೋಜರ್ ಆಡಳಿತದ ವಿರುದ್ಧ ನಮ್ಮ ಪಕ್ಷ ದೃಢವಾಗಿ ಹೋರಾಡುತ್ತದೆ' ಎಂದು ಹೇಳಿದರು.

## ನುಡಿ ಬೆಳಗು

### ಸರಳ ನಡೆ ಜೀವನ ಮಾದರಿಯಾದಾಗ



ದಾದಾಪೀರ್ ನವಿಲೇಹಾಳ್


ಮಹಾತ್ಮ ಗಾಂಧೀಜಿಯವರು ಸತ್ಯ, ಪ್ರಾಮಾಣಿಕತೆ, ಅಹಿಂಸೆಯನ್ನು ಬೋಧಿಸುವ ಬದಲು ಬದುಕಿದರು. ಅವರು ಅನುಸರಿಸಿದ ಸರಳ ಜೀವನ ಅವೆಲ್ಲವನ್ನೂ ಒಟ್ಟಿಗೇ ಸಾಧಿಸಿದಂತಿತ್ತು. ಇಂದಿನ ವೇಗದ ಬದುಕಿಗೆ ಸರಳತೆ ಒಂದು ಮೌಲ್ಯವಾಗಿ ಉಳಿದಂತಿಲ್ಲ. ಬದಲಿಗೆ ಸರಕು ನಿಷ್ಠ ಭೋಗದ ಲಾಲಸೆಯೇ ಮಹತ್ವದ್ದಾಗಿದೆ. ಇದರ ನಡುವೆಯೂ ಅಲ್ಲೊಂದು ಇಲ್ಲೊಂದು ಸರಳತೆಯ ವಿರಳ ನಿದರ್ಶನಗಳು ಸಿಗುತ್ತವೆ. ಅವು ಗಾಂಧೀಜಿ ಬದುಕಿನ ಸರಳತೆಯನ್ನು ಸೀಮಿತವಾಗಿ ಅನುಸರಿಸಿದ ಉದಾಹರಣೆಗಳಾದರೂ ಸಮಕಾಲೀನ ಸಮಾಜದ ಬೌದ್ಧಿಕ ದಿವಾಳಿಯ ನಡುವೆ ಅಪರೂಪದ ನಡವಳಿಕೆಗಳಾಗಿ ಕಂಡುಬರುತ್ತವೆ.

ರಾಜ್ಯೋತ್ಸವದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳನ್ನಾಗಿ ಸಂಸ್ಕೃತಿ ಚಿಂತಕರೊಬ್ಬರನ್ನು ಆಹ್ವಾನಿಸಲಾಗಿತ್ತು. ಅವರು ಬೆಂಗಳೂರಿನಿಂದ 250 ಕಿ.ಮೀ.ದೂರದ ಪುಟ್ಟ ಪಟ್ಟಣಕ್ಕೆ ಕಾರಿನಲ್ಲಿ ಬಂದರು. ರಾಜ್ಯೋತ್ಸವವನ್ನು ಆರಾಧನೆ ಅಥವಾ ಹುಸಿ ಅಭಿಮಾನದ ರಂಜನೆಯ ಆಚರಣೆಯನ್ನಾಗಿ ಸಂಭ್ರಮಿಸುವುದರ ಬದಲು ಅರಿವಿನ ಆಚರಣೆಯಾಗಿ ರೂಪಿಸಬೇಕಾದ ಔಚಿತ್ಯದ ಕುರಿತು ಮಾತನಾಡಿದರು. ಕಾರ್ಯಕ್ರಮ ಮುಗಿಸಿ ಹೊರಟ ಅವರಿಗೆ ಆಯೋಜಕರು ಬೆಂಗಳೂರಿನಿಂದ ಬಂದು ಹೋಗುವ ಖರ್ಚಿಗೆ ಅಂತ ಹಣವಿದ್ದ ಕವರನ್ನು ಕೊಟ್ಟರು. ಅವರು ಕವರಿನಿಂದ ನೋಟುಗಳನ್ನು ಹೊರತೆಗೆದು ಎಣಿಸಿ ಒಂದಷ್ಟನ್ನು ವಾಪಸ್ ಕೊಟ್ಟು 'ಕಾರಿನ ಬಾಡಿಗೆಗೆ ಎಷ್ಟು ಬೇಕೋ ಅಷ್ಟು ಸಾಕು' ಅಂತ ಹೇಳಿ ಹೊರಟರು. ಆಯೋಜಕರ ಮುಖದಲ್ಲಿ ಅಚ್ಚರಿ, ಅಭಿಮಾನ ತುಂಬಿ ತುಳುಕುತ್ತಿತ್ತು. ಯಾಕೆಂದರೆ ಈ ಹಿಂದೆ ಇಂತಹದೇ ಕಾರ್ಯಕ್ರಮಕ್ಕೆ ಬಂದಿದ್ದ ಬರೆಬರೆದು ಬೆರಳು ಸವೆದವರೊಬ್ಬರನ್ನು ನಿಭಾಯಿಸಲು ಎರಡು ರಾತ್ರಿ ಹೆಣಗಾಡಿದ್ದರು. ಮತ್ತೊಂದು ಸಲ ಸಂಸ್ಕೃತಿ ಶಿಬಿರದ ಉದ್ಘಾಟನೆಗೆ ಬಂದ ಅವರಿಗೆ ಆಯೋಜಕರು ಚಹಾ ಬಿಸ್ಕತ್ತಿನ ವ್ಯವಸ್ಥೆ ಮಾಡಿದ್ದರು. ಉದ್ಘಾಟಕರಿಗೆ ಗಾಜಿನ ಲೋಟದಲ್ಲಿ, ಉಳಿದವರಿಗೆ ಪೇಪರ್ ಲೋಟದಲ್ಲಿ ಟೀ ಕೊಟ್ಟರು. ತಕ್ಷಣ ಅವರು ಆಯೋಜಕರನ್ನು ಕರೆದು ಎಲ್ಲರಿಗೂ ಕೊಟ್ಟಂತೆ ತಮಗೂ ಪೇಪರ್ ಲೋಟದಲ್ಲೇ ಚಹಾ ಕೊಡುವಂತೆ ಸೂಚಿಸಿ ಹಾಗೇ ನಡೆದುಕೊಂಡರು.

ಮೇಲಿನ ಎರಡೂ ಸಂದರ್ಭಗಳಲ್ಲಿ ಅವರು ತೋರಿಸಿದ ಸಂಕೋಚ ಭಾವ ಪ್ರಾಮಾಣಿಕವಾಗಿತ್ತು. ಆಡಂಬರ ಮತ್ತು ಅಪ್ರಾಮಾಣಿಕತೆ ಯಾವಾಗಲೂ ಜೊತೆಯಲ್ಲಿರುತ್ತವೆ. ಅದರಲ್ಲೂ ಅವು ಸಾರ್ವಜನಿಕ ಪ್ರದರ್ಶನಕ್ಕೆ ಒಳಗಾದಾಗ ಸೂಕ್ಷ್ಮತೆಯನ್ನು ಕಳೆದುಕೊಳ್ಳುತ್ತವೆ. ಹಸಿದವನ ಮುಂದೆ ಬಾಯಿ ಬಿರಿಯುವಂತೆ ತಿನ್ನುವುದು, ತಬ್ಬಲಿಯ ಎದುರು ತನ್ನ ಮಕ್ಕಳನ್ನು ಮುದ್ದಾಡುವುದು ಕ್ರೌರ್ಯಕ್ಕೆ ಸಮಾನ.

ಹಾಗೆಯೇ ಅಭಿಮಾನದಿಂದ ಆಹ್ವಾನಿಸುವವರ ಸುಲಿಗೆ ಮಾಡುವುದು ಅತಿಥಿ ಎಂದು ಬಂದವರಿಗೆ ಭೂಷಣವಲ್ಲ. ಸೃಜನಶೀಲ ಕಲಾವಿದ-ಬರಹಗಾರರಿಗೆ ಸಜ್ಜನಿಕೆಯ ಘನತೆ ಸಿಗುವುದೇ ಸರಳ ನಡೆನುಡಿಗಳ ವ್ಯಕ್ತಿತ್ವದಿಂದ. ಆತ್ಮಗೌರವವನ್ನು ಬಿಟ್ಟು ಉಳಿಸಿಕೊಳ್ಳಬೇಕಾದ ಯಾವ ಕಲೆಯೂ ಜಗತ್ತಿನಲ್ಲಿ ಇಲ್ಲ ಎಂದು ತಿಳಿದವರು ಭಾಷೆ ಮತ್ತು ಸಂಸ್ಕೃತಿಗೆ ಗೌರವ ತರುವ ರೀತಿಯಲ್ಲಿ ವರ್ತಿಸುತ್ತಾರೆ. ಸರಳ ನಡೆಯನ್ನು ಒಂದು ಜೀವನಮಾದರಿಯ ಹಾಗೆ ಅನುಸರಿಸುವುದು ಉಪದೇಶಿಸುವುದಕ್ಕಿಂತ ಕಷ್ಟ ನಿಜ, ಆದರೆ ಅಸಾಧ್ಯವಲ್ಲ. ಗಾಂಧೀಜಿಯವರ ಸರಳ ಜೀವನದ ನಿಲುಮೆಗಳು ಅವರ ಜೀವಿತಕಾಲ ಮತ್ತು ನಿಧನಾನಂತರದಲ್ಲಿ ಸಾವಿರಾರು ಅಸಂಬದ್ಧ ಕ್ಷುದ್ರ ವಿರೋಧಗಳನ್ನು ಅರಗಿಸಿಕೊಂಡೂ ಬದುಕಿವೆ. 'ಜೊತೆಗಿರದ ಜೀವ ಎಂದಿಗೂ ಜೀವಂತ' ಎಂಬಂತೆ ಸಣ್ಣ ಪುಟ್ಟ ವಿಷಯದಲ್ಲೂ ತೋರುವ ಸರಳ ನಡವಳಿಕೆ ನಮ್ಮ ನಂತರವೂ ನಮ್ಮನ್ನು ಜೀವಂತವಾಗಿಡಬಲ್ಲುದು.

## ಗುಂಡಣ್ಣ




## ಪದಬಂಧ 6233


ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಹನ್ನೆರಡು ಅಂಗುಲದ ಉದ್ದಳತೆ (2)
2.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
5 ಪದರದಲ್ಲೇ ಮೋಕ್ಷವಿದೆ (2)
6.ಹೂವಿನಲ್ಲಿನ ಸಿಹಿರಸ (4)
8.ಸತಿಯಿರುವ ಅತಿಥಿಗೃಹ! (3)
10.ನಾಟ ಹಿಡಿದು ತೋರಿಸಿದ ರೂಪಕ (3)
12.ಕಟ ಕಟ ಶಬ್ದ ಮಾಡುವ ಬಂಡಿ (3)
13.ಕೆಟ್ಟ ಉಪಾಯವಿದು (3)
15.ಕದವನ್ನು ಭದ್ರಪಡಿಸಲು ಉಪಯೋಗಿಸುವ ಕಬ್ಬಿಣದ ಸಾಧನ (3)
18.ಸೂರ್ಯನ ಇನ್ನೊಂದು ಹೆಸರು (4)
20.ಆ ಮೇಲೆ ಕಾಣಿಸಿದ ಕೂರ್ಮ! (2)
21.ಹಸೆ ಹಾಕಿದ ಜಾಗದಲ್ಲಿ ಬೆಳೆದಿರುವ ಪಾಚಿ (3)
22.ಈತ ಬುದ್ಧಿವಂತ (2)

**ಮೇಲಿಂದ ಕೆಳಕ್ಕೆ**

1.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
2.ಕಮ್ಮಾರನ ಕೈ! (2)
3.ಸುಗಮವಾಗಿ ಕಿತ್ತಿರುವ ಹೂವು (2)
4.ಧಣಿಯ ನೋಡಲು ನೆರೆದಿರುವ ಗುಂಪು (3)
5.ಪತಿಯೊಡನಿರುವ ಕಾಲಾಳು! (3)
7.ಕರದಲ್ಲಿ ಹಿಡಿದಿರುವ ಚಿಪ್ಪು (3)
9.ಸರದ ಜೊತೆಯಿರಿಸಿದ ಸಾಮಾನು (3)
10.ನಾಟಕದಲ್ಲಿರುವ ಮರದ ದಿಮ್ಮಿ (2)
11.ಕಡ ಪಡೆದು ನೋಡಿದ ಸಮುದ್ರ (3)
12.ಶಕ್ತನು ತೋರಿಸಿದ ಬಲ! (2)
14.ಈತ ಹರೆಯದವನು (3)
15.ನೀರು ಉಕ್ಕುವ ಸ್ಥಳ (3)
16.ಕಣದಲ್ಲಿ ಸಾಧಿಸಿದ ಹತೋಟಿ! (4)
17.ಮಂದಿ ಪ್ರವೇಶಿಸಿರುವ ಗುಡಿ (3)
19.ತಿರುವು ಮುರುವಾದ ಮಾಲೆ (2)
20.ದುಃಖಕ್ಕೆ ಮೂಲವಾದ ಬಯಕೆ! (2)



### 6232ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಸಿಂಹಾಸನ 3.ಬಾಕಿದಾರ 5.ಮಸುಕು 7.ರಜಾ 9.ತಾಣ 10.ದಮನ 11.ಕಂಠೆ 12.ತ್ರಪು 14.ಕವನ 16.ಕಡುಜಾಣ 17.ತರಕಾರಿ

**ಮೇಲಿಂದ ಕೆಳಕ್ಕೆ:** 1.ಸಿಂಗಾರ 2.ನಮ 3.ಬಾಕು 4.ರಪಣ 6.ಸುವರ್ಣಮಹೋತ್ಸವ 8.ಜಾಗರೂಕತೆ 9.ತಾರಕಮಂತ್ರ 11.ಕಂಠಕ 13.ಪುಥಾರಿ 14.ಕಣ 15.ನತ

## ಸುಡೊಕು 6617

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| | 5 | | | 6 | 8 | 1 | | 3 |
| 9 | | 6 | | | | | 7 | |
| | 8 | | 7 | | | 2 | | 6 |
| 6 | | 1 | | 5 | | 7 | | 9 |
| | | | 8 | 9 | 6 | | | |
| 8 | | | | 7 | | 5 | | 2 |
| 3 | | 9 | | 1 | | | 2 | |
| | | | 6 | | 7 | 9 | | 4 |
| 7 | | 8 | | 2 | | | 1 | |

### 6616 ಸುಡೊಕು

| | | | | | | | | |
|---|---|---|---|---|---|---|---|---|
| 1 | 5 | 9 | 3 | 2 | 7 | 6 | 8 | 4 |
| 4 | 6 | 7 | 1 | 8 | 9 | 3 | 5 | 2 |
| 3 | 8 | 2 | 6 | 4 | 5 | 9 | 1 | 7 |
| 2 | 9 | 3 | 5 | 1 | 4 | 7 | 6 | 8 |
| 6 | 7 | 4 | 9 | 3 | 8 | 5 | 2 | 1 |
| 5 | 1 | 8 | 7 | 6 | 2 | 4 | 9 | 3 |
| 8 | 2 | 5 | 4 | 9 | 3 | 1 | 7 | 6 |
| 7 | 3 | 1 | 2 | 5 | 6 | 8 | 4 | 9 |
| 9 | 4 | 6 | 8 | 7 | 1 | 2 | 3 | 5 |

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**24 ನವೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ:** ಮಾರ್ಗಶಿರ ಶುಕ್ಲ ಚತುರ್ಥಿ ಗಂ. 21-23 ನಕ್ಷತ್ರ: ಪೂರ್ವಾಷಾಢ ಗಂ. 21-54 ಯೋಗ: ಶೂಲ ಗಂ. 12-37 ಕರಣ: ವಣಿಜ ಗಂ 8.26 ವೃಶ್ಚಿಕ ಮಾಸದ 09 ನೇ ದಿನ. ಮಳೆ ನಕ್ಷತ್ರ : ಅನುರಾಧ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 04-30 - 06-00 ಸೂರ್ಯೋದಯ : 06-38 ಸೂರ್ಯಾಸ್ತ : 05-57. ಮುಸ್ಲಿಂ ದಿನಾಂಕ : 2 ಜುಮಾದುಸ್ಸಾನಿ , ಅದೃಷ್ಟ ಸಂಖ್ಯೆ : 5, 9

**ಮೇಷ:** ರಫ್ತು ವ್ಯಾಪಾರಗಳಲ್ಲಿ ಹೇರಳ ಲಾಭ ಮತ್ತು ತಲೆಬಿಸಿಯ ವಾತಾವರಣಗಳೆರಡೂ ಇರುವುದು. ಮದುವೆಯ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರಲಾಗದೇ ಗೊಂದಲಕ್ಕೆ ಒಳಗಾಗುವಿರಿ.

**ವೃಷಭ:** ಮಾತೃ ವರ್ಗದವರ ಸಹಾಯದಿಂದ ಆರ್ಥಿಕತೆಯಲ್ಲಿನ ಭಯ ನಿವಾರಣೆ. ಕಠಿಣ ಪರಿಶ್ರಮದ ಮೂಲಕ ಮೇಲಧಿಕಾರಿಗಳ ಮನವನ್ನು ಗೆಲ್ಲಲು ಪ್ರಯತ್ನಿಸಿ. ಸಣ್ಣ ಮಗುವಿನ ಆರೋಗ್ಯದ ಮೇಲೆ ಗಮನವಿಡಿ.

**ಮಿಥುನ:** ನಿರಂತರ ಪ್ರಯತ್ನದಿಂದ ಕ್ರೀಡಾಕ್ಷೇತ್ರದಲ್ಲಿನ ಹೆಸರು ಉತ್ತಮ ಸ್ಥಾನ ತಲುಪುತ್ತದೆ. ವೈದ್ಯರು ನೀಡಿದ ಸಲಹೆಯನ್ನು ಚಾಚೂ ತಪ್ಪದೆ ಆಚರಿಸಿ. ವಕೀಲರಿಗೆ ಉತ್ತಮ ಅವಕಾಶ ಸಿಗಲಿದೆ.

**ಕರ್ಕಾಟಕ:** ಕಾದಂಬರಿಪ್ರಿಯರಿಗೆ ಇಷ್ಟವಾಗುವ ಪುಸ್ತಕ ದೊರೆಯುವುದು. ಪ್ರಾಣಾಯಾಮ ಧ್ಯಾನವನ್ನು ನಿರಂತರವಾಗಿ ಮಾಡುವ ಅಭ್ಯಾಸ ಮಾಡುವುದು ಒಳ್ಳೆಯದು. ಬೆಂಕಿಯಿಂದ ಅಪಾಯ ಉಂಟಾಗಬಹುದು.

**ಸಿಂಹ:** ಪಾರಂಪರಿಕವಾಗಿ ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ವಸ್ತುವನ್ನು ಕಳೆಯಬೇಡಿ. ಮಗುವಿನ ಮೊದಲ ಮಾತು ಅಥವಾ ಮಕ್ಕಳ ಅಭಿವೃದ್ಧಿಯನ್ನು ಕಂಡು ಪುಳಕಿತಗೊಳ್ಳುವಿರಿ. ರಾಜೇಶ್ವರಿಯನ್ನು ಆರಾಧಿಸಿ.

**ಕನ್ಯಾ:** ರಕ್ತ ಅಥವಾ ರಕ್ತನಾಳದ ಕಾಯಿಲೆಯಿಂದ ಬಳಲುತ್ತಿರುವವರಿಗೆ ಔಷಧಿಯು ಪ್ರತಿಕ್ರಿಯಿಸಿ ಚೇತರಿಕೆಯ ಹಂತಕ್ಕೆ ಹೋಗುವಿರಿ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನಕ್ಕೇರಲು ಇದು ಸಕಾಲ.

**ತುಲಾ:** ಸಂಗಡಿಗರು ಅಧರ್ಮದ ಮಾರ್ಗದಿಂದ ಹೂಡಿಕೆ ಮಾಡುತ್ತಿದ್ದಾರೇ ಎಂದು ಅನುಭವಕ್ಕೆ ಬರಲಿದೆ. ವ್ಯವಹಾರದಲ್ಲಿ ಕಠಿಣ ಸವಾಲನ್ನು ಯಶಸ್ವಿಯಾಗಿ ಎದುರಿಸುವ ಸಾಮರ್ಥ್ಯವನ್ನು ದೇವತಾರಾಧನೆಯಿಂದ ಹೊಂದುವಿರಿ.

**ವೃಶ್ಚಿಕ:** ಹಣವು ಸಮೃದ್ಧವಾಗಿದೆ ಎಂದು ಮನಸ್ಸಿಗೆ ಬಂದ ಹಾಗೆ ಖರ್ಚು ಮಾಡುವ ಪ್ರವೃತ್ತಿ ಬೇಡ. ಬಹಳ ದಿನಗಳಿಂದ ಬಾಕಿ ಇರುವ ಕಾರ್ಯವನ್ನು ಆರಂಭಿಸುವ ಬಗ್ಗೆ ಯೋಚಿಸಿ. ದಿನಾಂತ್ಯದಲ್ಲಿ ಅಲ್ಪ ನೆಮ್ಮದಿ ಪ್ರಾಪ್ತಿ.

**ಧನು:** ಪರಪೀಡನೆಯನ್ನೇ ತನ್ನ ವೃತ್ತಿ ಎಂದು ತಿಳಿಯುವ ವ್ಯಕ್ತಿಗಳ ಜತೆ ನೀವು ಎಷ್ಟು ಸಂಭಾಷಣೆಯನ್ನು ನಡೆಸಿದರೂ ಪ್ರಯೋಜನವಿಲ್ಲ. ಮಿತ್ರರ ಸಹಕಾರದಿಂದ ಸ್ವಗೃಹ ನಿರ್ಮಾಣಕ್ಕೆ ನೆರವು ಸಿಗಲಿದೆ.

**ಮಕರ:** ಕೆಲಸದಲ್ಲಿ ಗುಣಮಟ್ಟದ ಕೊರತೆಯಿಂದಾಗಿ ಸಮಾಧಾನ ಇಲ್ಲದಂತೆ ಆಗುತ್ತದೆ. ದಿನಚರಿಯ ಬದಲಾವಣೆಗಾಗಿ ಸಣ್ಣ ಪ್ರಮಾಣದ ಪ್ರವಾಸಕ್ಕಾಗಿ ಯೋಚನೆ ನಡೆಸುವಿರಿ. ವಸ್ತ್ರಾಭರಣ ಖರೀದಿಯ ಯೋಗವಿದೆ.

**ಕುಂಭ:** ಮನೆಯಲ್ಲಿ ನಡೆದ ಕಾರ್ಯಕ್ರಮದ ಫಲವಾಗಿ ದೈನಂದಿನ ವೇಳಾಪಟ್ಟಿ ಬದಲಾವಣೆಯಾಗಲಿದೆ. ಶಾಂತಿಯಿಂದ ವರ್ತಿಸಿದಲ್ಲಿ ಸಮಸ್ಯೆಗಳು ಪರಿಹಾರವಾಗುತ್ತವೆ. ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತಿ.

**ಮೀನ:** ನಿರೀಕ್ಷೆಯ ಫಲಿತಾಂಶ ದೊರೆಯಲು ಹರಸಹಾಸ ಪಡಬೇಕಾದ ಸಂದರ್ಭ ಬರುತ್ತದೆ. ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಅವಕಾಶಗಳು ಸಿಗುವುದು. ಸ್ನೇಹಿತನಿಗಾಗಿ ಹಣ ಖರ್ಚು ಮಾಡಲಿದ್ದೀರಿ

ಮುಂದಡಿ ಇರಿಸಿದ ಕೇಂದ್ರ ಹಣಕಾಸು ಸಚಿವಾಲಯ

# ಸರ್ಕಾರಿ ವಿಮಾ ಕಂಪನಿಗಳ ವಿಲೀನ: ಪ್ರಸ್ತಾವ ಮರುಪರಿಶೀಲನೆ



ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಮೂರು ವಿಮಾ ಕಂಪನಿಗಳನ್ನು ವಿಲೀನಗೊಳಿಸಿ, ಒಂದೇ ಕಂಪನಿಯನ್ನಾಗಿ ಮಾಡುವ ಪ್ರಸ್ತಾವವನ್ನು ಮರು ಪರಿಶೀಲಿಸಲು ಕೇಂದ್ರ ಹಣಕಾಸು ಸಚಿವಾಲಯವು ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಓರಿಯಂಟಲ್ ಇನ್ಶೂರೆನ್ಸ್, ನ್ಯಾಷನಲ್ ಇನ್ಶೂರೆನ್ಸ್ ಮತ್ತು ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಈ ಮೂರು ಕಂಪನಿಗಳು. ಈ ಕಂಪನಿಗಳನ್ನು ಆರ್ಥಿಕ ಸಂಕಷ್ಟದಿಂದ ಹೊರತರಲು 2019–20ರಿಂದ 2021–22ರವರೆಗೆ ಕೇಂದ್ರ ಸರ್ಕಾರವು ₹17,450 ಕೋಟಿ ನೀಡಿದೆ.

2018–19ರ ಬಜೆಟ್‌ನಲ್ಲಿ ಅಂದಿನ ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಈ ಮೂರು ಕಂಪನಿಗಳನ್ನು ವಿಲೀನಗೊಳಿಸಿ, ಒಂದೇ ವಿಮಾ ಕಂಪನಿಯಾಗಿ ಮಾಡುವುದಾಗಿ ಹೇಳಿದ್ದರು.

ಆದರೆ, 2020ರ ಜುಲೈನಲ್ಲಿ ಕೇಂದ್ರ ಸರ್ಕಾರ ಈ ವಿಲೀನ ಆಲೋಚನೆ ಕೈಬಿಟ್ಟು, ಈ ಮೂರು ಕಂಪನಿಗಳಿಗೆ ₹12,450 ಕೋಟಿ ನೀಡಲು ಒಪ್ಪಿಗೆ ನೀಡಿತ್ತು.

ಈ ಆರ್ಥಿಕ ನೆರವಿನಿಂದ ಕಂಪನಿಗಳ ಆರ್ಥಿಕ ಸ್ಥಿತಿ ಸುಧಾರಣೆಗೊಂಡಿದೆ. ಈಗ ಅವುಗಳ ದಕ್ಷತೆಯನ್ನು ಸುಧಾರಿಸುವ ಉದ್ದೇಶದಿಂದ ಕೇಂದ್ರ ಹಣಕಾಸು ಸಚಿವಾಲಯವು ವಿಲೀನ ಕುರಿತು ಪ್ರಾಥಮಿಕ ಮೌಲ್ಯಮಾಪನ ನಡೆಸುತ್ತಿದೆ ಎಂದು ಗೊತ್ತಾಗಿದೆ.

ಜೊತೆಗೆ, ಒಂದು ವಿಮಾ ಕಂಪನಿಯನ್ನು ಖಾಸಗೀಕರಣ ಮಾಡುವ ಬಗ್ಗೆಯೂ ಕೇಂದ್ರವು ಆಲೋಚಿಸುತ್ತಿದೆ. ಆದರೆ ಯಾವುದೂ ತೀರ್ಮಾನ ಆಗಿಲ್ಲ ಎಂದು ಗೊತ್ತಾಗಿದೆ.

2021-22ರ ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಎರಡು ಸರ್ಕಾರಿ ಬ್ಯಾಂಕ್ ಮತ್ತು ಒಂದು ವಿಮಾ ಕಂಪನಿಯನ್ನು ಖಾಸಗೀಕರಣ ಮಾಡುವುದಾಗಿ ಹೇಳಿದ್ದರು.

ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಖಾಸಗೀಕರಣಕ್ಕೆ ಒಪ್ಪಿಗೆ ನೀಡುವ ವಿಮಾ ವ್ಯವಹಾರ (ರಾಷ್ಟ್ರೀಕರಣ) ತಿದ್ದುಪಡಿ ಕಾಯ್ದೆ–2021ಕ್ಕೆ ಅದೇ ವರ್ಷದ ಆಗಸ್ಟ್‌ನಲ್ಲಿ ಸಂಸತ್ತು ಅಂಗೀಕಾರ ನೀಡಿತ್ತು.

ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಶೇ 51ಕ್ಕಿಂತ ಹೆಚ್ಚಿನ ಪಾಲು ಸರ್ಕಾರದ ಬಳಿಯೇ ಇರಬೇಕು ಎಂಬ ನಿಯಮ ಈವರೆಗೆ ಇತ್ತು. ಈ ತಿದ್ದುಪಡಿಯಿಂದ ಶೇ 51ರಷ್ಟು ಪಾಲನ್ನು ಸರ್ಕಾರ ಹೊಂದಿರಬೇಕು ಎಂಬ ನಿಬಂಧನೆ ತೆರವುಗೊಂಡಿದೆ. ಈ ತಿದ್ದುಪಡಿಯು ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಖಾಸಗೀಕರಣಕ್ಕೆ ಅನುಮತಿ ನೀಡಿದೆ.

# ಆಡಳಿತಾಧಿಕಾರಿ: ಪಂಜಾಬ್ ವಿರೋಧ

ಒಂದನೇ ಪುಟದಿಂದ...

ಡಿಸೆಂಬರ್ 1ರಿಂದ ಪ್ರಾರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು ಪಟ್ಟಿ ಮಾಡಲಾದ 10 ಮಸೂದೆಗಳಲ್ಲಿ, ಸಂವಿಧಾನದ (131ನೇ ತಿದ್ದುಪಡಿ) ಮಸೂದೆ –2025 ಸೇರಿದೆ ಎಂದು ಲೋಕಸಭೆ ಮತ್ತು ರಾಜ್ಯಸಭೆಯ ಪ್ರಕಟಣೆ ತಿಳಿಸಿತ್ತು.

ಸದ್ಯ ಚಂಡೀಗಢದಲ್ಲಿ ಪಂಜಾಬ್ ರಾಜ್ಯಪಾಲರೇ ಆಡಳಿತ ನಡೆಸುತ್ತಿದ್ದಾರೆ. ಪ್ರಸ್ತಾವಿತ ಮಸೂದೆಗೆ ಅನುಮೋದನೆ ಲಭಿಸಿದರೆ ಚಂಡೀಗಢಕ್ಕೆ ಈ ಹಿಂದೆ ಸ್ವತಂತ್ರ ಮುಖ್ಯ ಕಾರ್ಯದರ್ಶಿ ಇದ್ದಂತೆ ಸ್ವತಂತ್ರ ಆಡಳಿತಾಧಿಕಾರಿ ನೇಮಕಗೊಳ್ಳುತ್ತಾರೆ. ಪಂಜಾಬ್ ಹಾಗೂ ಹರಿಯಾಣದ ಜಂಟಿ ರಾಜಧಾನಿಯಾಗಿ ಚಂಡೀಗಢ ಮುಂದೆಯೂ ಕಾರ್ಯನಿರ್ವಹಿಸಲಿದೆ.

1966ರಲ್ಲಿ ಪಂಜಾಬ್ ಪುನರ್ ವಿಂಗಡಣೆಯಾದ ಬಳಿಕ ಚಂಡೀಗಢದಲ್ಲಿ ಮುಖ್ಯ ಕಾರ್ಯದರ್ಶಿ ಸ್ವತಂತ್ರವಾಗಿ ಆಡಳಿತ ನಡೆಸುತ್ತಿದ್ದರು. 1984ರ ಜೂನ್ 1ರಿಂದ ಅಲ್ಲಿ ಪಂಜಾಬ್‌ನ ರಾಜ್ಯಪಾಲರು ಆಡಳಿತ ನಡೆಸುತ್ತಿದ್ದಾರೆ. ರಾಜ್ಯಪಾಲರ ಆಡಳಿತದ ನಂತರ ಮುಖ್ಯ ಕಾರ್ಯದರ್ಶಿಯ ಹುದ್ದೆಯನ್ನು ಚಂಡೀಗಢದ ಆಡಳಿತಾಧಿಕಾರಿಯ ಸಲಹೆಗಾರ ಹುದ್ದೆಯಾಗಿ ಪರಿವರ್ತಿಸಲಾಗಿದೆ.

2016ರಲ್ಲಿ ಚಂಡೀಗಢಕ್ಕೆ ಮಾಜಿ ಐಎಎಸ್ ಅಧಿಕಾರಿ ಕೆ.ಜೆ. ಅಲ್ಫೋನ್ಸ್ ಅವರನ್ನು ನೇಮಿಸುವ ಮೂಲಕ ಕೇಂದ್ರ ಸರ್ಕಾರವು, ಸ್ವತಂತ್ರ ಆಡಳಿತಾಧಿಕಾರಿ ನೇಮಿಸುವ ಹಳೆಯ ಪದ್ಧತಿಯನ್ನೇ ಮರು ಸ್ಥಾಪಿಸಲು ಪ್ರಯತ್ನಿಸಿತು. ಆದರೆ, ಆಗಿನ ಪಂಜಾಬ್ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್ ಅವರ ತೀವ್ರ ವಿರೋಧದಿಂದ ಈ ನೇಮಕವನ್ನು ವಾಪಸ್ ಪಡೆಯಲಾಗಿತ್ತು.

‘ಚಂಡೀಗಢದ ಸಮಸ್ಯೆ ಇರಬಹುದು ಅಥವಾ ಪಂಜಾಬ್‌ನ ನೀರಿನ ಸಮಸ್ಯೆ ಇರಬಹುದು ಬಿಜೆಪಿಯು ಪಂಜಾಬ್ ಜನರ ಹಿತಾಸಕ್ತಿಯ ಪರವಾಗಿ ನಿಲ್ಲಲಿದೆ’ ಎಂದು ಪಂಜಾಬ್‌ನ ಬಿಜೆಪಿ ಮುಖಂಡ ಸುನಿಲ್ ಜಾಖಡ್ ಹೇಳಿದ್ದಾರೆ.

> **ಚಂಡೀಗಢವನ್ನು ಸಂವಿಧಾನದ 240ನೇ ವಿಧಿಯಡಿ ಸೇರಿಸುವುದು ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸಲು ಕೇಂದ್ರ ನಡೆಸುತ್ತಿರುವ ದಾಳಿ**
> **ರಣದೀಪ್ ಸಿಂಗ್ ಸುರ್ಜೇವಾಲಾ,** ಎಐಸಿಸಿ ಪ್ರಧಾನ ಕಾರ್ಯದರ್ಶಿ

> **ಚಂಡೀಗಢವು ಪಂಜಾಬ್‌ನ ಅವಿಭಾಜ್ಯ ಅಂಗ. ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲ ಗೊಂದಲಗಳು ಶೀಘ್ರದಲ್ಲೇ ಬಗೆಹರಿಯಲಿವೆ**
> **ಸುನಿಲ್ ಜಾಖಡ್,** ಪಂಜಾಬ್‌ನ ಬಿಜೆಪಿ ಮುಖಂಡ

## ರಾಷ್ಟ್ರಪತಿಗೆ ಅಧಿಕಾರ

ಸಂವಿಧಾನದ 240ನೇ ವಿಧಿಯು ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಾಂತಿ– ಪ್ರಗತಿ ಮತ್ತು ಸುಸ್ಥಿರ ಆಡಳಿತಕ್ಕಾಗಿ ನೇರವಾಗಿ ನಿಯಮಗಳನ್ನು ರೂಪಿಸಲು ರಾಷ್ಟ್ರಪತಿಯವರಿಗೆ ಅಧಿಕಾರ ಕಲ್ಪಿಸುತ್ತದೆ.

ಸದ್ಯ ಈ ವಿಧಿಯಡಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ದಾದ್ರಾ ಮತ್ತು ನಗರ್ ಹವೇಲಿ, ದಿಯು ಮತ್ತು ದಮನ್, ಪುದುಚೇರಿ (ವಿಧಾನಸಭೆ ಅಸ್ತಿತ್ವದಲ್ಲಿ ಇಲ್ಲದಾಗ) ಸೇರ್ಪಡೆಗೊಂಡಿವೆ. ಚಂಡೀಗಢವನ್ನೂ ಇದರ ವ್ಯಾಪ್ತಿಗೆ ತರುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಚಳಿಗಾಲದ ಅಧಿವೇಶನದಲ್ಲಿ ಜಾರಿಗೆ ತರಲು ಉದ್ದೇಶಿಸಿರುವ 10 ಮಸೂದೆಗಳ ತಾತ್ಕಾಲಿಕ ಪಟ್ಟಿಯಲ್ಲಿ ಈ ಮಸೂದೆಯೂ ಸೇರಿದೆ.

## ‘ಮಸೂದೆ ಮಂಡಿಸುವ ಉದ್ದೇಶವಿಲ್ಲ’

ಒಂದನೇ ಪುಟದಿಂದ...

ಸಚಿವಾಲಯದ ಸ್ಪಷ್ಟನೆ ಬೆನ್ನಲ್ಲೇ ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, ‘ಇದು ಬಿಜೆಪಿ ಸರ್ಕಾರದ ‘ಮೊದಲು ಘೋಷಿಸಿ; ನಂತರ ಯೋಚಿಸಿ’ ನೀತಿಗೆ ಅತ್ಯುತ್ತಮ ಉದಾಹರಣೆಯಾಗಿದೆ’ ಎಂದು ಟೀಕಿಸಿದೆ.

# ಹೂಡಿಕೆ ಆರಂಭಿಸಲು ಸಾಕು ₹5 ಸಾವಿರ

ಹಣಕಾಸು ಸಾಕ್ಷರತೆ



**ರಾಜೇಶ್ ಕುಮಾರ್ ಟಿ.ಆರ್**
ಚಾರ್ಟರ್ಡ್ ಅಕೌಂಟೆಂಟ್

**ತಿಂಗಳ ಉಳಿತಾಯಕ್ಕೆ ತಮ್ಮ** ಬಳಿ ಇರುವುದು ಕೇವಲ ₹5 ಸಾವಿರದಷ್ಟು ಸಣ್ಣ ಮೊತ್ತ ಎಂದು ಅನೇಕರು ಬೇಸರಿಸಿಕೊಳ್ಳುತ್ತಾರೆ. ಆದರೆ ನಿಮಗೆ ಗೊತ್ತಿರಲಿ, ಭಾರತದಲ್ಲಿ ಬಹುಪಾಲು ಜನ ಮಾಸಿಕ ₹5 ಸಾವಿರದೊಂದಿಗೆ ತಮ್ಮ ಹೂಡಿಕೆ ಪ್ರಯಾಣ ಆರಂಭಿಸುತ್ತಾರೆ. ಈ ಮೊದಲು ಅಂಚೆ ಕಚೇರಿ ಹೂಡಿಕೆ, ನಿಶ್ಚಿತ ಠೇವಣಿಗಳನ್ನು ಹೆಚ್ಚು ಅವಲಂಬಿಸುತ್ತಿದ್ದ ಹೂಡಿಕೆದಾರರು ಈಗ ನಿಧಾನವಾಗಿ ಮ್ಯೂಚುವಲ್ ಫಂಡ್ ಹೂಡಿಕೆಗಳ ಕಡೆಗೂ ವಾಲುತ್ತಿದ್ದಾರೆ. ಮ್ಯೂಚುವಲ್ ಫಂಡ್ ಹೂಡಿಕೆಗಳು ಜನಪ್ರಿಯವಾಗುತ್ತಿದ್ದರೂ ಹಲವು ಹೂಡಿಕೆದಾರರಿಗೆ ಸರಿಯಾದ ಫಂಡ್ ಆಯ್ಕೆ ಹೇಗೆ, ಯಾವ ಮ್ಯೂಚುವಲ್ ಫಂಡ್‌ಗಳಿಗೆ ಎಷ್ಟು ಹಣ ಹಂಚಿಕೆ ಮಾಡಬೇಕು, ಮ್ಯೂಚುವಲ್ ಫಂಡ್ ಎಸ್‌ಐಪಿ ಮಾರ್ಗದಲ್ಲಿ ₹1 ಕೋಟಿ ಗಳಿಸಲು ಎಷ್ಟು ಸಮಯ ಬೇಕು, ₹5 ಸಾವಿರ ಹೂಡಿಕೆಯಿಂದ ದೊಡ್ಡ ಮೊತ್ತ ಗಳಿಕೆ ಸಾಧ್ಯವೇ ಎಂಬ ಹಲವು ಪ್ರಶ್ನೆಗಳಿವೆ.

ಇಂತಹ ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಜೊತೆಗೆ ಮ್ಯೂಚುವಲ್ ಫಂಡ್ ಹೂಡಿಕೆ ಪ್ರವೇಶಿಸುವುದು ಹೇಗೆ ಎನ್ನುವ ಬಗ್ಗೆ ಒಂದಿಷ್ಟು ವಿವರ ಇಲ್ಲಿದೆ.

**ಎಸ್‌ಐಪಿ ಖಾತೆಗಳಲ್ಲಿ ಜಿಗಿತ:** ಕಳೆದ ಮೂರು ವರ್ಷಗಳಲ್ಲಿ ಭಾರತದಲ್ಲಿ ಎಸ್‌ಐಪಿ ಹೂಡಿಕೆಯು ದಾಖಲೆ ಮಟ್ಟ ತಲುಪಿದೆ. ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟದ (ಎಎಂಎಫ್‌ಐ) ದತ್ತಾಂಶಗಳ ಪ್ರಕಾರ 2022ರಲ್ಲಿ 5.2 ಕೋಟಿ ಎಸ್‌ಐಪಿ ಖಾತೆಗಳಿದ್ದವು, 2023ರಲ್ಲಿ ಈ ಸಂಖ್ಯೆ 6.3 ಕೋಟಿಗೆ ತಲುಪಿತು. 2024ರಲ್ಲಿ ಮ್ಯೂಚುವಲ್ ಫಂಡ್ ಖಾತೆಗಳ ಸಂಖ್ಯೆಯಲ್ಲಿ ಭಾರಿ ಜಿಗಿತವಾಗಿ 8.4 ಕೋಟಿಗೆ ಏರಿಕೆಯಾಯಿತು. ಈಗ, 2025ರ ಅಕ್ಟೋಬರ್‌ನಲ್ಲಿ 9.45 ಕೋಟಿ ಸಕ್ರಿಯ ಎಸ್‌ಐಪಿ ಖಾತೆಗಳಿವೆ.

**ಎಸ್‌ಐಪಿ ಮೊತ್ತದಲ್ಲೂ ಹೆಚ್ಚಳ:** 2022ರಲ್ಲಿ ಮ್ಯೂಚುವಲ್ ಫಂಡ್ ಎಸ್‌ಐಪಿಗಳಲ್ಲಿ ₹1.24 ಲಕ್ಷ ಕೋಟಿ ಹೂಡಿಕೆಯಾಗಿತ್ತು. 2023ರಲ್ಲಿ ಅದು ₹1.56 ಲಕ್ಷ ಕೋಟಿಗೆ ಜಿಗಿಯಿತು. 2024ರಲ್ಲಿ ₹1.99 ಲಕ್ಷ ಕೋಟಿಗೆ ಏರಿಕೆಯಾಯಿತು. 2025ರಲ್ಲಿ ಎಸ್‌ಐಪಿಗಳಲ್ಲಿ ಇರುವ ಒಟ್ಟು ಮೊತ್ತ ₹2.89 ಲಕ್ಷ ಕೋಟಿ ಮೀರಿದೆ. ಎಸ್‌ಐಪಿ ಕೊಡುಗೆಗಳು ಮೂರು ವರ್ಷಗಳಲ್ಲಿ ಎರಡು ಪಟ್ಟು ಹೆಚ್ಚಾಗಿವೆ. ಈ ಬೆಳವಣಿಗೆ ಹೆಚ್ಚು ಭಾರತೀಯ ಕುಟುಂಬಗಳು ಮ್ಯೂಚುವಲ್ ಫಂಡ್ ವ್ಯವಸ್ಥಿತ ಹೂಡಿಕೆಯನ್ನು ನಂಬುತ್ತಿವೆ ಎಂಬುದನ್ನು ತೋರಿಸುತ್ತದೆ. ₹5 ಸಾವಿರ ಇದ್ದರೂ ಮ್ಯೂಚುವಲ್ ಫಂಡ್ ಹೂಡಿಕೆ ಪ್ರವೇಶ ಸಾಧ್ಯ ಎಂಬ ಮಾತಿನ ಮೇಲೆ ಜನ ವಿಶ್ವಾಸ ಇಡುತ್ತಿದ್ದಾರೆ ಎನ್ನುವುದನ್ನು ಅಂಕಿ-ಅಂಶಗಳು ಹೇಳುತ್ತಿವೆ.

**ವಿಂಗಡಣೆ ಹೇಗೆ?:** ಉದಾಹರಣೆಗೆ ನಿಮ್ಮ ಬಳಿ ಪ್ರತಿ ತಿಂಗಳು ಹೂಡಿಕೆ ಮಾಡಲು ₹5 ಸಾವಿರ ಇದೆ ಎಂದುಕೊಳ್ಳಿ. ಈ ₹5 ಸಾವಿರದಲ್ಲಿ ₹3 ಸಾವಿರ ಇಂಡೆಕ್ಸ್ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಬಹುದು. ಇನ್ನುಳಿದ ₹2 ಸಾವಿರವನ್ನು ಫ್ಲೆಕ್ಸಿ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ಈ ರೀತಿ ಮಾಡಿದಾಗ ಬಹಳ ಸರಳ ಆಯ್ಕೆಗಳೊಂದಿಗೆ ಹೂಡಿಕೆ ವೈವಿಧ್ಯತೆಯನ್ನೂ ಕಾಯ್ದುಕೊಳ್ಳಬಹುದು. ಮೇಲಿನ ಎರಡು ಮಾದರಿಯ ಮ್ಯೂಚುವಲ್ ಫಂಡ್‌ಗಳನ್ನು ಕೇಂದ್ರೀಕರಿಸಿಕೊಂಡು ಹೂಡಿಕೆ ಮಾಡಿದಾಗ ಅತಿಯಾದ ಹೂಡಿಕೆ ವೈವಿಧ್ಯತೆ ತಪ್ಪುವ ಜೊತೆಗೆ ಬಂಡವಾಳ ಸ್ಥಿರತೆ ಮತ್ತು ಬೆಳವಣಿಗೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

**ಹೊಸ ಹೂಡಿಕೆದಾರರಿಗೆ ಯಾವ ಫಂಡ್ ಸೂಕ್ತ?:** ಈಗಷ್ಟೇ ಮ್ಯೂಚುವಲ್ ಫಂಡ್ ಲೋಕ ಪ್ರವೇಶ ಮಾಡುವ ಬಹುಪಾಲು ಹೂಡಿಕೆದಾರರಿಗೆ ಇಂಡೆಕ್ಸ್ ಮತ್ತು ಫ್ಲೆಕ್ಸಿಕ್ಯಾಪ್ ಫಂಡ್‌ಗಳ ಮಿಶ್ರಣ ಸೂಕ್ತ. ಇವು ಹೆಚ್ಚಿನ ಸ್ಥಿರತೆ ಒದಗಿಸುವ ಜೊತೆಗೆ ಕಡಿಮೆ ವೆಚ್ಚ ಹೊಂದಿವೆ. ಈಕ್ವಿಟಿ ಮತ್ತು ಡೆಟ್ ಹೂಡಿಕೆಗಳ ಮಿಶ್ರಣ ಬೇಕಾದವರಿಗೆ ಹೈಬ್ರಿಡ್ ಫಂಡ್‌ಗಳು ಸೂಕ್ತ ಆಯ್ಕೆ ಎನಿಸಿಕೊಳ್ಳುತ್ತವೆ.

**₹5 ಸಾವಿರ ಎಸ್‌ಐಪಿ ನಿಮ್ಮನ್ನು ಕೋಟ್ಯಧಿಪತಿ ಮಾಡಬಲ್ಲದೇ?:** ಹೆಚ್ಚಿನ ಯುವ ಹೂಡಿಕೆದಾರರು ಎಸ್‌ಐಪಿ ಮೂಲಕ ₹1 ಕೋಟಿ ಒಗ್ಗೂಡಿಸುವ ಕನಸು ಕಾಣುತ್ತಾರೆ. ₹5 ಸಾವಿರ ಎಸ್‌ಐಪಿಯೊಂದಿಗೆ ಆರಂಭಿಸಿ ವಾರ್ಷಿಕ ಶೇ 10ರಷ್ಟು ಹೂಡಿಕೆಯನ್ನು ಹೆಚ್ಚಿಸುತ್ತಾ ಹೋದರೆ ಹಣ ವೇಗವಾಗಿ ಬೆಳೆಯುತ್ತದೆ. 20 ವರ್ಷ ಈ ಮಾದರಿಯಲ್ಲಿ ಹೂಡಿಕೆ ಮಾಡುತ್ತಾ ಸಾಗಿದರೆ ವಾರ್ಷಿಕ ಶೇ 12ರಷ್ಟು ಗಳಿಕೆ ಲೆಕ್ಕಾಚಾರದಲ್ಲಿ ₹1 ಕೋಟಿ ಒಗ್ಗೂಡಿಸುವ ಸಾಧ್ಯತೆ ಹೆಚ್ಚು.

**ಎಸ್‌ಐಪಿ ಯಾವಾಗ ಹೆಚ್ಚಳ ಮಾಡಬೇಕು?:** ಬಹುತೇಕರು ₹5 ಸಾವಿರ ಎಸ್‌ಐಪಿಯೊಂದಿಗೆ ಹೂಡಿಕೆ ಆರಂಭಿಸಿದರೆ ಹಲವು ವರ್ಷ ಅದನ್ನೇ ಮುಂದುವರಿಸುತ್ತಾರೆ. ಆದರೆ ತಪ್ಪಾಗುವುದು ಇಲ್ಲೇ. ಪ್ರತಿ ವರ್ಷ ಆದಾಯ ಹೆಚ್ಚಳವಾದಂತೆಲ್ಲ ಎಸ್‌ಐಪಿ ಮೊತ್ತ ಹೆಚ್ಚಿಸಬೇಕು. ಬೋನಸ್ ಮೊತ್ತ ಸಿಕ್ಕಿದರೆ ಅದನ್ನು ಎಸ್‌ಐಪಿಗೆ ತೊಡಗಿಸಬೇಕು. ಹೂಡಿಕೆ ಮಾಡುವಾಗ ಸ್ಥಿರತೆ ಬಹಳ ಮುಖ್ಯ. ನಿಯಮಿತವಾಗಿ ಪ್ರತಿ ಸಲವೂ ಶಿಸ್ತುಬದ್ಧವಾಗಿ ಹೂಡಿಕೆ ಮಾಡಿದಾಗ ದೊಡ್ಡ ಮಟ್ಟದ ಸಂಪತ್ತು ಸೃಷ್ಟಿಸಿಕೊಳ್ಳಬಹುದು.

(ಸೂಚನೆ: ಯಾವುದೇ ಹೂಡಿಕೆ ತೀರ್ಮಾನ ಮಾಡುವ ಮುನ್ನ ಸೆಬಿ ನೋಂದಾಯಿತ ಹಣಕಾಸು ಸಲಹೆಗಾರರ ನೆರವು ಪಡೆಯಿರಿ)

## ಮ್ಯೂಚುವಲ್ ಫಂಡ್ ಹೂಡಿಕೆ ಏಕೆ ಅಗತ್ಯ?

ನಿಶ್ಚಿತ ಠೇವಣಿ ಅಥವಾ ಸರ್ಕಾರದ ಬೆಂಬಲವಿರುವ ಸಣ್ಣ ಉಳಿತಾಯ ಯೋಜನೆಗಳಲ್ಲಿ ಬಂಡವಾಳ ಸುರಕ್ಷತೆಯ ಜೊತೆಗೆ ಒಂದಷ್ಟು ಗಳಿಕೆ ಸಿಗುತ್ತದೆ ನಿಜ. ಆದರೆ ಆ ಹೂಡಿಕೆಗಳು ಬೆಲೆ ಏರಿಕೆಯ ಪ್ರಮಾಣವನ್ನು ಮೀರಿ ಗಳಿಕೆ ತಂದುಕೊಡುವುದಿಲ್ಲ. ನಮ್ಮ ಅರ್ಥ ವ್ಯವಸ್ಥೆಯಲ್ಲಿ ವಾರ್ಷಿಕ ಶೇ 6ರಿಂದ ಶೇ 7ರಷ್ಟು ಹಣದುಬ್ಬರ ಇರುತ್ತದೆ. ಹೂಡಿಕೆ ಮೇಲಿನ ಗಳಿಕೆಗಳೂ ಶೇಕಡ ಆರು–ಏಳರ ಮಟ್ಟದಲ್ಲಿದ್ದರೆ ವಾಸ್ತವದಲ್ಲಿ ಹೂಡಿಕೆಗಳು ಬೆಳವಣಿಗೆ ಸಾಧಿಸುವುದಿಲ್ಲ. ಈ ಕಾರಣದಿಂದಾಗಿ ಮ್ಯೂಚುವಲ್ ಫಂಡ್‌ನಂತಹ ಮಾರುಕಟ್ಟೆ ಆಧಾರಿತ ಹೂಡಿಕೆಗಳು ಬಹಳ ಮುಖ್ಯ.

# ರಷ್ಯಾ ತೈಲ ಆಮದು ಇಳಿಕೆ ಸಂಭವ

## ಕಚ್ಚಾ ತೈಲದ ಆಮದು ಕಡಿಮೆ ಆದರೂ, ಪೂರ್ತಿ ನಿಲ್ಲುವ ಸಾಧ್ಯತೆ ಕಡಿಮೆ

**ಮುಖ್ಯಾಂಶಗಳು**

- ನಿರ್ಬಂಧಕ್ಕೆ ಗುರಿಯಾಗದ ಕಂಪನಿಗಳಿಂದ ಆಮದಿಗೆ ಇದೆ ಅವಕಾಶ
- ರಷ್ಯಾದ ರಿಯಾಯಿತಿ ದರ ಭಾರತದ ಕಂಪನಿಗಳಿಗೆ ಆಕರ್ಷಕ



ನವದೆಹಲಿ (ಪಿಟಿಐ): ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಮುಂದಿನ ದಿನಗಳಲ್ಲಿ ಕಡಿಮೆ ಆಗುವ ಸಾಧ್ಯತೆ ಇದೆ. ಆದರೆ ಆಮದು ಪೂರ್ತಿಯಾಗಿ ನಿಲ್ಲುವ ಸಾಧ್ಯತೆ ಇಲ್ಲ ಎಂದು ತಜ್ಞರು ಹೇಳಿದ್ದಾರೆ.

ರಷ್ಯಾದ ರೋಸ್ನೆಫ್ಟ್ ಮತ್ತು ಲುಕಾಯಿಲ್ ಕಂಪನಿಗಳ ಮೇಲೆ ಅಮೆರಿಕ ಹೇರಿರುವ ನಿರ್ಬಂಧಗಳು ನವೆಂಬರ್ 21ರಿಂದ ಜಾರಿಗೆ ಬಂದಿವೆ.

ಈ ವರ್ಷದಲ್ಲಿ ಭಾರತವು ರಷ್ಯಾದಿಂದ ಆಮದು ಮಾಡಿಕೊಂಡ ಕಚ್ಚಾ ತೈಲದ ಪ್ರಮಾಣವು ದಿನವೊಂದಕ್ಕೆ ಸರಾಸರಿ 17 ಲಕ್ಷ ಬ್ಯಾರೆಲ್ ಆಗಿದೆ. ನವೆಂಬರ್‌ನಲ್ಲಿ ಆಮದು ಪ್ರಮಾಣವು ದಿನವೊಂದಕ್ಕೆ ಸರಾಸರಿ 19 ಲಕ್ಷ ಬ್ಯಾರೆಲ್ ಆಗಿತ್ತು. ನವೆಂಬರ್‌ನಲ್ಲಿ ಭಾರತಕ್ಕೆ ಕಚ್ಚಾ ತೈಲ ರಫ್ತು ಮಾಡುವ ದೇಶಗಳ ಸಾಲಿನಲ್ಲಿ ರಷ್ಯಾ ಮೊದಲ ಸ್ಥಾನದಲ್ಲಿಯೇ ಇತ್ತು. ಆದರೆ ಆಮದು ಡಿಸೆಂಬರ್ ಮತ್ತು ಜನವರಿಯಲ್ಲಿ ಗಮನಾರ್ಹವಾಗಿ ಕಡಿಮೆ ಆಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಇದು ಶೀಘ್ರದಲ್ಲಿ ದಿನವೊಂದಕ್ಕೆ 4 ಲಕ್ಷ ಬ್ಯಾರೆಲ್‌ಗೆ ಇಳಿಕೆಯಾಗಬಹುದು ಎಂದು ಅಂದಾಜು ಮಾಡಲಾಗಿದೆ.

ಮಧ್ಯವರ್ತಿಗಳನ್ನು ನೇಮಕ ಮಾಡುವ ವಿಚಾರದಲ್ಲಿ, ನಿರ್ಬಂಧಗಳನ್ನು ತಪ್ಪಿಸಿ ಹಡಗುಗಳ ಮೂಲಕ ಉತ್ಪನ್ನಗಳನ್ನು ರವಾನಿಸುವಲ್ಲಿ ಹಾಗೂ ಹಣದ ಪಾವತಿಗೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ವಿಚಾರದಲ್ಲಿ ರಷ್ಯಾದ ಬಹಳ ತ್ವರಿತವಾಗಿ ಹೊಸ ನಿರ್ಧಾರಗಳನ್ನು ಕೈಗೊಳ್ಳುವ ಸಾಮರ್ಥ್ಯ ಹೊಂದಿದೆ. ಹೀಗಾಗಿ ಈಗಲೇ ಖಚಿತವಾಗಿ ಏನೂ ಹೇಳಲಾಗದು ಎಂದು ಕೆಪ್ಲರ್ ಸಂಸ್ಥೆಯ ಮುಖ್ಯ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಹೇಳಿದ್ದಾರೆ.

ನಿರ್ಬಂಧಗಳ ಕಾರಣದಿಂದಾಗಿ ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಪಿಸಿಎಲ್–ಮಿತ್ತಲ್ ಎನರ್ಜಿ ಲಿಮಿಟೆಡ್, ಎಂಆರ್‌ಪಿಎಲ್ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿವೆ.

ಅಮೆರಿಕವು ಘೋಷಣೆ ಮಾಡಿರುವ ನಿರ್ಬಂಧಗಳು ರಷ್ಯಾದ ನಿರ್ದಿಷ್ಟ ಕಂಪನಿಗಳನ್ನು ಗುರಿಯಾಗಿಸಿಕೊಂಡಿವೆ, ರಷ್ಯಾದ ಕಚ್ಚಾ ತೈಲ ಖರೀದಿಯನ್ನು ಇಡಿಯಾಗಿ ಅದು ಗುರಿಮಾಡಿಕೊಂಡಿಲ್ಲ. ಅಂದರೆ, ನಿರ್ಬಂಧಕ್ಕೆ ಗುರಿಯಾಗದ ರಷ್ಯಾದ ಕಂಪನಿಗಳಿಂದ ಅಥವಾ ನಿರ್ಬಂಧಕ್ಕೆ ಗುರಿಯಾಗದ ಮಧ್ಯವರ್ತಿಗಳನ್ನು ಬಳಕೆ ಮಾಡಿಕೊಳ್ಳುವ ಸ್ವತಂತ್ರ ವರ್ತಕರಿಂದ ಕಚ್ಚಾ ತೈಲವನ್ನು ಭಾರತದ ಕಂಪನಿಗಳು ಈಗಲೂ ಖರೀದಿಸಬಹುದು. ನಿರ್ಬಂಧಕ್ಕೆ ಗುರಿಯಾದ ಕಂಪನಿ, ಹಡಗು, ಬ್ಯಾಂಕ್ ಅಥವಾ ಸೇವಾದಾತ ಖರೀದಿ ಪ್ರಕ್ರಿಯೆಯಲ್ಲಿ ಭಾಗಿಯಾಗಿರಬಾರದು.

ರಷ್ಯಾದಿಂದ ಕಚ್ಚಾ ತೈಲವನ್ನು ರಿಯಾಯಿತಿ ಬೆಲೆಗೆ ತರಿಸಿಕೊಳ್ಳುತ್ತಿರುವುದರಿಂದಾಗಿ ಭಾರತದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ, ಹಿಂದುಸ್ತಾನ್ ಪೆಟ್ರೋಲಿಯಂ, ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಗಳಿಗೆ ಕಳೆದ ಎರಡು ವರ್ಷಗಳಲ್ಲಿ ಭಾರಿ ಲಾಭ ಕಾಣಲು ಸಾಧ್ಯವಾಗಿದೆ. ಹಾಗೂ, ಚಿಲ್ಲರೆ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಸ್ಥಿರತೆ ಇದೆ.

‘ಅಲ್ಪಾವಧಿಯಲ್ಲಿ ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದು ಕಡಿಮೆ ಆಗಲಿದ್ದರೂ, ಅಲ್ಲಿಂದ ತೈಲ ಖರೀದಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸುವ ಸಾಧ್ಯತೆ ಇಲ್ಲ. ರಿಯಾಯಿತಿ ದರಕ್ಕೆ ಸಿಗುವ ರಷ್ಯಾದ ತೈಲವು ಭಾರತದ ಕಂಪನಿಗಳ ಪಾಲಿಗೆ ಆಕರ್ಷಕವಾಗಿ ಇರಲಿದೆ. ಎರಡನೆಯ ಹಂತದ ನಿರ್ಬಂಧಗಳು ಭಾರತದ ಕಂಪನಿಗಳನ್ನು ಗುರಿಯಾಗಿಸಿಕೊಳ್ಳದೆ ಇದ್ದರೆ, ಕೇಂದ್ರ ಸರ್ಕಾರವು ತಾನೇ ನಿರ್ಬಂಧ ವಿಧಿಸದೆ ಇದ್ದರೆ ರಷ್ಯಾದಿಂದ ಕಚ್ಚಾ ತೈಲ ಆಮದು ಬೇರೆ ಬೇರೆ ಮಾರ್ಗಗಳ ಮೂಲಕ ಮುಂದುವರಿಯಲಿದೆ’ ಎಂದು ರಿತೋಲಿಯಾ ಹೇಳಿದ್ದಾರೆ.

**ಮೊಟ್ಟೆ ಧಾರಣೆ** (ಎನ್‌ಇಸಿಸಿ)

| ಬೆಂಗಳೂರು | | ಮೈಸೂರು: | |
|---|---|---|---|
| 100 ಕ್ಕೆ | ₹675 | 100 ಕ್ಕೆ | ₹675 |
| 12 ಕ್ಕೆ | ₹96 | | |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ(ಸಿ.ಬಿ) | ₹588-735 |
| ದ್ವಿತಳಿ (ಬಿ.ವಿ) | ₹605-877 |

## ‘ತೈವಾನ್ ವಿಚಾರ: ಜಪಾನ್ ಎಲ್ಲೆ ಮೀರಿದೆ’

ತೈಪೆ (ತೈವಾನ್) (ಎಪಿ): ತೈವಾನ್ ಮೇಲೆ ಸಂಭಾವ್ಯ ಸೇನಾ ಹಸ್ತಕ್ಷೇಪದ ಬಗ್ಗೆ ಹೇಳಿಕೆ ನೀಡುವ ಮೂಲಕ ಜಪಾನ್ ಎಲ್ಲೆ ಮೀರಿ ವರ್ತಿಸಿದೆ ಎಂದು ಚೀನಾ ಭಾನುವಾರ ಹೇಳಿದೆ.

‘ನೌಕಾಪಡೆಯ ದಿಗ್ಬಂಧನ ಸೇರಿದಂತೆ ತೈವಾನ್ ವಿರುದ್ಧದ ಚೀನಾದ ಕ್ರಮಗಳು ಜಪಾನ್ ಪ್ರತಿಕ್ರಿಯೆಗೆ ಕಾರಣವಾಗಬಹುದು ಎಂದು ಜಪಾನ್‌ನ ಪ್ರಧಾನಿ ಸನೇ ತಕೈಚಿ ಅವರು ಇತ್ತೀಚೆಗೆ ಹೇಳಿರುವುದು ಆಶ್ಚರ್ಯಕರವಾಗಿದೆ’ ಎಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ತೈವಾನ್ ವಿಚಾರದಲ್ಲಿ ಸೇನಾ ಹಸ್ತಕ್ಷೇಪದ ಪ್ರಯತ್ನದ ಬಗ್ಗೆ ಅವರು ಸಾರ್ವಜನಿಕವಾಗಿ ತಪ್ಪು ಸಂದೇಶವನ್ನು ನೀಡಿದ್ದಾರೆ. ಹೇಳಬಾರದ ವಿಚಾರಗಳನ್ನು ಹೇಳಿದ್ದಾರೆ ಮತ್ತು ಎಚ್ಚರಿಕೆಯ ಗಡಿಯನ್ನು ದಾಟಿದ್ದಾರೆ’ ಎಂದು ಹೇಳಿದರು.

‘ಜಪಾನ್ ಕ್ರಮಗಳಿಗೆ ಚೀನಾ ದೃಢವಾಗಿ ಪ್ರತಿಕ್ರಿಯಿಸುತ್ತದೆ. ಜಪಾನ್ ಸೇನಾ ಹಸ್ತಕ್ಷೇಪದ ಪ್ರಯತ್ನವನ್ನು ತಡೆಯುವ ಜವಾಬ್ದಾರಿ ಎಲ್ಲ ದೇಶಗಳದ್ದಾಗಿದೆ’ ಎಂದು ಚೀನಾ ಹೇಳಿದೆ.

# ಜಿನೀವಾ: ಮಿತ್ರ ರಾಷ್ಟ್ರಗಳ ಜೊತೆ ಉಕ್ರೇನ್ ನಿಯೋಗ ಸಭೆ

ಜಿನೀವಾ (ಎಪಿ): ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ನಿಲ್ಲಿಸಿ, ಶಾಂತಿ ಸ್ಥಾಪನೆಗಾಗಿ ಅಮೆರಿಕ ರೂಪಿಸಿರುವ ಯೋಜನೆ ಕುರಿತು ಭಾನುವಾರ ಇಲ್ಲಿ ಆರಂಭವಾಗಿರುವ ಸಭೆಯಲ್ಲಿ ಉಕ್ರೇನ್ ಹಾಗೂ ಅದರ ಮಿತ್ರ ರಾಷ್ಟ್ರಗಳು ಸಮಾಲೋಚನೆಗೆ ಚಾಲನೆ ನೀಡಿವೆ.

‘ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿಯ ರಾಷ್ಟ್ರೀಯ ಭದ್ರತಾ ಸಲಹೆಗಾರರೊಂದಿಗೆ ಮೊದಲ ಸಭೆ ನಡೆಸಲಾಯಿತು. ರಷ್ಯಾ ಜೊತೆಗಿನ ಶಾಂತಿ ಒಪ್ಪಂದವನ್ನು ಪರಿಷ್ಕರಿಸುವಂತೆ ಈ ಮಿತ್ರ ರಾಷ್ಟ್ರಗಳು ಉಕ್ರೇನ್‌ಗೆ ಸಲಹೆ ನೀಡಿದವು’ ಎಂದು ಉಕ್ರೇನ್ ನಿಯೋಗದ ಮುಖ್ಯಸ್ಥ ಆ್ಯಂಡ್ರಿ ಯೆರ್‌ಮಾಕ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

‘ಅಮೆರಿಕ ನಿಯೋಗದ ಜೊತೆ ಮುಂದಿನ ಸಭೆ ನಡೆಯಲಿದ್ದು, ಈ ಸಮಾಲೋಚನೆಯು ರಚನಾತ್ಮಕವಾಗಿರಲಿದೆ ಎಂಬ ವಿಶ್ವಾಸ ಹೊಂದಿದ್ದೇವೆ. ಉಕ್ರೇನ್‌ನಲ್ಲಿ ಶಾಶ್ವತವಾಗಿ ಶಾಂತಿ ನೆಲಸುವಂತಾಗುವ ದಿಸೆಯಲ್ಲಿ ಎಲ್ಲ ಮಿತ್ರ ರಾಷ್ಟ್ರಗಳೊಂದಿಗೆ ಕಾರ್ಯನಿರ್ವಹಿಸಲಾಗುವುದು’ ಎಂದು ಯೆರ್‌ಮಾಕ್ ಹೇಳಿದ್ದಾರೆ.

ಮಿತ್ರ ರಾಷ್ಟ್ರಗಳು ಪ್ರತಿಪಾದಿಸುತ್ತಿರುವ ಶಾಂತಿ ಒಪ್ಪಂದದ ಪರಿಷ್ಕರಣೆಯು ರಷ್ಯಾಕ್ಕೆ ಹೆಚ್ಚು ಅನುಕೂಲವಾಗುವಂತಿದೆ ಎಂದು ಹೇಳಲಾಗುತ್ತಿದೆ.

ರಷ್ಯಾ ಮತ್ತು ಉಕ್ರೇನ್ ನಡುವೆ ನಾಲ್ಕು ವರ್ಷಗಳಿಂದ ಯುದ್ಧ ನಡೆಯುತ್ತಿದೆ. ಇದನ್ನು ಕೊನೆಗಾಣಿಸುವ ಸಲುವಾಗಿ ಅಮೆರಿಕವು 28 ಅಂಶಗಳನ್ನು ಒಳಗೊಂಡ ಶಾಂತಿ ಒಪ್ಪಂದವೊಂದನ್ನು ರೂಪಿಸಿದೆ.

## ರುಬಿಯೊ ಸಭೆ

ರಷ್ಯಾ–ಉಕ್ರೇನ್ ನಡುವಿನ ಶಾಂತಿ ಒಪ್ಪಂದ ಕುರಿತಂತೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು, ಉಕ್ರೇನ್ ಹಾಗೂ ಯುರೋಪ್‌ನ ಮಿತ್ರ ರಾಷ್ಟ್ರಗಳೊಂದಿಗೆ ಚರ್ಚೆ ನಡೆಸಲಿದ್ದಾರೆ. ಆ್ಯಂಡ್ರಿ ಯೆರ್‌ಮಾಕ್, ಅಮೆರಿಕ ಸೇನೆಯ ಕಾರ್ಯದರ್ಶಿ ಡ್ಯಾನ್ ಡ್ರಿಸ್ಕಾಲ್, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ಪ್ರತಿನಿಧಿ ಸ್ಟೀವ್ ವಿಟ್‌ಕಾಫ್ ಹಾಗೂ ಫ್ರಾನ್ಸ್, ಜರ್ಮನಿ ಮತ್ತು ಬ್ರಿಟನ್ ಪ್ರತಿನಿಧಿಗಳು ಕೂಡ ಈ ಸಭೆಯಲ್ಲಿ ಪಾಲ್ಗೊಳ್ಳುವರು ಎಂದು ಮೂಲಗಳು ಹೇಳಿವೆ.


ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

**ಉದ್ಯೋಗಾವಕಾಶ**

**General**

**ಕರ್ನಾಟಕದಾದ್ಯಂತ ಪ್ರಾರಂಭವಾಗಿರುವ** ಕಂಪನಿಗಳಿಗೆ, ಆಫೀಸ್ ಗಳಿಗೆ 7th,PUC, ಡಿಗ್ರಿ ಆದಂತ ಯುವಕ, ಯುವತಿಯರು ಬೇಕಾಗಿದ್ದಾರೆ 18,900-47000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9916788422.

**Part-Time Jobs**

**ಮನೆಯಲ್ಲೇ ಕುಳಿತು** ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

**ಕರ್ನಾಟಕದಾದ್ಯಂತ ಕಂಪನಿಗಳಿಗೆ** Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000-25000 7th, 10th, Any Degree 8095043191

**ಪ್ರವಾಸ**

**Travel**

**09.01.2026 ಸಿಂಗಾಪುರ್** ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 22.01.2026 ದುಬೈ,ಅಬುದಾಬಿ 5 ದಿನಗಳು. 16.01.2026 ಶ್ರೀಲಂಕಾ 7 ದಿನಗಳು. 30.01.2026 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು




ವಿಯೆಟ್ನಾಂನಲ್ಲಿ ರಕ್ಷಣಾ ತಂಡಗಳು ಪ್ರವಾಹದಲ್ಲಿ ಸಿಲುಕಿರುವ ಜನರನ್ನು ರಬ್ಬರ್ ದೋಣಿಗಳ ಮೂಲಕ ರಕ್ಷಿಸಿದವು – ಎಎಫ್‌ಪಿ ಚಿತ್ರ

# ಪ್ರವಾಹ: 90 ಜನ ಸಾವು

ಹನೋಯಿ (ಎಪಿ): ಕೇಂದ್ರ ವಿಯೆಟ್ನಾಂನಲ್ಲಿ ಕಳೆದ ಒಂದು ವಾರದಿಂದ ಸುರಿಯುತ್ತಿರುವ ಭಾರಿ ಮಳೆಯಿಂದ ಉಂಟಾದ ಪ್ರವಾಹ ಮತ್ತು ಭೂಕುಸಿತದಲ್ಲಿ ಕನಿಷ್ಠ 90 ಮಂದಿ ಮೃತಪಟ್ಟಿದ್ದಾರೆ ಎಂದು ವಿಕೋಪ ನಿಯಂತ್ರಣ ಸಂಸ್ಥೆ ನೀಡಿದ ಮಾಹಿತಿ ಆಧರಿಸಿ ಇಲ್ಲಿನ ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

ದಾಖಲೆ ಪ್ರಮಾಣದ ಮಳೆ ಮತ್ತು ಪ್ರಬಲ ‘ಕಾಲ್‌ಮೇಗಿ’ ಚಂಡಮಾರುತದಿಂದಾದ ಮಹಾಪ್ರವಾಹ ಭಾರಿ ಹಾನಿ ಉಂಟು ಮಾಡಿದೆ. ವಿಯೆಟ್ನಾಂನ ಸೆಂಟ್ರಲ್ ಹೈಲ್ಯಾಂಡ್‌ನ ರಸ್ತೆಗಳು, ರೈಲು ಹಳಿಗಳು ಹಲವೆಡೆ ಭೂಕುಸಿತದಿಂದ ನಾಶವಾಗಿದ್ದರೆ, ಮತ್ತೆ ಕೆಲವೆಡೆ ಜಲಾವೃತವಾಗಿವೆ. ಸಾವಿರಾರು ಜನರು ಪ್ರವಾಹದಲ್ಲಿ ಸಿಲುಕಿ ಪರದಾಡಿದರು.

ಜಗತ್ತಿನ ಅತ್ಯಂತ ಪ್ರವಾಹ ಪೀಡಿತ ದೇಶಗಳಲ್ಲಿ ಒಂದಾಗಿರುವ ವಿಯೆಟ್ನಾಂನ ಅರ್ಧದಷ್ಟು ಜನರು ಆತಂಕದಲ್ಲೇ ಜೀವನ ನಡೆಸುತ್ತಾರೆ. ಹವಾಮಾನ ವೈಪರೀತ್ಯದಿಂದಾಗಿ ಆಗ್ನೇಯ ಏಷ್ಯಾ ಭಾಗದಲ್ಲಿ ಬಿರುಗಾಳಿ ಸಹಿತ ಭಾರಿ ಮಳೆ ಸುರಿಯಲಿದೆ. ಭೂಕುಸಿತ, ಪ್ರವಾಹ ಸಂಕಷ್ಟ ತರಲಿವೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ.

## ಟಿಪ್ಪು ವಂಶಸ್ಥೆ, ಗೂಢಚಾರಿಣಿ ನೂರ್ ಅಂಚೆ ಚೀಟಿ ಬಿಡುಗಡೆ



ನೂರ್ ಇನಾಯತ್ ಖಾನ್

ಲಂಡನ್ (ಪಿಟಿಐ): ಫ್ರಾನ್ಸ್ ಸರ್ಕಾರವು ಟಿಪ್ಪು ಸುಲ್ತಾನ್ ವಂಶಸ್ಥೆ ನೂರ್ ಇನಾಯತ್ ಖಾನ್ ಅವರ ಅಂಚೆ ಚೀಟಿ ಬಿಡುಗಡೆ ಮಾಡುವ ಮೂಲಕ ಗೌರವ ಸಲ್ಲಿಸಿದೆ. ಈ ಗೌರವಕ್ಕೆ ಪಾತ್ರರಾದ ಭಾರತ ಮೂಲದ ಏಕೈಕ ಮಹಿಳೆಯಾಗಿದ್ದಾರೆ.

ಫ್ರೆಂಚ್ ಅಂಚೆ ಸೇವೆ, ಲಾ ಪೋಸ್ಟೆಯು ನಾಜಿಗಳ ವಿರುದ್ಧ ಹೋರಾಡಿದವರ ಗೌರವಾರ್ಥ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿದೆ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಬ್ರಿಟನ್‌ನ ವಿಶೇಷ ಕಾರ್ಯಾಚರಣೆ ವಿಭಾಗದ ರಹಸ್ಯ ಪ್ರತಿನಿಧಿಯಾಗಿ ಫ್ರಾನ್ಸ್ ಪರ ನೂರ್ ಕೆಲಸ ಮಾಡಿದ್ದರು.

ಎರಡನೇ ಮಹಾಯುದ್ಧದ 80 ವರ್ಷಾಚರಣೆ ಸಂದರ್ಭದಲ್ಲಿ ಈ ತಿಂಗಳು ಬಿಡುಗಡೆ ಮಾಡಿದ ಅಂಚೆ ಚೀಟಿಗಳಿಗೆ ಆಯ್ಕೆಯಾದ 12 ಯುದ್ಧ ವೀರರು ಮತ್ತು ನಾಯಕಿಯರಲ್ಲಿ ನೂರ್ ಸಹ ಒಬ್ಬರು.

‘ಫ್ರಾನ್ಸ್ ಸರ್ಕಾರ ನೂರ್ ಇನಾಯತ್ ಖಾನ್ ಅವರ ಅಂಚೆ ಚೀಟಿ ಬಿಡುಗಡೆ ಮೂಲಕ ಗೌರವಿಸಿರುವುದು ಸಂತೋಷ ತಂದಿದೆ’ ಎಂದು ನೂರ್ ಅವರ ಜೀವನ ಚರಿತ್ರೆ ‘ಸ್ಪೈ ಪ್ರಿನ್ಸೆಸ್: ದಿ ಲೈಫ್ ಆಫ್ ನೂರ್ ಇನಾಯತ್ ಖಾನ್’ನ ಲೇಖಕಿ ಶ್ರಬಾನಿ ಬಸು ಹೇಳಿದ್ದಾರೆ.

‘ನಿರಂಕುಶ ಪ್ರಭುತ್ವದ ವಿರುದ್ಧದ ಹೋರಾಟದಲ್ಲಿ ನೂರ್ ತನ್ನ ಪ್ರಾಣ ತ್ಯಾಗ ಮಾಡಿದ್ದರು. ಫ್ರಾನ್ಸ್‌ನಲ್ಲಿ ಸಾಮಾನ್ಯ ಜನರು ಪೋಸ್ಟ್ ಮಾಡುವ ಅಂಚೆ ಚೀಟಿಯಲ್ಲಿ ಅವರ ಮುಖವನ್ನು ನೋಡುವುದು ಅದ್ಭುತವಾಗಿದೆ’ ಎಂದಿದ್ದಾರೆ.

ಐಬಿಎಸ್‌ಎ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಪ್ರತಿಪಾದನೆ

# ಭದ್ರತಾ ಮಂಡಳಿ: ಸುಧಾರಣೆ ಅನಿವಾರ್ಯ



ಐಬಿಎಸ್‌ಎ ನಾಯಕರ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ, ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಮತ್ತು ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡ ಸಿಲ್ವಾ ಜತೆಯಾಗಿ ಕಾಣಿಸಿಕೊಂಡರು —ಪಿಟಿಐ ಚಿತ್ರ

ಜೊಹಾನಸ್‌ಬರ್ಗ್ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಆಡಳಿತದಲ್ಲಿ ಸುಧಾರಣೆ ತರುವುದು ಒಂದು ಆಯ್ಕೆಯಾಗಿ ಉಳಿದಿಲ್ಲ, ಅದು ಅನಿವಾರ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಬಲವಾಗಿ ಪ್ರತಿಪಾದಿಸಿದರು.

ಭಾರತ–ಬ್ರೆಜಿಲ್–ದಕ್ಷಿಣ ಆಫ್ರಿಕಾ (ಐಬಿಎಸ್‌ಎ) ನಾಯಕರ ಶೃಂಗಸಭೆಯಲ್ಲಿ ಮಾತನಾಡಿದ ಅವರು, ‘ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳ ಆಡಳಿತದಲ್ಲಿ ಬದಲಾವಣೆ ತರಬೇಕೆಂಬ ಸ್ಪಷ್ಟ ಸಂದೇಶವನ್ನು ಈ ಮೂರು ದೇಶಗಳು ಇಡೀ ಜಗತ್ತಿಗೆ ರವಾನಿಸಬೇಕು’ ಎಂದು ಹೇಳಿದರು.

ಜಗತ್ತು ಛಿದ್ರವಾದಂತೆ ಮತ್ತು ವಿಭಜನೆಯಾಗಿರುವಂತೆ ಕಂಡುಬರುವ ಈ ಸಮಯದಲ್ಲಿ, ಐಬಿಎಸ್‌ಎಯು ಒಗ್ಗಟ್ಟು, ಸಹಕಾರ ಮತ್ತು ಮಾನವೀಯತೆಯ ಸಂದೇಶವನ್ನು ನೀಡಬಲ್ಲದು ಎಂದರು.

ಮೂರು ದೇಶಗಳ ನಡುವಿನ ಭದ್ರತಾ ಸಹಕಾರವನ್ನು ಇನ್ನಷ್ಟು ಬಲಪಡಿಸಲು ರಾಷ್ಟ್ರೀಯ ಭದ್ರತಾ ಸಲಹೆಗಾರರ ನಡುವಿನ ಸಭೆಗೆ ಸಾಂಸ್ಥಿಕ ರೂಪ ನೀಡಬೇಕು ಎಂಬ ಪ್ರಸ್ತಾವವನ್ನು ಪ್ರಧಾನಿ ಮುಂದಿಟ್ಟರು.

‘ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ, ನಾವು ಪರಸ್ಪರ ಸಮನ್ವಯದಿಂದ ಮುಂದುವರಿಯಬೇಕು. ಇಂತಹ ಗಂಭೀರ ವಿಷಯದ ಬಗ್ಗೆ ದ್ವಂದ್ವ ನಿಲುವುಗಳಿಗೆ ಯಾವುದೇ ಅವಕಾಶವಿಲ್ಲ’ ಎಂದು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಮತ್ತು ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡ ಸಿಲ್ವಾ ಪಾಲ್ಗೊಂಡಿದ್ದ ಸಭೆಯಲ್ಲಿ ಮೋದಿ ಹೇಳಿದರು.

ಮಾನವ ಕೇಂದ್ರಿತ ಅಭಿವೃದ್ಧಿಯನ್ನು ಖಾತರಿಪಡಿಸುವಲ್ಲಿ ತಂತ್ರಜ್ಞಾನ ನಿರ್ಣಾಯಕ ಪಾತ್ರ ವಹಿಸಲಿದೆ ಎಂಬುದನ್ನು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು. ಯುಪಿಐನಂತಹ ಡಿಜಿಟಲ್ ಪಾವತಿ ವ್ಯವಸ್ಥೆ, ಕೋವಿನ್‌ನಂತಹ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಇ–ವೇದಿಕೆ ಮತ್ತು ಸೈಬರ್ ಭದ್ರತೆಗೆ ಸಂಬಂಧಿಸಿದ ತಂತ್ರಜ್ಞಾನಗಳನ್ನು ಪರಸ್ಪರ ಹಂಚಿಕೊಳ್ಳಲು ಮೂರೂ ದೇಶಗಳು ಸೇರಿ ‘ಐಬಿಎಸ್‌ಎ ಡಿಜಿಟಲ್ ಇನೊವೇಷನ್ ಅಲಯನ್ಸ್’ ಸ್ಥಾಪಿಸುವ ಪ್ರಸ್ತಾಪವನ್ನು ಅವರು ಮಂಡಿಸಿದರು.

ಐಬಿಎಸ್‌ಎ ಎಂಬುದು ಕೇವಲ ಮೂರು ದೇಶಗಳನ್ನು ಒಳಗೊಂಡ ಸಮೂಹ ಅಲ್ಲ. ಬದಲಾಗಿ ಮೂರು ಖಂಡಗಳು, ಮೂರು ಪ್ರಮುಖ ಪ್ರಜಾಪ್ರಭುತ್ವ ರಾಷ್ಟ್ರಗಳು ಮತ್ತು ಮೂರು ಪ್ರಮುಖ ಆರ್ಥಿಕತೆಗಳು ಪರಸ್ಪರ ಸಂಪರ್ಕಿಸುವ ಪ್ರಮುಖ ವೇದಿಕೆಯಾಗಿದೆ. ಐಬಿಎಸ್‌ಎ, ಪರಸ್ಪರರ ಅಭಿವೃದ್ಧಿಗೆ ಪೂರಕವಾಗಬಹುದು ಮತ್ತು ಸುಸ್ಥಿರ ಬೆಳವಣಿಗೆಗೆ ಅತ್ಯುತ್ತಮ ಉದಾಹರಣೆಯಾಗಬಹುದು ಎಂದರು.

ಮುಂದಿನ ವರ್ಷ ಭಾರತದಲ್ಲಿ ನಡೆಯಲಿರುವ ‘ಎ.ಐ ಇಂಪ್ಯಾಕ್ಟ್’ ಶೃಂಗಸಭೆಯಲ್ಲಿ ಪಾಲ್ಗೊಳ್ಳುವಂತೆ ಐಬಿಎಸ್‌ಎ ನಾಯಕರನ್ನು ಮೋದಿ ಅವರು ಆಹ್ವಾನಿಸಿದರು.

## ಎ.ಐ: ಜಾಗತಿಕ ಒಪ್ಪಂದಕ್ಕೆ ಕರೆ

ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ದುರುಪಯೋಗವನ್ನು ತಡೆಗಟ್ಟಲು ಜಾಗತಿಕ ಮಟ್ಟದ ಒಪ್ಪಂದಕ್ಕೆ ಪ್ರಧಾನಿ ಮೋದಿ ಅವರು ಕರೆ ನೀಡಿದ್ದು, ‘ನಿರ್ಣಾಯಕ ತಂತ್ರಜ್ಞಾನಗಳು ಹಣಕಾಸು ಕೇಂದ್ರಿತವಾಗಿರದೆ ಮಾನವ ಕೇಂದ್ರಿತವಾಗಿರಬೇಕು’ ಎಂದು ಪ್ರತಿಪಾದಿಸಿದರು.

ಜಿ–20 ನಾಯಕರ ಶೃಂಗಸಭೆಯಲ್ಲಿ ಭಾನುವಾರ ಎ.ಐ ಮತ್ತು ವಿರಳ ಲೋಹಗಳ ಕುರಿತು ಮಾತನಾಡಿದ ಅವರು, ‘ತಂತ್ರಜ್ಞಾನದ ಅಳವಡಿಕೆಯು ಕೆಲವೇ ರಾಷ್ಟ್ರಗಳಿಗೆ ಸೀಮಿತವಾಗಬಾರದು. ಅದು ‘ಜಾಗತಿಕ’ವಾಗಿರಬೇಕು’ ಎಂದರು.

‘ಭಾರತದ ತಂತ್ರಜ್ಞಾನ ಕ್ಷೇತ್ರದಲ್ಲಿ ಇದೇ ನೀತಿಯನ್ನು ಸಂಯೋಜಿಸಲಾಗಿದ್ದು, ಇದರಿಂದ ಬಾಹ್ಯಾಕಾಶ ಕ್ಷೇತ್ರ, ಎ.ಐ ಅಥವಾ ಡಿಜಿಟಲ್ ಪಾವತಿ ವ್ಯವಸ್ಥೆಯಲ್ಲಿ ಗಮನಾರ್ಹ ಪ್ರಯೋಜನಗಳಿಗೆ ಕಾರಣವಾಗಿದೆ’ ಎಂದು ಹೇಳಿದರು.

‘ಎ.ಐ ತಂತ್ರಜ್ಞಾನವು ಜಾಗತಿಕ ಒಳಿತಿಗಾಗಿ ಬಳಕೆಯಾಗುತ್ತಿದೆ ಮತ್ತು ಅದರ ದುರುಪಯೋಗವನ್ನು ತಡೆಯಲಾಗಿದೆ ಎಂಬುದನ್ನು ನಾವೆಲ್ಲರೂ ಖಚಿತಪಡಿಸಿಕೊಳ್ಳಬೇಕು. ಡೀಪ್‌ಫೇಕ್‌ಗಳು, ಅಪರಾಧ ಮತ್ತು ಭಯೋತ್ಪಾದಕ ಚಟುವಟಿಕೆಗಳಲ್ಲಿ ಎ.ಐ ಬಳಕೆಯ ಮೇಲೆ ಕಟ್ಟುನಿಟ್ಟಿನ ನಿರ್ಬಂಧ ಹೇರಬೇಕು. ಇದಕ್ಕಾಗಿ ಎ.ಐ ತಂತ್ರಜ್ಞಾನದ ಪ್ರಮುಖ ಅಂಶಗಳಿಗೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಒಪ್ಪಂದ ಮಾಡಿಕೊಳ್ಳಬೇಕು’ ಎಂದು ಒತ್ತಾಯಿಸಿದರು.

## ರಾಮಫೋಸಾ ಜತೆ ಮಾತುಕತೆ

ಪ್ರಧಾನಿ ನರೇಂದ್ರ ಮೋದಿ ಅವರು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರನ್ನು ಭಾನುವಾರ ಭೇಟಿಯಾಗಿ ಮಾತುಕತೆ ನಡೆಸಿದರು.

‘ಈ ವೇಳೆ ಇಬ್ಬರೂ ನಾಯಕರು ವ್ಯಾಪಾರ, ಹೂಡಿಕೆ, ಗಣಿಗಾರಿಕೆ, ವಿರಳ ಲೋಹಗಳು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಮತ್ತು ಆಹಾರ ಭದ್ರತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರದ ಕುರಿತು ಚರ್ಚಿಸಿದರು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

‘ಜಿ–20 ನಾಯಕರ ಶೃಂಗಸಭೆಯ ಅಧ್ಯಕ್ಷತೆ ವಹಿಸಿ ಯಶಸ್ವಿಯಾಗಿ ಆಯೋಜಿಸಿರುವುದಕ್ಕೆ ರಾಮಫೋಸಾ ಹಾಗೂ ದಕ್ಷಿಣ ಆಫ್ರಿಕಾವನ್ನು ಪ್ರಧಾನಿ ಅಭಿನಂದಿಸಿದರು’ ಎಂದಿದ್ದಾರೆ.



ಪ್ರಿಯಾಂಕಾ ಮೋಹನ್

## ಧನಂಜಯಗೆ ಜೋಡಿಯಾದ ಪ್ರಿಯಾಂಕಾ

**ಹೇಮಂತ್** ಎಂ.ರಾವ್ ನಿರ್ದೇಶನದ '666 ಆಪರೇಷನ್ ಡ್ರೀಮ್ ಥಿಯೇಟರ್' ಚಿತ್ರಕ್ಕೆ ನಾಯಕಿಯಾಗಿ ಬಹುಭಾಷಾ ನಟಿ ಪ್ರಿಯಾಂಕಾ ಮೋಹನ್ ಆಯ್ಕೆಯಾಗಿದ್ದಾರೆ. ಈ ಚಿತ್ರದಲ್ಲಿ ಡಾಲಿ ಧನಂಜಯಗೆ ಪ್ರಿಯಾಂಕಾ ಜೋಡಿಯಾಗಲಿದ್ದಾರೆ.

ಶಿವರಾಜ್‌ಕುಮಾರ್, ಧನಂಜಯ ನಟನೆಯ ಚಿತ್ರದ ಎರಡು ಹಂತಗಳ ಚಿತ್ರೀಕರಣ ಮುಗಿದಿದ್ದು, ಮೂರನೆ ಹಂತಕ್ಕೆ ಸಿದ್ಧತೆ ನಡೆದಿದೆ. ಪೋಸ್ಟರ್ ಹಾಗೂ ಫಸ್ಟ್‌ಲುಕ್‌ಗಳಿಂದ ಈ ಚಿತ್ರ ಗಮನ ಸೆಳೆದಿತ್ತು.

ಪವರ್ ಸ್ಟಾರ್ ಪವನ್ ಕಲ್ಯಾಣ್, ನಾನಿ, ಧನುಷ್ ಹಾಗೂ ಶಿವಕಾರ್ತಿಕೇಯನ್ ಜತೆ ಅಭಿನಯಿಸಿರುವ ಪ್ರಿಯಾಂಕಾ, 80ರ ದಶಕದ ಬಾಂಡ್- ಸ್ಪೈ ಕಥೆ ಹೊಂದಿರುವ ಈ ಚಿತ್ರತಂಡ ಸೇರ್ಪಡೆಗೊಂಡಿದ್ದಾರೆ.

ತೆಲುಗಿನ 'ಗ್ಯಾಂಗ್‌ಲೀಡರ್', 'ಸರಿಪೋದ ಶನಿವಾರಂ', ತಮಿಳಿನ 'ಡಾಕ್ಟರ್', 'ಕ್ಯಾಪ್ಟನ್ ಮಿಲ್ಲರ್' ಮುಂತಾದ ಸಿನಿಮಾಗಳಲ್ಲಿ ಪ್ರಿಯಾಂಕಾ ಮೋಹನ್ ನಟಿಸಿದ್ದಾರೆ.

'ನಾನು ಶಿವರಾಜ್‌ಕುಮಾರ್ ಅವರ ಸಿನಿಮಾಗಳನ್ನು ನೋಡುತ್ತಾ ಬೆಳೆದಿದ್ದೇನೆ. '666 ಆಪರೇಷನ್ ಡ್ರೀಮ್ ಥಿಯೇಟರ್' ತಂಡದ ಭಾಗವಾಗುವ ನನ್ನ ಕನಸು ನನಸಾಗಿದೆ. ಧನಂಜಯ, ಹೇಮಂತ್ ರಾವ್ ಅವರ ಜತೆ ಕೆಲಸ ಮಾಡುವ ಅವಕಾಶ ಇಷ್ಟು ಬೇಗ ಸಿಗುತ್ತದೆ ಎಂದುಕೊಂಡಿರಲಿಲ್ಲ' ಎಂದಿದ್ದಾರೆ ಪ್ರಿಯಾಂಕಾ.

ಡಾ. ವೈಶಾಕ್ ಜೆ. ಗೌಡ ಅವರು ವೈಶಾಕ್ ಜೆ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ. ಚರಣ್ ರಾಜ್ ಸಂಗೀತ ನಿರ್ದೇಶನ, ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣವಿದೆ. ❖



ಚಿತ್ರತಂಡ

## ಹೊರಬಂತು 'ವಿಧಿ'ಯ ಹಾಡುಗಳು

**ಬಹುತೇಕ** ಹೊಸಬರಿಂದಲೇ ಕೂಡಿರುವ 'ವಿಧಿ' ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಮಲಿಯಣ್ಣ ಹೆಚ್. ನಿರ್ದೇಶನದ ಚಿತ್ರವಿದು. ಅನಸೂಯಮ್ಮ ಮತ್ತು ಟಿ. ಆನಂದ ಬಂಡವಾಳ ಹೂಡಿದ್ದಾರೆ.

'ಪ್ರಸಕ್ತ ಯುವಜನಾಂಗಕ್ಕೆ ಅನ್ವಯವಾಗುವಂಥ ಸಿನಿಮಾ ಇದಾಗಿದೆ. ಬದುಕಲ್ಲಿ ನಾವು ಅಂದುಕೊಂಡಂತೆ ಆಗುವುದಿಲ್ಲ. ಬೇರೆಯದೆ ಆಗುತ್ತದೆ. ಅದನ್ನೇ ವಿಧಿ ಎನ್ನುವುದು. ಸಿನಿಮಾದಲ್ಲಿ ಎರಡು ವಿಶೇಷತೆಗಳಿವೆ. ಒಂದು ನಾಯಕ ಹಾಗೂ ಖಳನಾಯಕ ಚಿತ್ರದಲ್ಲಿ ಎಲ್ಲಿಯೂ ನೇರವಾಗಿ ಭೇಟಿಯಾಗುವುದಿಲ್ಲ. ಇನ್ನೊಂದು ಕ್ಲೈಮಾಕ್ಸ್‌ನಲ್ಲಿ ಇಪ್ಪತ್ತು ನಿಮಿಷಗಳ ಯಾವ ಸಂಭಾಷಣೆಯೂ ಇರುವುದಿಲ್ಲ' ಎಂದರು ನಿರ್ದೇಶಕ.

ಅರುಣ್‌ಕುಮಾರ್ ನಾಯಕ. ಶಕುಂತಲಾ ನಾಯಕಿ. ಬಲ ರಾಜವಾಡಿ, ಕೇಶವಮೂರ್ತಿ, ಚಂದ್ರಶೇಖರ್ ಮುಂತಾದವರು ನಟಿಸಿದ್ದಾರೆ. ಮೂರು ಹಾಡುಗಳಿಗೆ ವಿ.ಮನೋಹರ್ ಸಾಹಿತ್ಯ, ಸಂಗೀತವಿದೆ. ಸೂರ್ಯೋದಯ ಅವರ ಛಾಯಾಚಿತ್ರಗ್ರಹಣ, ಅಭಿಷೇಕ್ ಸಂಕಲನವಿದೆ. ❖



ರಮ್ಯಾ, ಉಪೇಂದ್ರ

## ತೆರೆಗೆ ಬರಲು ಸಜ್ಜಾದ 'ರಕ್ತ ಕಾಶ್ಮೀರ'

**ಎಸ್.ವಿ.ರಾಜೇಂದ್ರಸಿಂಗ್ ಬಾಬು** ನಿರ್ದೇಶನದ 'ರಕ್ತ ಕಾಶ್ಮೀರ' ಚಿತ್ರ ಶೀಘ್ರದಲ್ಲೇ ತೆರೆಗೆ ಬರಲಿದೆ. ಉಪೇಂದ್ರ ಹಾಗೂ ರಮ್ಯಾ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ.

'ಸಾಮಾಜಿಕ ಸಂದೇಶವುಳ್ಳ ಚಿತ್ರ. ಭಯೋತ್ಪಾದನೆಯ ವಿರುದ್ದ ಸಮರ ಸಾರುವ ಚಿತ್ರವೂ ಹೌದು. ಉಪೇಂದ್ರ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಾಯಕ ಮಕ್ಕಳಿಗೆ ಭಯೋತ್ಪಾದನೆಯ ವಿರುದ್ಧ ಹೋರಾಡುವುದು ಹೇಗೆ ಎಂಬುದನ್ನು ತರಬೇತಿ ನೀಡಿರುತ್ತಾನೆ. ಮಕ್ಕಳು ಹೇಗೆ ಭಯೋತ್ಪಾದಕರಿಂದ ಪಾರಾಗುತ್ತಾರೆ ಹಾಗೂ ನಗರದಲ್ಲಿ ನಡೆಯಬಹುದಾದ ಭಾರಿ ಸ್ಫೋಟವನ್ನು ಹೇಗೆ ತಪಿಸುತ್ತಾರೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ' ಎಂದರು ರಾಜೇಂದ್ರಸಿಂಗ್ ಬಾಬು.

'ನಾಗರಹೊಳೆ' ಚಿತ್ರದ ನಂತರ ಮಕ್ಕಳನ್ನು ಪ್ರಧಾನವಾಗಿಟ್ಟುಕೊಂಡು ಮಾಡಿರುವ ಚಿತ್ರವಿದು. ಇದರಲ್ಲಿ ನೂರಕ್ಕೂ ಅಧಿಕ ಮಕ್ಕಳು ಅಭಿನಯಿಸಿದ್ದಾರೆ. ಪ್ರಮುಖಪಾತ್ರದಲ್ಲಿ ಏಳು ಮಕ್ಕಳು ನಟಿಸಿದ್ದಾರೆ. ಚಿತ್ರದ ಹಾಡೊಂದರಲ್ಲಿ ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್, ಶಿವರಾಜಕುಮಾರ್, ಪುನೀತ್ ರಾಜಕುಮಾರ್, ಜಗ್ಗೇಶ್, ಉಪೇಂದ್ರ, ರಮೇಶ್ ಅರವಿಂದ್, ದರ್ಶನ್, ಜೈಜಗದೀಶ್, ಆದಿತ್ಯ, ರಾಕ್‌ಲೈನ್ ವೆಂಕಟೇಶ್ ಸೇರಿದಂತೆ ಕನ್ನಡದ ದಿಗ್ಗಜ ನಾಯಕರು ಬರುತ್ತಾರೆ. ಈ ಹಾಡನ್ನು ಹಲವು ವರ್ಷಗಳ ಹಿಂದೆ ಚಿತ್ರೀಕರಿಸಲಾಗಿತ್ತು. ಚಿತ್ರವನ್ನು ಸದ್ಯದಲ್ಲೇ ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ. ನನ್ನ ನಿರ್ದೇಶನ ಮತ್ತೊಂದು ಚಿತ್ರ 'ವೀರ ಕಂಬಳ' ಕೂಡ ಜನವರಿಯಲ್ಲಿ ಬಿಡುಗಡೆಯಾಗಲಿದೆ' ಎಂದರು ಬಾಬು. ❖

### ಚಿಟಿಕೆ ಸುದ್ದಿ

## ಶಬರಿಮಲೆ: ಮಕ್ಕಳ ಕೈಗೆ ಬ್ಯಾಂಡ್

ಪತ್ತನಂತಿಟ್ಟ(ಪಿಟಿಐ): ಶಬರಿಮಲೆ ಯಾತ್ರೆ ಸಂದರ್ಭದಲ್ಲಿ ಜನದಟ್ಟಣೆ ಮಧ್ಯೆ ಮಕ್ಕಳು ಕಾಣೆಯಾಗುವುದನ್ನು ತಪ್ಪಿಸಲು ಸುರಕ್ಷಿತ 'ಕೈಪಟ್ಟಿ'ಯನ್ನು (ಆರ್ಮ್ ಬ್ಯಾಂಡ್) ಪೊಲೀಸರು ಪರಿಚಯಿಸಿದ್ದಾರೆ.

ಪೊಲೀಸರ ಪ್ರಕಾರ, 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲ ಮಕ್ಕಳಿಗೆ ಪಂಪಾ ಬಳಿ ಈ ಬ್ಯಾಂಡ್ ನೀಡಲಾಗುತ್ತದೆ. ಅದರಲ್ಲಿ ಮಕ್ಕಳ ಹೆಸರು, ಪೋಷಕರ ಮೊಬೈಲ್ ಸಂಖ್ಯೆಯನ್ನು ಮುದ್ರಿಸಲಾಗಿರುತ್ತದೆ. ಮಕ್ಕಳ ಕುರಿತ ಮಾಹಿತಿ ಇರುವ ಕ್ಯುಆರ್ ಕೋಡ್ ಅನ್ನೂ ಅದು ಒಳಗೊಂಡಿರುತ್ತದೆ. ಯಾತ್ರೆ ಮುಗಿಯುವವರೆಗೂ ಕೈಪಟ್ಟಿಯನ್ನು ತೆಗೆಯದಂತೆ ನೋಡಿಕೊಳ್ಳಿ' ಎಂದು ಪೋಷಕರಿಗೆ ಪೊಲೀಸರು ಮನವಿ ಮಾಡಿದ್ದಾರೆ.

## 'ಜಗತ್ತಿನ ಗೊಂದಲಗಳಿಗೆ ಗೀತೆಯಲ್ಲಿ ಉತ್ತರ'

ಲಖನೌ (ಪಿಟಿಐ): 'ಭಗವದ್ಗೀತೆಯು ಎಲ್ಲ ಸಮಸ್ಯೆಗಳ ಪರಿಹಾರಕ್ಕೂ ಮಾರ್ಗದರ್ಶನ ನೀಡುತ್ತದೆ. ಗೀತೆಯ ಉಪದೇಶಗಳು ಕಾಲಾತೀತವಾದವು' ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅಭಿಪ್ರಾಯಪಟ್ಟರು.



ಮೋಹನ್ ಭಾಗವತ್

ಇಲ್ಲಿ ಭಾನುವಾರ ನಡೆದ 'ಗೀತೆ ಪ್ರೇರಣೆ ಮಹೋತ್ಸವ' ಕಾರ್ಯಕ್ರಮದಲ್ಲಿ ಮಾತನಾಡಿ, 'ಗೀತೆಯ 700 ಶ್ಲೋಕಗಳನ್ನು ಓದಿದರೆ ಸಾಲುವುದಿಲ್ಲ. ಅವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ಕುರುಕ್ಷೇತ್ರದಲ್ಲಿನ ಅರ್ಜುನನ ಸಂದಿಗ್ಧ ಪರಿಸ್ಥಿತಿಯನ್ನು ಮತ್ತು ಇಂದಿನ ಜಗತ್ತಿನ ಸಂದರ್ಭವನ್ನು ಹೋಲಿಸಿ ಮಾತನಾಡಿ, 'ಇಂದು ಜಗತ್ತು ಅಭಿವೃದ್ಧಿ ಹೊಂದಿದೆ ನಿಜ. ಆದರೂ ಅದು ಎಲ್ಲೋ ಕಳೆದು ಹೋಗಿದೆ, ಅದಕ್ಕೆ ದಿಕ್ಕು ತೋಚದಂತಾಗಿದೆ. ಎಲ್ಲ ಸೌಕರ್ಯಗಳಿವೆ ನಿಜ. ಆದರೆ ಶಾಂತಿ ಇಲ್ಲ, ಸ್ಪಷ್ಟತೆ ಇಲ್ಲ' ಎಂದು ವಿಶ್ಲೇಷಿಸಿದರು.

## ಶಸ್ತ್ರಾಸ್ತ್ರ ಅಕ್ರಮ ತಯಾರಿಕೆ ಜಾಲ ಪತ್ತೆ

ಪುಣೆ (ಪಿಟಿಐ): ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶ ಪೊಲೀಸರು ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ, ಶಸ್ತ್ರಾಸ್ತ್ರ ಅಕ್ರಮ ತಯಾರಿಕೆ ಹಾಗೂ ಸಾಗಾಟದ ಜಾಲವನ್ನು ಭೇದಿಸಿದ್ದಾರೆ. 36 ಜನರನ್ನು ಬಂಧಿಸಿದ್ದು, ಅಪಾರ ಪ್ರಮಾಣದ ಶಸ್ತ್ರಾಸ್ತ್ರ ವಶಪಡಿಸಿಕೊಂಡಿದ್ದಾರೆ.

ಮಧ್ಯಪ್ರದೇಶದ ಬರ್ವಾನಿ ಜಿಲ್ಲೆಯ ಉಮಾರ್ತಿ ಗ್ರಾಮದಲ್ಲಿ ಈ ಅಕ್ರಮ ಚಟುವಟಿಕೆ ನಡೆಯುತ್ತಿತ್ತು. ಈ ಜಾಲವನ್ನು ಪತ್ತೆ ಹಚ್ಚಿದ ಬಳಿಕ, 105 ಮಂದಿ ಪೊಲೀಸ್ ಸಿಬ್ಬಂದಿಯ ತಂಡವು ಕಾರ್ಯಾಚರಣೆ ನಡೆಸಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಕಾರ್ಯಾಚರಣೆ ವೇಳೆ, ಶಸ್ತ್ರಾಸ್ತ್ರ ತಯಾರಿಸುತ್ತಿದ್ದ 50 ಘಟಕಗಳನ್ನು ನಾಶಪಡಿಸಲಾಗಿದೆ.

ಕಳೆದ ಮೂರು ವಾರಗಳಲ್ಲಿ ಪುಣೆಯಲ್ಲಿ 21 ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣಗಳಲ್ಲಿ ಬಂಧಿತರಾದ ಆರೋಪಿಗಳ ವಿಚಾರಣೆಯಲ್ಲಿ, ಮಧ್ಯಪ್ರದೇಶದಿಂದ ಇಲ್ಲಿಗೆ ಶಸ್ತ್ರಾಸ್ತ್ರ ಸಾಗಿಸಲಾಗುತ್ತಿದೆ ಎಂಬುದು ಗೊತ್ತಾಯಿತುಎಂದು ಅಧಿಕಾರಿಗಳು ತಿಳಿಸಿದರು.

## 'ಸುಪ್ರೀಂ'ನಿಂದ ಸಮತೋಲಿತ ತೀರ್ಪು'

### ಮಸೂದೆಗಳಿಗೆ ಅಂಕಿತ ಹಾಕುವ ವಿಚಾರ ಕುರಿತು ನಿರ್ಗಮಿತ ಸಿಜೆಐ ಪ್ರತಿಕ್ರಿಯೆ

ನವದೆಹಲಿ(ಪಿಟಿಐ): 'ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಹಾಗೂ ರಾಷ್ಟ್ರಪತಿಯವರು ಅಂಕಿತ ಹಾಕಲು ಕಾಲಮಿತಿ ನಿಗದಿ ಮಾಡುವ ವಿಚಾರಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಸಮತೋಲಿತ ತೀರ್ಪು ನೀಡಿದೆ' ಎಂದು ನಿರ್ಗಮಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಭಾನುವಾರ ಹೇಳಿದ್ದಾರೆ.

'ಮಸೂದೆಗಳಿಗೆ ಅಂಕಿತ ಹಾಕುವ ವಿಚಾರದಲ್ಲಿ ರಾಜ್ಯಪಾಲರು ಹಾಗೂ ರಾಷ್ಟ್ರಪತಿಯವರಿಗೆ ಕಾಲಮಿತಿಯನ್ನು ಸುಪ್ರೀಂ ಕೋರ್ಟ್ ನಿಗದಿ ಮಾಡಿಲ್ಲ. ಇದಕ್ಕೆ ಸಂವಿಧಾನವೂ ಅವಕಾಶ ನೀಡುವುದಿಲ್ಲ. ಅದೇ ರೀತಿ, ರಾಜ್ಯಪಾಲರು ಮಸೂದೆಗಳಿಗೆ ಅಂಕಿತ ಹಾಕದೇ ಅನಿರ್ದಿಷ್ಟಾವಧಿವರೆಗೆ ಸುಮ್ಮನೆ ಕೂರುವಂತೆಯೂ ಇಲ್ಲ ಎಂಬುದನ್ನು ತೀರ್ಪಿನಲ್ಲಿ ಸ್ಪಷ್ಟಪಡಿಸಲಾಗಿದೆ' ಎಂದು ಹೇಳಿದ್ದಾರೆ.



> ಪ್ರಸ್ತುತ ದಿನಗಳಲ್ಲಿ ನ್ಯಾಯಮೂರ್ತಿಯೊಬ್ಬರು ಸರ್ಕಾರದ ವಿರುದ್ಧ ತೀರ್ಪು ನೀಡಿದಾಗ ಮಾತ್ರ ಅವರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನಲಾಗುತ್ತಿದೆ. ಇದು ಸರಿಯಲ್ಲ
> **ಬಿ.ಆರ್.ಗವಾಯಿ** ನಿರ್ಗಮಿತ ಸಿಜೆಐ

ಭಾನುವಾರ ನಿವೃತ್ತರಾಗಿರುವ ಅವರು, ತಮ್ಮ ಗೃಹ ಕಚೇರಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಶುಕ್ರವಾರ ಅವರ ಕೆಲಸದ ಕೊನೆಯ ದಿನವಾಗಿತ್ತು.

'ಸಂವಿಧಾನವು ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ವಿಭಜನೆ ಕುರಿತು ಹೇಳಿದೆ. ಆದರೆ, ಕಾಲಮಿತಿಯನ್ನು ಉಲ್ಲೇಖ ಮಾಡದ ಕಡೆಗಳಲ್ಲಿ, ಅದನ್ನು ಗುರುತಿಸಿ ಜಾರಿಗೊಳಿಸುವುದಕ್ಕೆ ಸಂವಿಧಾನ ಅವಕಾಶ ನೀಡಿಲ್ಲ' ಎಂದು ಅವರು ಹೇಳಿದ್ದಾರೆ.

'ರಾಜ್ಯಪಾಲರಿಗೆ ಗಡುವು ವಿಧಿಸುವ ಅವಕಾಶವನ್ನು ಸುಪ್ರೀಂ ಕೋರ್ಟ್ ದುರ್ಬಲಗೊಳಿಸಿದೆ ಎಂಬ ಟೀಕೆಗಳು ವ್ಯಕ್ತವಾಗಿವೆಯಲ್ಲ' ಎಂಬ ಪ್ರಶ್ನೆಗೆ, 'ಕಾಲಮಿತಿ ವಿಧಿಸುವುದಕ್ಕೆ ಸಂವಿಧಾನ ಅವಕಾಶ ನೀಡುವುದಿಲ್ಲ. ಆದರೆ, ರಾಜ್ಯಪಾಲರು ಅಂಕಿತ ಹಾಕುವ ವಿಚಾರದಲ್ಲಿ ಅನಿರ್ದಿಷ್ಟ ಅವಧಿಗೆ ಸುಮ್ಮನೆ ಕೂರುವಂತಿಲ್ಲ ಎಂದು ಹೇಳಿದ್ದೇವೆ. ವಿಪರೀತ ವಿಳಂಬ ಕಂಡುಬಂದ ಸಂದರ್ಭಗಳಲ್ಲಿ ನ್ಯಾಯಾಲಯವು ಪರಿಶೀಲನೆ ನಡೆಸುವುದಕ್ಕೆ ಅವಕಾಶ ಇದೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ' ಎಂದು ಉತ್ತರಿಸಿದರು.

**ನಕಾರ:** ನ್ಯಾಯಮೂರ್ತಿ ಯಶವಂತ ವರ್ಮಾ ಅವರ ವಿರುದ್ಧದ ಆರೋಪಗಳ ಕುರಿತು ಪ್ರತಿಕ್ರಿಯೆ ನೀಡಲು ಸಿಜೆಐ ಗವಾಯಿ ನಿರಾಕರಿಸಿದರು.

'ಈ ವಿಷಯವು ಸಂಸದೀಯ ಸಮಿತಿ ಮುಂದಿರುವ ಕಾರಣ ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

ನ್ಯಾಯಾಂಗವು ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು ಎಂಬ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಸಾರ್ವಜನಿಕರಲ್ಲಿ ನ್ಯಾಯಾಂಗದ ಕುರಿತು ನಂಬಿಕೆ ಉಳಿಸಿಕೊಳ್ಳಲು ಇದು ಅಗತ್ಯ' ಎಂದರು.

### ಕೊಲಿಜಿಯಂ ವ್ಯವಸ್ಥೆಯ ಸಮರ್ಥನೆ

ಉನ್ನತ ನ್ಯಾಯಾಲಯಗಳಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಕೊಲಿಜಿಯಂ ವ್ಯವಸ್ಥೆಯನ್ನು ಸುಪ್ರೀಂ ಕೋರ್ಟ್‌ನ ನಿರ್ಗಮಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಸಮರ್ಥಿಸಿಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನ್ಯಾಯಾಂಗವು ಸ್ವತಂತ್ರವಾಗಿ ಕಾರ್ಯ ನಿರ್ವಸುವುದಕ್ಕೆ ಕೊಲಿಜಿಯಂ ವ್ಯವಸ್ಥೆ ನೆರವಾಗುತ್ತದೆ' ಎಂದಿದ್ದಾರೆ.

'ಯಾವ ವ್ಯವಸ್ಥೆ ಕೂಡ ಪರಿಪೂರ್ಣವಲ್ಲ. ವಕೀಲರು ನ್ಯಾಯಮೂರ್ತಿಗಳ ಮುಂದೆ ವಾದ ಮಂಡಿಸುತ್ತಾರೆಯೇ ಹೊರತು, ಪ್ರಧಾನಿ ಅಥವಾ ಕಾನೂನು ಸಚಿವರ ಮುಂದೆ ಅಲ್ಲ. ಹೀಗಾಗಿ ನ್ಯಾಯಮೂರ್ತಿಗಳ ನೇಮಕಕ್ಕೆ ಕೊಲಿಜಿಯಂ ವ್ಯವಸ್ಥೆ ಅಗತ್ಯ' ಎಂದರು.

'ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಕಲ್ಪಿಸುವ ವೇಳೆ ಕೆನೆಪದರ ನೀತಿಯನ್ನು ಅನ್ವಯಿಸಬೇಕು' ಎಂದು ಪ್ರತಿಪಾದಿಸಿದ ಅವರು, 'ನನ್ನ ಅವಧಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಮಹಿಳಾ ನ್ಯಾಯಮೂರ್ತಿಗಳನ್ನು ನೇಮಕ ಮಾಡದೇ ಇರುವುದಕ್ಕೆ ವಿಷಾದ ಇದೆ' ಎಂದು ಹೇಳಿದರು.

'ನಿವೃತ್ತಿ ನಂತರ, ಸರ್ಕಾರ ನೀಡುವ ಯಾವುದೇ ಹುದ್ದೆಯನ್ನು ಸ್ವೀಕರಿಸುವುದಿಲ್ಲ ಎಂದು ಅಧಿಕಾರ ಸ್ವೀಕರಿಸಿದ ದಿನವೇ ನಾನು ಹೇಳಿದ್ದೆ. ಈಗ ನಿವೃತ್ತನಾಗಿರುವೆ. ಮುಂದಿನ 9–10 ದಿನಗಳ ವಿಶ್ರಾಂತಿ ಬಳಿಕ ಹೊಸ ಇನಿಂಗ್ಸ್ ಆರಂಭವಾಗುವುದು' ಎಂದರು.

## ನ್ಯಾ. ಸೂರ್ಯಕಾಂತ್ ಇಂದು ಪ್ರಮಾಣ

**ಒಂದನೇ ಪುಟದಿಂದ...**

ಹರಿಯಾಣದ ಹಿಸ್ಸಾರ್‌ನಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ ಸೂರ್ಯಕಾಂತ್ ಅವರು, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಯಾಗಿ ಹಾಗೂ ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಕೆಲಸ ಮಾಡಿದ್ದಾರೆ. ಬಳಿಕ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು.

ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದು ಹಾಗೂ ಬಿಹಾರದಲ್ಲಿ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ ಕುರಿತ ಪ್ರಕರಣ ಸೇರಿದಂತೆ ಹಲವು ಮಹತ್ವದ ತೀರ್ಪು ನೀಡಿದ ಪೀಠಗಳಲ್ಲಿ ಸೂರ್ಯಕಾಂತ್ ಇದ್ದರು.

## ಸನಾತನ ಧರ್ಮ ಪ್ರಚಾರಕ್ಕೆ ಸಂಚಾಲಕರು

ಪಟ್ನಾ (ಪಿಟಿಐ): ರಾಜ್ಯದಾದ್ಯಂತ ಸನಾತನ ಧರ್ಮವನ್ನು ಪ್ರಚಾರ ಮಾಡಲು ಎಲ್ಲ 38 ಜಿಲ್ಲೆಗಳಲ್ಲಿ ಸಂಚಾಲಕರನ್ನು ನೇಮಿಸಲು ನೂತನ ಸರ್ಕಾರ ಮುಂದಾಗಿದೆ. ಬಿಹಾರ ರಾಜ್ಯ ಧಾರ್ಮಿಕ ಟ್ರಸ್ಟ್ ಮಂಡಳಿ (ಬಿಎಸ್‌ಆರ್‌ಟಿಸಿ) ಅಡಿ ಬರುವ ದೇವಸ್ಥಾನಗಳ ಪ್ರಧಾನ ಅರ್ಚಕರನ್ನು ಸಂಚಾಲಕರನ್ನಾಗಿ ನೇಮಿಸಲಾಗುವುದು.

'ಮುಂದಿನ ಒಂದು ಅಥವಾ ಎರಡು ದಿನಗಳಲ್ಲಿ ಸಂಚಾಲಕರ ನೇಮಕ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಮಂಡಳಿಯ ಮುಖ್ಯಸ್ಥ ರಣಬೀರ್ ನಂದನ್ ಹೇಳಿದರು.

**ಸಂಚಾಲಕರ ಕೆಲಸವೇನು?**

- ಎಲ್ಲ ನೋಂದಾಯಿತ ದೇವಸ್ಥಾನಗಳಲ್ಲಿ ಸಾಂಪ್ರದಾಯಿಕವಾದ ದೈಹಿಕ ಕಸರತ್ತುಗಳನ್ನು ನಡೆಸಲು ಅನುಕೂಲವಾಗುವಂತೆ ಅಖಾಡಗಳನ್ನು ನಿರ್ಮಿಸುವಂತೆ ನೋಡಿಕೊಳ್ಳಬೇಕು
- ಮಠಗಳು, ದೇವಸ್ಥಾನಗಳು ಸಾಮಾಜಿಕ ಸುಧಾರಣೆ ಮಾಡುತ್ತಿವೆಯೇ ಎಂಬುದನ್ನು ಗಮನಿಸಬೇಕು. ಸನಾತನ ಧರ್ಮದ ಪೂಜೆಗಳು, ಹಬ್ಬಗಳು, ಮೌಲ್ಯಗಳ ಬಗ್ಗೆ ಅರಿವು ಮೂಡಿಸಬೇಕು
- ಪ್ರತೀ ಪೂರ್ಣಿಮೆ ಮತ್ತು ಅಮಾವಾಸ್ಯೆಯಲ್ಲಿ ದೇವಸ್ಥಾನಗಳಲ್ಲಿ 'ಸತ್ಯನಾರಾಯಣ ಕಥೆ' ಮತ್ತು 'ಭಗವತಿ ಪೂಜೆ' ನಡೆಯುವಂತೆ ನೋಡಿಕೊಳ್ಳಬೇಕು. ಈ ಪೂಜೆಗಳ ಮಹತ್ವದ ಕುರಿತು ಜನರಲ್ಲಿ ಅರಿವು ಮೂಡಿಸಬೇಕು. ಈ ಪೂಜೆಗಳನ್ನು ಜನರು ತಮ್ಮ ಮನೆಗಳಲ್ಲಿಯೂ ಮಾಡುವಂತೆ ಪ್ರೇರೇಪಿಸಬೇಕು.

## 'ಮಮತಾ ಆರೋಪ: ಪರಿಶೀಲಿಸಿ'

### ಬಿಎಲ್‌ಒ 'ಆತ್ಮಹತ್ಯೆ' ವಿವಾದ: ಬಂಗಾಳ ರಾಜ್ಯಪಾಲರ ಹೇಳಿಕೆ

**ಕೋಲ್ಕತ್ತ (ಪಿಟಿಐ):** ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಎತ್ತಿರುವ ಕಳವಳದ ಬಗ್ಗೆ ವಿವರವಾಗಿ ಪರಿಶೀಲಿಸಬೇಕು ಎಂದು ರಾಜ್ಯಪಾಲ ಸಿ.ವಿ.ಆನಂದ ಬೋಸ್ ಹೇಳಿದ್ದಾರೆ.

ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಅರೆಕಾಲಿಕ ಶಿಕ್ಷಕಿ ರಿಂಕೂ ತರಫ್ದಾರ್ (52) ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. 'ಎಸ್‌ಐಆರ್ ಕೆಲಸದ ಹೊರೆಯೇ ಸಾವಿಗೆ ಕಾರಣ' ಎಂದು ಮೃತರ ಕುಟುಂಬವು ಆರೋಪಿಸಿತ್ತು. ಬಿಎಲ್‌ಒ ಬರೆದಿಟ್ಟಿದ್ದಾರೆ ಎನ್ನಲಾದ ಮರಣ ಪತ್ರವನ್ನು ಮಮತಾ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದರು. ಅದರ ಬೆನ್ನಲ್ಲೇ ರಾಜ್ಯಪಾಲರ ಹೇಳಿಕೆ ಹೊರಬಿದ್ದಿದೆ. 'ಇಂತಹ ಸಂದರ್ಭಗಳಲ್ಲಿ, ಯಾವುದೇ ಆಲೋಚನೆ ಮಾಡದೆ ಥಟ್ಟನೆ ಪ್ರತಿಕ್ರಿಯೆಗಳನ್ನು ನೀಡದಿರುವುದೇ ಉತ್ತಮ. ಮುಖ್ಯಮಂತ್ರಿಗಳು ಎತ್ತಿರುವ ವಿಷಯದ ಕುರಿತು ಆಳವಾದ ಪರಿಶೀಲನೆ ಅಗತ್ಯ' ಎಂದು ಬೋಸ್ ಅವರು ರಾಜಭವನದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಎಸ್‌ಐಆರ್ ಕಾರಣದಿಂದ ರಾಜ್ಯದಲ್ಲಿ ಬಿಎಲ್‌ಒಗಳೂ ಸೇರಿದಂತೆ ಇಲ್ಲಿಯವರೆಗೆ 30ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ ಎಂದು ಟಿಎಂಸಿ ಆರೋಪಿಸಿದೆ. ಈ ಸಾವುಗಳ ಹೊಣೆಯನ್ನು ಆಯೋಗ ಹೊರಬೇಕು ಎಂದು ಒತ್ತಾಯಿಸಿದೆ.

### 60 ಬಿಎಲ್‌ಒಗಳ ವಿರುದ್ಧ ಪ್ರಕರಣ

**ನೊಯಿಡಾ:** ಎಸ್‌ಐಆರ್ ಪ್ರಕ್ರಿಯೆ ಕೈಗೊಳ್ಳುವಲ್ಲಿ ನಿರ್ಲಕ್ಷ್ಯ ತೋರಿದ ಮತ್ತು ಸೂಚನೆಗಳನ್ನು ಪಾಲಿಸದ ಆರೋಪದಲ್ಲಿ 60 ಬಿಎಲ್‌ಒಗಳು ಮತ್ತು ಏಳು ಮೇಲ್ವಿಚಾರಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಗೌತಮ ಬುದ್ಧ ನಗರದ ಜಿಲ್ಲಾಧಿಕಾರಿ ಮೇಧಾ ರೂಪಂ ಅವರು ಎಫ್‌ಐಆರ್ ದಾಖಲಿಸಲು ಶನಿವಾರ ಆದೇಶಿಸಿದ್ದಾರೆ. ಅವರು ಹೊರಡಿಸಿದ ಆದೇಶದಂತೆ 1950ರ ಪ್ರಜಾ ಪ್ರತಿನಿಧಿ ಕಾಯ್ದೆಯ ಸೆಕ್ಷನ್ 32ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

### ಬಿಎಲ್‌ಒಗೆ ಬೆದರಿಕೆ: ವ್ಯಕ್ತಿಯ ಬಂಧನ

**ಕೋಲ್ಕತ್ತ (ಪಿಟಿಐ):** ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಬೂತ್ ಮಟ್ಟದ ಅಧಿಕಾರಿಗೆ (ಬಿಎಲ್‌ಒ) ಬೆದರಿಕೆ ಹಾಕಿದ ಆರೋಪದಲ್ಲಿ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿದೆ.

ಆರೋಪಿಯನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಕಾರ್ಯಕರ್ತ ಜಮೀರುಲ್ ಇಸ್ಲಾಂ ಮುಲ್ಲಾ ಎಂದು ಗುರುತಿಸಲಾಗಿದೆ. 97 ವರ್ಷದ ವ್ಯಕ್ತಿಯೊಬ್ಬರ ಹೆಸರು 2002ರಲ್ಲಿನ ಮತದಾರರ ಪಟ್ಟಿಯಲ್ಲಿ ಕಾಣಿಸದೇ ಇರುವ ವಿಚಾರದಲ್ಲಿ ಜಮೀರುಲ್ ಅವರು ಬಿಎಲ್‌ಒ ಜತೆ ಜಗಳವಾಡಿದ್ದಾರೆ. ಆ ಬಳಿಕ ದೂರವಾಣಿ ಕರೆ ಮಾಡಿ 'ಗಂಭೀರ ಪರಿಣಾಮ ಎದುರಿಸಬೇಕಾದೀತು' ಎಂದು ಬೆದರಿಕೆ ಹಾಕಿದ್ದಾಗಿ ಆರೋಪಿಸಲಾಗಿದೆ.

ಬಿಎಲ್‌ಒ ದೀಪಕ್ ಮಹಾತೊ ಈ ಸಂಬಂಧ ನಜಾತ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಅದರ ಬೆನ್ನಲ್ಲೇ ಬಂಧನ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಜಮೀರುಲ್ ಅವರನ್ನು ಟಿಎಂಸಿಯು ಬೂತ್ ಮಟ್ಟದ ಏಜೆಂಟ್ ಆಗಿ ನೇಮಿಸಿತ್ತು ಎಂದು ಸ್ಥಳೀಯರು ಹೇಳಿದ್ದಾರೆ.

## ಮತ್ತೆ ಪ್ರಚಾರ ಆರಂಭಿಸಿದ ವಿಜಯ್

**ಚೆನ್ನೈ (ಪಿಟಿಐ):** 'ಎಲ್ಲ ಜನರಿಗೂ ಕನಿಷ್ಠ ಪದವಿವರೆಗಿನ ಶಿಕ್ಷಣ, ಸ್ವಂತ ಮನೆ, ಬೈಕು ಮತ್ತು ಕಾರು ಸಿಗುವ ಹಾಗೆ ಮಾಡುವುದೇ ಟಿವಿಕೆ ಪಕ್ಷದ ಗುರಿ' ಎಂದು ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮುಖ್ಯಸ್ಥ, ನಟ ವಿಜಯ್ ಹೇಳಿದರು. ಎಂ.ಜಿ. ರಾಮಚಂದ್ರನ್ ಅವರ ಪರಂಪರೆಯ ಕುರಿತು ಅವರ ಸಿನಿಮಾಗಳ ಸಂಭಾಷಣೆಗಳನ್ನು ಹೇಳಿ, ಪಕ್ಷದ ಗುರಿಗಳ ಬಗ್ಗೆ ಮಾತನಾಡಿದರು.



ವಿಜಯ್

ಕಾಂಚೀಪುರಂ ಜಿಲ್ಲೆಯ ಸುಂಗುವರ್‌ಛತ್ರಂನ ಕಾಲೇಜೊಂದರ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರೂರಿನಲ್ಲಿ ನಡೆದಿದ್ದ ಕಾಲ್ತುಳಿತ ಘಟನೆಯ ಬಳಿಕ ವಿಜಯ್ ಅವರು ಮೊದಲ ಬಾರಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು, 2026ರ ಚುನಾವಣೆಗಾಗಿ 2 ತಿಂಗಳ ಬಳಿಕ ಮತ್ತೆ ಪ್ರಚಾರ ಆರಂಭಿಸಿದರು.'ನಾವು ಅಧಿಕಾರಕ್ಕೆ ಬಂದರೆ; ಇಲ್ಲ ನೀವು ನಮ್ಮನ್ನು ಅಧಿಕಾರಕ್ಕೆ ತಂದೇ ತರುತ್ತೀರಿ ಅಲ್ಲವೇ? ಚುನಾವಣೆ ಘೋಷಣೆಯಾದ ಬಳಿಕ ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡುತ್ತೇವೆ. ಆದರೆ, ಇಂದು ನಾನು ಕೆಲವು ವಿಚಾರಗಳನ್ನು ಹಂಚಿಕೊಳ್ಳುತ್ತೇನೆ' ಎಂದರು.

'ನಮ್ಮ ಗುರಿಯನ್ನು ಸಾಧಿಸಲು ಆರ್ಥಿಕ ಅಭಿವೃದ್ಧಿ ಮಾಡಬೇಕು. ಉದ್ಯೋಗ ಸೃಷ್ಟಿಸಬೇಕು. ಪಠ್ಯಕ್ರಮ ವನ್ನು ಬದಲಾಯಿಸಬೇಕು. ಕಾಂಚೀಪುರದಲ್ಲಿ ವಿಶ್ವದರ್ಜೆಯ ರೇಷ್ಮೆ ಮತ್ತು ಕೈಮಗ್ಗದ ಬಟ್ಟೆಗಳನ್ನು ತಯಾರಿಸುತ್ತೇವೆ. ಆದರೆ, ಸರ್ಕಾರವು ನೇಕಾರರ ಕಷ್ಟಗಳನ್ನು ನಿರ್ಲಕ್ಷಿಸಿದೆ' ಎಂದರು. 'ಪರಂದೂರಿನಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುವುದಕ್ಕೆ ರೈತರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಈ ರೈತರನ್ನು ಬೆಂಬಲಿಸುವುದನ್ನು ಮುಂದುವರಿಸುತ್ತೇವೆ. ಮಹಿಳೆಯರ ಸುರಕ್ಷತೆಯು ನಮಗೆ ಪ್ರಥಮ ಆದ್ಯತೆ ಆಗಿರಲಿದೆ. ಪ್ರವಾಹ ಬಂದಾಗ ಇಂತಿಷ್ಟು ಹಣ ಬಿಡುಗಡೆ ಮಾಡುವುದಲ್ಲ. ಬೆಳೆಗಳ, ರೈತರ, ಜನರ ರಕ್ಷಣೆಗೆ ಯೋಜನೆ ರೂಪಿಸಬೇಕು' ಎಂದರು.

## ಬಾಂಗ್ಲಾಕ್ಕೆ ಮರಳುತ್ತಿರುವ 'ಅಕ್ರಮ' ವಲಸಿಗರು

ಹಕೀಂಪುರ (ಪಶ್ಚಿಮ ಬಂಗಾಳ) (ಪಿಟಿಐ): ಭಾರತಕ್ಕೆ ಅಕ್ರಮವಾಗಿ ಪ್ರವೇಶಿಸಿ, ಇಲ್ಲಿ ಹಲವು ವರ್ಷ ತಂಗಿದ್ದ ಬಾಂಗ್ಲಾದೇಶದ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ದೇಶಕ್ಕೆ ವಾಪಸಾಗುತ್ತಿದ್ದಾರೆ.

ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಹಕೀಂಪುರದಲ್ಲಿ ಬಾಂಗ್ಲಾದ ಗಡಿಗೆ ಹೊಂದಿಕೊಂಡಿರುವ ಬಿಎಸ್‌ಎಫ್‌ನ ಗಡಿ ಭದ್ರತಾ ಠಾಣೆಯ ಬಳಿ 'ಅಕ್ರಮ' ವಲಸಿಗರ ಉದ್ದನೆಯ ಸಾಲು ಕಂಡುಬರುತ್ತಿದೆ.

ಸಣ್ಣ ಬಟ್ಟೆ ಚೀಲಗಳನ್ನು ಹಿಡಿದುಕೊಂಡಿರುವ ಮಹಿಳೆಯರು ಮತ್ತು ಪುರುಷರು, ಕೈಯಲ್ಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಹಿಡಿದುಕೊಂಡಿರುವ ಮಕ್ಕಳು ಸರತಿ ಸಾಲಿನಲ್ಲಿ ಕಾಯುತ್ತಾ, ಬಿಎಸ್‌ಎಫ್ ಸಿಬ್ಬಂದಿಯಲ್ಲಿ, 'ನಮ್ಮನ್ನು ಮನೆಗೆ ತೆರಳಲು ಬಿಡಿ' ಎಂದು ಮನವಿ ಮಾಡುತ್ತಿದ್ದಾರೆ.



ಬಾಂಗ್ಲಾದೇಶದ ಪ್ರಜೆಗಳು ಸ್ವದೇಶಕ್ಕೆ ಮರಳಲು ಉತ್ತರ 24 ಪರಗಣ ಜಿಲ್ಲೆಯ ಹಕೀಂಪುರದ ಗಡಿ ಭದ್ರತಾ ಠಾಣೆಯ ಬಳಿ ಕಾಯುತ್ತಿದ್ದ ದೃಶ್ಯ —ಪಿಟಿಐ ಚಿತ್ರ

ಬಂಗಾಳದ ದಕ್ಷಿಣ ಭಾಗದ ಗಡಿ ಪ್ರದೇಶಗಳಲ್ಲಿ ತಮ್ಮ ದೇಶಕ್ಕೆ ಮರಳಲು ಪ್ರಯತ್ನಿಸುತ್ತಿರುವ ಬಾಂಗ್ಲಾದ ಪ್ರಜೆಗಳ ಸಂಖ್ಯೆ ನವೆಂಬರ್ ಅರಂಭದಿಂದ ತೀವ್ರಗತಿಯಲ್ಲಿ ಏರಿಕೆಯಾಗಿದೆ ಎಂದು ಇಲ್ಲಿನ ಭದ್ರತಾ ಸಿಬ್ಬಂದಿ ಮತ್ತು ಸ್ಥಳೀಯ ನಿವಾಸಿಗಳು ಹೇಳುತ್ತಾರೆ.

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೂ ಈ ಬೆಳವಣಿಗೆಗೂ ಸಂಬಂಧವಿದೆ ಎಂಬುದು ಅಧಿಕಾರಿಗಳ ಹೇಳಿಕೆ. ಬಾಂಗ್ಲಾಕ್ಕೆ ವಾಪಸಾಗಲು ಗಡಿ ಭದ್ರತಾ ಠಾಣೆಯ ಬಳಿ ತನ್ನ ಮಗುವಿನೊಂದಿಗೆ ಕಾಯುತ್ತಿದ್ದ ಶಾಹಿನ್ ಬೀಬಿ, 'ನಾನು ಬಾಂಗ್ಲಾದ ಖುಲ್ನಾ ಜಿಲ್ಲೆಯ ನಿವಾಸಿಯಾಗಿದ್ದು, ಅಲ್ಲಿಗೆ ವಾಪಸಾಗಲು ಬಯಸಿದ್ದೇನೆ' ಎಂದರು.

'ನಾವು ಬಡವರಾಗಿದ್ದ ಕಾರಣ ಬಂದಿದ್ದೇವೆ. ಕೋಲ್ಕತ್ತದ ನ್ಯೂಟೌನ್‌ನಲ್ಲಿ ನೆಲಸಿ ಮನೆಕೆಲಸ ಮಾಡಿಕೊಂಡು ತಿಂಗಳಿಗೆ ₹20 ಸಾವಿರ ಸಂಪಾದಿಸುತ್ತಿದ್ದೆ. ನನ್ನ ಬಳಿ ಸೂಕ್ತ ದಾಖಲೆಗಳಿಲ್ಲ. ಆದ್ದರಿಂದ ಈಗ ಖುಲ್ನಾಗೆ ಹಿಂತಿರುಗಲು ಬಯಸುತ್ತೇನೆ' ಎಂದು ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ತಂಗಿದ್ದ ಅವಧಿಯಲ್ಲಿ ಮಧ್ಯವರ್ತಿಗಳ ಮೂಲಕ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಮತದಾರರ ಗುರುತಿನ ಚೀಟಿಗಳನ್ನು ಪಡೆದುಕೊಂಡಿರುವುದಾಗಿ ಸರತಿ ಸಾಲಿನಲ್ಲಿ ನಿಂತಿದ್ದ ಹಲವರು ಒಪ್ಪಿಕೊಂಡಿದ್ದಾರೆ. ಎಸ್‌ಐಆರ್ ವೇಳೆ ಹಳೆಯ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ಆದ್ದರಿಂದ ವಿಚಾರಣೆ ಎದುರಿಸುವುದು, ಬಂಧನಕ್ಕೆ ಒಳಗಾಗುವುದನ್ನು ತಪ್ಪಿಸಲು ಸ್ವದೇಶಕ್ಕೆ ವಾಪಸಾಗಲು ಬಯಸುವುದಾಗಿ ಅವರು ಹೇಳುತ್ತಾರೆ.

### ಅಲ್ ಫಲಾಹ್ ವಿಶ್ವವಿದ್ಯಾಲಯ: 'ವೈಟ್ ಕಾಲರ್ ಭಯೋತ್ಪಾದನೆ' ಪ್ರಕರಣ

## ರಸಗೊಬ್ಬರದ ಹೆಸರಲ್ಲಿ ಸ್ಫೋಟಕ ಸಂಗ್ರಹ

ಶ್ರೀನಗರ (ಪಿಟಿಐ): ದೆಹಲಿ ಸ್ಫೋಟ ಮತ್ತು ಅಲ್ ಫಲಾಹ್ ವಿಶ್ವವಿದ್ಯಾಲಯದ 'ವೈಟ್ ಕಾಲರ್ ಭಯೋತ್ಪಾದನೆ' ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಬಂಧಿಸಿರುವ ಮೂವರು ವೈದ್ಯರ ಕಥೆ ಒಂದಾದರೆ, ಇನ್ನೊಂದೆಡೆ ಇವರಿಗೆ ಮನೆಯನ್ನು ಬಾಡಿಗೆಗೆ ನೀಡಿದ ಹರಿಯಾಣದ ಧರ್ಮ ಬೋಧಕ ಮೌಲ್ವಿ ಇಷ್ತಿಯಾಕ್ ಕಥೆಯೇ ಬೇರೆ.

ಆರೋಪಿಗಳಾದ ಅಲ್-ಫಲಾಹ್ ವಿವಿಯ ಡಾ. ಉಮರ್ ನಬಿ, ಡಾ. ಮುಜಮ್ಮಿಲ್ ಗನಿ ಮತ್ತು ಡಾ. ಶಾಹೀನ್ ಅವರು, ವಿವಿ ಕ್ಯಾಂಪಸ್‌ನ ಹೊರಗೆ ಇರುವ ಮೌಲ್ವಿ ಇಷ್ತಿಯಾಕ್‌ಗೆ ಸೇರಿದ ಮನೆಯಲ್ಲಿ ಬಾಡಿಗೆಗೆ ವಾಸವಿದ್ದರು.

ದೆಹಲಿ ಸ್ಫೋಟದ ನಂತರ ನಡೆದ ಕಾರ್ಯಾಚರಣೆ ವೇಳೆ ಈ ಮನೆಯಿಂದ 2,500 ಕೆ.ಜಿಯಷ್ಟು ಸ್ಫೋಟಕ ಸಾಮಗ್ರಿಗಳನ್ನು ವಶಕ್ಕೆ ಪಡೆಯಲಾಗಿತ್ತು. ಹೀಗಾಗಿ ಆರೋಪಿಗಳ ಜತೆಗೆ ಕಟ್ಟಡ ಮಾಲೀಕ ಮೌಲ್ವಿ ಇಷ್ತಿಯಾಕ್‌ನನ್ನೂ ಪೊಲೀಸರು ಬಂಧಿಸಿದ್ದರು.

ಆದರೆ, 'ಆರೋಪಿಗಳು ಮನೆಯಲ್ಲಿ ರಸಗೊಬ್ಬರ ದಾಸ್ತಾನು ಇಡುವುದಾಗಿ ಹೇಳಿದ್ದರು. ಇದಕ್ಕೆ ಪ್ರತಿಯಾಗಿ ತಿಂಗಳಿಗೆ ಹೆಚ್ಚುವರಿಯಾಗಿ ₹2,500 ಬಾಡಿಗೆ ಕೊಡಲು ಒಪ್ಪಿದ್ದರು. ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದ ನಾನು ಬಾಡಿಗೆ ಆಸೆಯಿಂದ ಒಪ್ಪಿದ್ದೆ' ಎಂದು ಮೌಲ್ವಿ ಇಷ್ತಿಯಾಕ್ ವಿಚಾರಣೆ ವೇಳೆ ಪೊಲೀಸರ ಎದುರು ಹೇಳಿದ್ದಾರೆ.

ಈತನ ಕುಟುಂಬ ಬಡತನ ರೇಖೆಗಿಂತಲೂ ಕೆಳಗಿದ್ದು, ನಾಲ್ಕು ಮಕ್ಕಳ ಕುಟುಂಬವನ್ನು ಸಲಹಲು ಹೆಣಗಾಡುತ್ತಿರುವುದು ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. 'ವೈಟ್‌ಕಾಲರ್ ಭಯೋತ್ಪಾದನೆ' ಪ್ರಕರಣದಲ್ಲಿ ಪೊಲೀಸರು ಇದುವರೆಗೆ ಮೂವರು ವೈದ್ಯರೂ ಸೇರಿದಂತೆ 8 ಆರೋಪಿಗಳನ್ನು ಬಂಧಿಸಿದ್ದಾರೆ.

ಮೌಲ್ವಿ ಇಷ್ತಿಯಾಕ್‌ನನ್ನು ರಾಜ್ಯ ತನಿಖಾ ಸಂಸ್ಥೆಗೆ ಶೀಘ್ರವೇ ಹಸ್ತಾಂತರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

### ಭಯೋತ್ಪಾದನೆಗೆ 2019ರಿಂದಲೇ ಸಿದ್ಧತೆ

ನವದೆಹಲಿ (ಪಿಟಿಐ): ದೆಹಲಿ ಸ್ಫೋಟ ಪ್ರಕರಣದಲ್ಲಿ ಪೊಲೀಸರು ಬಂಧಿಸಿರುವ ಅಲ್-ಫಲಾಹ್ ವಿಶ್ವವಿದ್ಯಾಲಯದ ಡಾ. ಉಮರ್ ನಬಿ, ಡಾ. ಮುಜಮ್ಮಿಲ್ ಗನಿ ಮತ್ತು ಡಾ. ಶಾಹೀನ್ ಅವರು 2019ರಲ್ಲೇ 'ವೈಟ್‌ಕಾಲರ್ ಭಯೋತ್ಪಾದನೆ'ಗೆ ಕಾರ್ಯಯೋಜನೆ ರೂಪಿಸಿದ್ದರು. ತಮ್ಮ ಚಟುವಟಿಕೆಗಳಿಗಾಗಿ ಸಾಮಾಜಿಕ ಜಾಲತಾಣಗಳನ್ನು ಆರೋಪಿಗಳು ಪರಿಣಾಮಕಾರಿಯಾಗಿ ಬಳಸಿಕೊಂಡಿರುವುದು ಪೊಲೀಸರ ವಿಚಾರಣೆ ವೇಳೆ ತಿಳಿದುಬಂದಿದೆ.

ಭಯೋತ್ಪಾದನಾ ಕಾರ್ಯವಿಧಾನದಲ್ಲಿ ಬದಲಾವಣೆ ತಂದು, ಉನ್ನತ ಶಿಕ್ಷಣ ಪಡೆದವರು, ವೃತ್ತಿಪರರನ್ನು ಬಳಸಿಕೊಂಡು ಸಂಪೂರ್ಣ ಡಿಜಿಟಲ್ ವಿಧಾನದ ಮೂಲಕ, ಗಡಿಯಾಚೆಯಿಂದಲೇ ಕಾರ್ಯನಿರ್ವಹಿಸುವ 'ವೈಟ್‌ಕಾಲರ್ ಭಯೋತ್ಪಾದನೆ'ಯ ಹೊಸ ಮಾದರಿಯನ್ನು ಈ ತಂಡ ಹುಟ್ಟುಹಾಕಿತ್ತು. ತನಿಖೆಯ ಮುಂದುವರಿದ ಭಾಗವಾಗಿ ಅಲ್- ಫಲಾಹ್ ವಿಶ್ವವಿದ್ಯಾಲಯದ 'ವೈಟ್‌ಕಾಲರ್ ಭಯೋತ್ಪಾದನೆ'ಗೂ ಪಾಕಿಸ್ತಾನಕ್ಕೂ ಇರುವ ನಂಟಿನ ಬಗ್ಗೆಯೂ ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ವಿಶ್ವವಿದ್ಯಾಲಯದ, ಡಾ. ಉಮರ್ ನಬಿ ಮತ್ತು ತಂಡ ಕಚ್ಚಾ ಬಾಂಬ್ ತಯಾರಿಸುವುದು ಹೇಗೆ ಎನ್ನುವುದರ ಕುರಿತು ಯೂಟ್ಯೂಬ್‌ನಿಂದ ಮಾಹಿತಿ ಪಡೆದುಕೊಂಡಿತ್ತು ಎಂದು ಮೂಲಗಳು ತಿಳಿಸಿವೆ.

# ಭಾರತ ಅಂಧ ವನಿತೆಯರಿಗೆ ವಿಶ್ವಕಪ್ ಗರಿ

**ಕೊಲಂಬೊ (ಪಿಟಿಐ):** ಜೀವನದಲ್ಲಿ ಎದುರಾದ ಎಲ್ಲ ಕಠಿಣ ಸವಾಲುಗಳನ್ನೂ ಮೆಟ್ಟಿ ನಿಂತ ಭಾರತ ಅಂಧ ಮಹಿಳಾ ಕ್ರಿಕೆಟಿಗರು ಭಾನುವಾರ ಚಾರಿತ್ರಿಕ ಸಾಧನೆ ಮಾಡಿದರು. ಇದೇ ಮೊದಲ ಸಲ ನಡೆದ ಅಂಧ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿದರು.

ಕರ್ನಾಟಕದ ದೀಪಿಕಾ ಟಿ.ಸಿ. ಅವರ ನಾಯಕತ್ವದ ಭಾರತ ತಂಡವು ಫೈನಲ್‌ನಲ್ಲಿ ನೇಪಾಳ ವಿರುದ್ಧ 7 ವಿಕೆಟ್‌ಗಳಿಂದ ಜಯಿಸಿತು. ಪಿ. ಸಾರಾ ಒವಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡವು ಬೌಲಿಂಗ್ ಆಯ್ಕೆ ಮಾಡಿಕೊಂಡಿತು.

ಕಿಣಿ..ಕಿಣಿ.. ಸದ್ದು ಮಾಡುತ್ತ ಬಂದ ಚೆಂಡಿನ (ಪ್ಲಾಸ್ಟಿಕ್ ಚೆಂಡಲ್ಲಿ ಲೋಹದ ಗುಂಡುಗಳಿರುತ್ತವೆ) ಜಾಡು ಹಿಡಿದು ಆಡುವ ಈ ಕ್ರಿಕೆಟ್‌ನಲ್ಲಿ ನೇಪಾಳದ ಬ್ಯಾಟರ್‌ಗಳು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 114 ರನ್ ಗಳಿಸಿದರು. ಭಾರತದ ಬೌಲರ್‌ಗಳು ಉತ್ತಮವಾಗಿ ಆಡಿದರು. ಇದರಿಂದಾಗಿ ನೇಪಾಳದ ಇನಿಂಗ್ಸ್‌ನಲ್ಲಿ ಕೇವಲ ಒಂದು ಬೌಂಡರಿ ಮಾತ್ರ ದಾಖಲಾಯಿತು.

ಗುರಿ ಬೆನ್ನಟ್ಟಿದ ಭಾರತ ತಂಡವು 12 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 117 ರನ್ ಗಳಿಸಿ ಜಯಭೇರಿ ಬಾರಿಸಿತು. ತಂಡದ ಪೂಲಾ ಸೊರೆನ್ ಅವರು ಔಟಾಗದೇ 44 ರನ್ ಗಳಿಸಿ ತಂಡದ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು.

ಜಯ ಗಳಿಸಿದ ನಂತರ ಆಟಗಾರ್ತಿಯರ ಸಂಭ್ರಮ ಮುಗಿಲುಮುಟ್ಟಿತು. ನೀಲಿ ಪೋಷಾಕುಗಳಲ್ಲಿದ್ದ ಹುಡುಗಿಯರು ಆನಂದಭಾಷ್ಪ ಸುರಿಸಿದರು. ಪರಸ್ಪರ




ಕೊಲಂಬೊದಲ್ಲಿ ಭಾನುವಾರ ನಡೆದ ಅಂಧ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಗೆದ್ದ ಭಾರತ ವನಿತೆಯರ ತಂಡವು ಟ್ರೋಫಿಯೊಂದಿಗೆ ಸಂಭ್ರಮಿಸಿತು ಎಎಫ್‌ಪಿ ಚಿತ್ರ

ಆಲಂಗಿಸಿಕೊಂಡು ಕುಣಿದಾಡಿದರು. ತ್ರಿವರ್ಣ ಧ್ವಜ ಹಿಡಿದು ಮೈದಾನದಲ್ಲಿ ಓಡಿದರು.

ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ವಿರುದ್ಧ ಜಯಿಸಿತ್ತು. ಶನಿವಾರ ನಡೆದ ಇನ್ನೊಂದು ಸೆಮಿಫೈನಲ್‌ನಲ್ಲಿ ನೇಪಾಳ ತಂಡವು ಪಾಕಿಸ್ತಾನ ಎದುರು ಗೆದ್ದಿತ್ತು.

ಭಾರತ ಮತ್ತು ಶ್ರೀಲಂಕಾ ತಂಡಗಳು ಜಂಟಿ ಆತಿಥ್ಯ ವಹಿಸಿದ್ದವು. ಲಂಕಾ ತಂಡವು ಈ ಟೂರ್ನಿಯಲ್ಲಿ ಪ್ರಾಥಮಿಕ ಸುತ್ತಿನ ಐದು ಪಂದ್ಯಗಳಲ್ಲಿ ಅಮೆರಿಕ ವಿರುದ್ಧ ಮಾತ್ರ ಜಯಿಸಿತ್ತು.

ಟೂರ್ನಿಯಲ್ಲಿ ಒಟ್ಟು ಆರು ತಂಡಗಳು ಸ್ಪರ್ಧಿಸಿದ್ದವು. ಪಾಕಿಸ್ತಾನ ತಂಡದ ಮೆಹರೀನ್ ಅಲಿ (ಬಿ3) ಅವರು ಟೂರ್ನಿಯಲ್ಲಿ ಒಟ್ಟು 600 ರನ್ ಗಳಿಸಿದರು. ಅದರಲ್ಲಿ ಎರಡು ಶತಕಗಳೂ ಇದ್ದವು.

### ಮೂರು ಬಗೆಯ ಅಂಧತ್ವ

- ಬಿ1; ಪೂರ್ಣ ಅಂಧತ್ವ ಇರುವ ಆಟಗಾರ್ತಿಯರು
- ಬಿ2: ಸುಮಾರು 2 ಮೀಟರ್ ದೂರ ನೋಡಬಲ್ಲರು
- ಬಿ3: 6 ರಿಂದ 8 ಮೀಟರ್‌ಗಳವರೆಗೆ ದೃಷ್ಟಿ ಹಾಯಿಸಬಲ್ಲರು.

ನಿಯಮದ ಪ್ರಕಾರ ಈ ಮೂರು ಬಗೆಯ ಆಟಗಾರ್ತಿಯರೂ ತಂಡದಲ್ಲಿರಬೇಕು. ಭಾಗಶಃ ಅಂಧತ್ವ ಇರುವವರು ಪೂರ್ಣ ಅಂಧರಿಗೆ ಸಹಾಯ ಮಾಡುತ್ತ ಪರಸ್ಪರ ತಂಡವಾಗಿ ರೂಪುಗೊಳ್ಳುವ ಬಗ್ಗೆ ಅಪ್ತವಾದುದು. ಅವರಿಗೆ ಅರಿವಿಲ್ಲದೇ ಪರಸ್ಪರ ಉತ್ತಮ ಸ್ನೇಹಿತರಾಗಿ, ಜೀವನ ಮತ್ತು ವ್ಯಕ್ತಿತ್ವವನ್ನು ಕ್ರಿಕೆಟ್ ಮೂಲಕ ಕಟ್ಟಿಕೊಳ್ಳುತ್ತಾರೆ.

## ‘ಹೀಯಾಳಿಸಿದವರಿಗೆ ಉತ್ತರ ಕೊಟ್ಟಿದ್ದೇನೆ’

**ಬೆಂಗಳೂರು:** ‘ಕುರುಡುತನದ ಕಾರಣಕ್ಕಾಗಿ ನಾನು ಅನುಭವಿಸಿದ್ದ ಎಲ್ಲ ಕಷ್ಟಗಳಿಗೆ ಮತ್ತು ನೆರೆಹೊರೆಯವರ ಹೀಯಾಳಿಕೆಗಳಿಗೆ ಇವತ್ತು ಉತ್ತರ ಕೊಟ್ಟಿದ್ದೇನೆ. ಅಂಧತ್ವ ಶಾಪವಲ್ಲ. ಅವಕಾಶ ಸಿಕ್ಕರೆ ನಾವೂ ಸಾಧಿಸಬಲ್ಲೆವು’–



ದೀಪಿಕಾ ಟಿ.ಸಿ.

ಭಾನುವಾರ ಕೊಲಂಬೊದಲ್ಲಿ ಅಂಧ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕಿ ದೀಪಿಕಾ ಟಿ.ಸಿ. (ಬಿ3 ಕೆಟಗರಿ ಆಟಗಾರ್ತಿ) ಅವರ ಭಾವುಕ ಮಾತುಗಳಿವು. ಫೈನಲ್ ನಂತರ ‘ಪ್ರಜಾವಾಣಿ’ಯೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಅವರ ದನಿ ಗದ್ಗದಿತವಾಗಿತ್ತು.

‘ನಮ್ಮದು ತುಮಕೂರು ಜಿಲ್ಲೆಯ ಕರಿತಿಮ್ಮನಹಳ್ಳಿ. ಅಪ್ಪ ಚಿಕ್ಕತಿಮ್ಮಪ್ಪ ಮತ್ತು ಅಮ್ಮ ಚಿತ್ತಮ್ಮ ಕೂಲಿ ಕೆಲಸ ಮಾಡುತ್ತಿದ್ದರು. ನಾನು ಐದು ತಿಂಗಳ ಮಗುವಾಗಿದ್ದಾಗ ಬೆರಳು ಚುಚ್ಚಿಕೊಂಡಿದ್ದರಿಂದ ಬಲಗಣ್ಣಿನ ದೃಷ್ಟಿ ನಂದಿತ್ತು. 10 ವರ್ಷ ವಯಸ್ಸಿನಲ್ಲಿ ಶಸ್ತ್ರ ಚಿಕಿತ್ಸೆ ಮಾಡುವುದಾಗಿ ವೈದ್ಯರು ಹೇಳಿದರು. ಆಗ ಶಸ್ತ್ರ ಚಿಕಿತ್ಸೆ ಮಾಡಿಸಲು ಅಪ್ಪ ಬಹಳಷ್ಟು ಪ್ರಯತ್ನಪಟ್ಟರು. ಸಾಲಮಾಡಿ ಶಸ್ತ್ರ ಚಿಕಿತ್ಸೆ ಮಾಡೋದು ಬೇಡ. ಒಂದು ಕಣ್ಣಿನ ದೃಷ್ಟಿ ಇದೆ. ಅದರಲ್ಲಿಯೇ ಸಾಧನೆ ಮಾಡುವೆ ಎಂದೆ’ ಎಂದು ದೀಪಿಕಾ ವಿವರಿಸಿದರು.

ಮೈಸೂರಿನ ರಂಗರಾವ್ ಪ್ರೌಢಶಾಲೆಗೆ ಸೇರಿದ್ದ ಅವರು, ಅಲ್ಲಿದ್ದ ಕೆಲ ಮಕ್ಕಳು ಅಂಧ ಕ್ರಿಕೆಟ್ ಆಡುತ್ತಿದ್ದಾಗ ಚೆಂಡಿನ ಕಿಣಿ..ಕಿಣಿ.. ಸದ್ದಿಗೆ ಮಾರುಹೋಗಿ ಬ್ಯಾಟ್ ಕೈಗೆತ್ತಿಕೊಂಡರು. ಅವರ ಆಸಕ್ತಿ ಮತ್ತು ಪ್ರತಿಭೆಯನ್ನು ನೋಡಿದ ದೈಹಿಕ ಶಿಕ್ಷಣ ಶಿಕ್ಷಕ ಮೋಹನಕುಮಾರ್ ಮತ್ತು ಹರಿ ಎಂಬುವವರು ಬೆನ್ನು ತಟ್ಟಿದರು. ರಾಜ್ಯ ಟೂರ್ನಿಯಲ್ಲಿ ಆಡಿಸಿದರು. 2019ರಲ್ಲಿ ಕರ್ನಾಟಕ ತಂಡದ ಆಯ್ಕೆ ಪ್ರಕ್ರಿಯೆ ಇತ್ತು. ದೀಪಿಕಾ ಆಯ್ಕೆಯಾದರು. ಪಾಲಕರನ್ನು ಒಪ್ಪಿಸುವಲ್ಲಿ ದೀಪಿಕಾ ಯಶಸ್ವಿಯಾದರು. ಆದರೆ ತಮ್ಮ ಊರಿನಿಂದ ಬೆಂಗಳೂರಿಗೆ ಹೋಗಲು ಅವರ ಬಳಿ ದುಡ್ಡಿರಲಿಲ್ಲ.

‘ಶಾಲೆಯಲ್ಲಿ ನನಗೆ ಹಿರಿಯಣ್ಣನಂತಿದ್ದ ಮೋಹನಕುಮಾರ್ ನೆರವಿಗೆ ನಿಂತರು. ಪ್ರಯಾಣ, ಊಟ, ಬಟ್ಟೆಗೆ ದುಡ್ಡು ನೀಡಿದರು. ಬೆಂಗಳೂರಿಗೆ ಬಂದೆ. ಸಮರ್ಥನಂ ಟ್ರಸ್ಟ್‌ನ ಮಹಾಂತೇಶ್ ಸರ್, ಮ್ಯಾನೇಜರ್ ಶಿಖಾ ಶೆಟ್ಟಿ, ತರಬೇತುದಾರರು ನೆರವು ನೀಡಿದರು’ ಎಂದು ದೀಪಿಕಾ ಹೇಳಿದರು. ‘ಬರ್ಮಿಂಗ್‌ಹ್ಯಾಮ್ ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದ ತಂಡದಲ್ಲಿ ಆಡಿದ್ದೆ. ಅದಕ್ಕಾಗಿ ಮುಂಬೈ ಆದಾಯ ತೆರಿಗೆ ಇಲಾಖೆಯಲ್ಲಿ ನೌಕರಿ ಲಭಿಸಿದೆ’ ಎಂದರು.

### ಆಸ್ಟ್ರೇಲಿಯಾ ಓಪನ್: ಫೈನಲ್‌ನಲ್ಲಿ ನೇರ ಆಟಗಳ ಜಯ

# ಪ್ರಶಸ್ತಿ ಬರ ನೀಗಿಸಿದ ಲಕ್ಷ್ಯ ಸೇನ್

**ಸಿಡ್ನಿ (ಪಿಟಿಐ):** ಜಪಾನ್‌ನ ಯುಶಿ ತನಾಕ ಅವರನ್ನು ಫೈನಲ್‌ನಲ್ಲಿ ನೇರ ಆಟಗಳಿಂದ ಸೋಲಿಸಿದ ಭಾರತದ ಲಕ್ಷ್ಯ ಸೇನ್ ಅವರು ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾನುವಾರ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಆ ಮೂಲಕ ಈ ವರ್ಷ ಅವರು ಪ್ರಶಸ್ತಿ ಬರವನ್ನು ನೀಗಿಸಿಕೊಂಡರು.

ಉತ್ತರಾಖಂಡದ ಅಲ್ಮೋರಾದವರಾದ ಸೇನ್ 21–15, 21–11 ರಿಂದ 26 ವರ್ಷ ವಯಸ್ಸಿನ ತನಾಕ ಅವರನ್ನು ಹಿಮ್ಮೆಟ್ಟಿಸಿದರು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಲಕ್ಷ್ಯ ಸೇನ್ ನಂತರ ಪ್ರಶಸ್ತಿ ಬರ ಎದುರಿಸಿದ್ದರು.

38 ನಿಮಿಷಗಳ ಫೈನಲ್ ಗೆದ್ದ ನಂತರ, 24 ವರ್ಷ ವಯಸ್ಸಿನ ಆಟಗಾರ ಬೆರಳುಗಳಿಂದ ಕಿವಿಯನ್ನು ಮುಚ್ಚಿ ಸಂಭ್ರಮ ಆಚರಿಸಿದರು.

14ನೇ ಕ್ರಮಾಂಕದ ಲಕ್ಷ್ಯ, ಪಂದ್ಯದ ಹೆಚ್ಚಿನ ಅವಧಿಯಲ್ಲಿ ಹೊಡೆತಗಳಲ್ಲಿ ನಿಯಂತ್ರಣ ಸಾಧಿಸಿದರು. ಅವರ ಪ್ಲೇಸ್‌ಮೆಂಟ್‌ಗಳು ಕರಾರುವಾಕ್ ಆಗಿದ್ದು, ಒಂದೂ ಗೇಮ್ ಬಿಟ್ಟುಕೊಡಲಿಲ್ಲ.

‘ಈ ಋತುವಿನಲ್ಲಿ ಸಾಕಷ್ಟು ಏಳು ಬೀಳುಗಳನ್ನು ಕಂಡಿದ್ದೆ. ವರುಷದ ಆರಂಭದಲ್ಲಿ ಗಾಯದ ಸಮಸ್ಯೆಗಳೂ




ಲಕ್ಷ್ಯ ಸೇನ್ ಆಟದ ವೈಖರಿ ಎಎಫ್‌ಪಿ ಚಿತ್ರ

ಎದುರಾದವು. ಆದರೆ ನಾನು ಪರಿಶ್ರಮ ಹಾಕಿದೆ. ಪ್ರಶಸ್ತಿಯೊಡನೆ ವರ್ಷ ಮುಗಿಸುತ್ತಿರುವುದು ಸಂತಸ ಮೂಡಿಸಿದೆ’ ಎಂದು ₹4.25 ಕೋಟಿ ಬಹುಮಾನ ಮೊತ್ತದ ಟೂರ್ನಿ ಗೆದ್ದ ನಂತರ ಸೇನ್ ಪ್ರತಿಕ್ರಿಯಿಸಿದರು.

‘ಈ ಯಶಸ್ಸಿನಿಂದ ರೋಮಾಂಚನವಾಗಿದ್ದು, ಮುಂದಿನ ಋತು ಎದುರು ನೋಡುತ್ತಿದ್ದೇನೆ. ಇಂದು ಮತ್ತು ಈ ವಾರ ಆಡಿದ ರೀತಿಯಿಂದ ಖುಷಿಯಾಗಿದೆ’ ಎಂದೂ ಹೇಳಿದರು.

2021ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತರಾದ ಸೇನ್, ಈ ಹಿಂದೆ 2024ರ ಸೈಯದ್ ಮೋದಿ ಅಂತರರಾಷ್ಟ್ರೀಯ ಟೂರ್ನಿಯಲ್ಲಿ (ಸೂಪರ್ 300 ಮಟ್ಟದ್ದು) ಕೊನೆಯ ಸಲ ಪ್ರಶಸ್ತಿ ಗೆದ್ದಿದ್ದರು. ಸೆಪ್ಟೆಂಬರ್‌ನಲ್ಲಿ ಅವರು ಹಾಂಗ್‌ಕಾಂಗ್ ಸೂಪರ್ 500 ಟೂರ್ನಿಯಲ್ಲಿ ಫೈನಲ್ ತಲುಪಿದ್ದರೂ, ಪ್ರಶಸ್ತಿ ಎಟುಕಿರಲಿಲ್ಲ.

ವಿಶ್ವ ಕ್ರಮಾಂಕದಲ್ಲಿ 26ನೇ ಸ್ಥಾನದಲ್ಲಿರುವ ತನಾಕ ಈ ವರ್ಷ ಎರಡು ಸೂಪರ್ 300 ಮಟ್ಟದ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿದ್ದರು.

ಲಕ್ಷ್ಯ ಅವರು ಈ ವರ್ಷ ಬಿಡಬ್ಲ್ಯುಎಫ್ ಟೂರ್‌ನಲ್ಲಿ ಪ್ರಶಸ್ತಿ ಗೆದ್ದ ಎರಡನೇ ಆಟಗಾರ ಎನಿಸಿದರು. ಕನ್ನಡಿಗ ಆಯುಷ್ ಶೆಟ್ಟಿ ಈ ವರ್ಷದ ಆರಂಭದಲ್ಲಿ ಅಮೆರಿಕ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದರು.

## ಹಿಮಾಚಲ ಎದುರು ರಾಜ್ಯ ತಂಡ ಮೇಲುಗೈ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಡಗೈ ಮಧ್ಯಮ ವೇಗಿ ವೈಭವ್ ಶರ್ಮಾ (37ಕ್ಕೆ4) ಅವರ ಪರಿಣಾಮಕಾರಿ ಬೌಲಿಂಗ್ ಎದುರಿಸುವಲ್ಲಿ ತಡವರಿಸಿದ ಹಿಮಾಚಲ ಪ್ರದೇಶ ತಂಡವು ಕೂಚ್ ಬಿಹಾರ್ ಟ್ರೋಫಿ ಪಂದ್ಯದಲ್ಲಿ ಕರ್ನಾಟಕ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ 162 ರನ್‌ಗಳಿಗೆ ಆಲೌಟ್ ಆಯಿತು.

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊದಲ ದಿನವಾದ ಭಾನುವಾರ ಟಾಸ್ ಗೆದ್ದ ಆತಿಥೇಯರು ಬೌಲಿಂಗ್ ಆಯ್ಕೆ ಮಾಡಿಕೊಂಡರು. ಯೋಜನೆಗೆ ತಕ್ಕಂತೆ ದಾಳಿ ನಡೆಸಿ, ಎದುರಾಳಿ ತಂಡವನ್ನು 68.5 ಓವರ್‌ಗಳಲ್ಲಿ ಕಟ್ಟಿಹಾಕಿದರು. ಈಸಾ ಪುತ್ತಿಗೆ (26ಕ್ಕೆ2), ಅಕ್ಷತ್ ಪ್ರಭಾಕರ್ (40ಕ್ಕೆ2) ಹಾಗೂ ರತನ್ ಬಿ.ಆರ್. (2ಕ್ಕೆ29) ಅವರು ವೈಭವ್‌ಗೆ ಉತ್ತಮ ಸಾಥ್ ನೀಡಿದರು.

ಮಧ್ಯಮ ಕ್ರಮಾಂಕದ ಆಟಗಾರ ಅಕ್ಷಯ್ ಪಿ. ವಸಿಷ್ಠ (49; 90 ಎ) ಹಾಗೂ ಬಾಲಂಗೋಚಿ ಲಕ್ಷ್ಯ ಕುಮಾರ್ (ಔಟಾಗದೇ 30) ಹೊರತುಪಡಿಸಿದರೆ, ಉಳಿದವರ್‍ಯಾರೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ.

ಬಳಿಕ, ಇನಿಂಗ್ಸ್ ಆರಂಭಿಸಿರುವ ಕರ್ನಾಟಕ ತಂಡವು 15 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 36 ರನ್ ಗಳಿಸಿದೆ. ಮೊದಲ ಇನಿಂಗ್ಸ್ ಬಾಕಿ ಚುಕ್ತಾ ಮಾಡಲು ಇನ್ನೂ 126 ರನ್ ಬೇಕಿದ್ದು, ಆದೇಶ್ ಡಿ. ಅರಸ್ (ಔಟಾಗದೇ 15) ಹಾಗೂ ಧ್ರುವ್ ಕೃಷ್ಣನ್ (ಔಟಾಗದೇ 17) ಕ್ರೀಸ್‌ನಲ್ಲಿದ್ದಾರೆ.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಹಿಮಾಚಲ ಪ್ರದೇಶ: 68.5 ಓವರ್‌ಗಳಲ್ಲಿ 162 (ಅಕ್ಷಯ್ ಪಿ. ವಸಿಷ್ಠ 49, ಲಕ್ಷ್ಯ ಕುಮಾರ್ ಔಟಾಗದೇ 30, ವೈಭವ್ ಶರ್ಮಾ 37ಕ್ಕೆ4). ಕರ್ನಾಟಕ: 15 ಓವರ್‌ಗಳಲ್ಲಿ 1 ವಿಕೆಟ್‌ಗೆ 36 (ಆದೇಶ್ ಡಿ. ಅರಸ್ ಔಟಾಗದೇ 15, ಧ್ರುವ್ ಕೃಷ್ಣನ್ ಔಟಾಗದೇ 17, ಶಿವಾನ್ಶ್ ಕೆ. 13ಕ್ಕೆ1).

## ಮಂದಾನ–ಪಲಾಶ್ ವಿವಾಹ ಮುಂದೂಡಿಕೆ

**ಸಾಂಗ್ಲಿ (ಮಹಾರಾಷ್ಟ್ರ):** ಭಾರತ ಮಹಿಳಾ ಕ್ರಿಕೆಟ್ ತಂಡದ ತಾರಾ ಬ್ಯಾಟರ್ ಸ್ಮೃತಿ ಮಂದಾನ ಹಾಗೂ ಸಂಗೀತಗಾರ ಪಲಾಶ್ ಮುಚ್ಛಲ್ ಅವರ ವಿವಾಹ ಮುಂದೂಡಿಕೆಯಾಗಿದೆ. ಮಂದಾನ ಅವರ ತಂದೆ ಶ್ರೀನಿವಾಸ್ ಅವರಿಗೆ ಎದೆನೋವು ಕಾಣಿಸಿಕೊಂಡಿದ್ದರಿಂದ, ಭಾನುವಾರ ನಡೆಯಬೇಕಿದ್ದ ವಿವಾಹ ಸಮಾರಂಭ ರದ್ದಾಗಿದೆ.

‘ಮಂದಾನ ಅವರು ತಂದೆಯವರು ಚೇತರಿಸಿಕೊಳ್ಳುವವರೆಗೆ ಮದುವೆ ಆಗದಿರಲು ನಿರ್ಧರಿಸಿದ್ದಾರೆ’ ಎಂದು ಮಂದಾನ ಅವರ ಮ್ಯಾನೇಜರ್ ತುಹೀನ್ ಮಿಶ್ರಾ ಹೇಳಿದ್ದಾರೆ.

‘ಶ್ರೀನಿವಾಸ್ ಅವರಿಗೆ ಎಡಭಾಗದಲ್ಲಿ ಎದೆನೋವು (ಆ್ಯಂಜಿನಾ) ಕಾಣಿಸಿಕೊಂಡಿದೆ. ಅವರ ಹೃದಯದಲ್ಲಿ ಕಿಣ್ವಗಳು ಹೆಚ್ಚಿರುವುದು (ಕಾರ್ಡಿಯಾಕ್ ಎಂಝೈಮ್ಸ್) ಇಸಿಜಿ ಹಾಗೂ ಇತರ ಪರೀಕ್ಷೆಗಳಲ್ಲಿ ಪತ್ತೆಯಾಗಿದೆ. ಹೀಗಾಗಿ ಅವರನ್ನು ನಿಗಾದಲ್ಲಿ ಇಡಲಾಗಿದ್ದು, ಅಗತ್ಯಬಿದ್ದರೆ ‘ಆ್ಯಂಜಿಯೊಗ್ರಫಿ’ ಚಿಕಿತ್ಸೆ ನೀಡಲಾಗುವುದು’ ಎಂದು ವೈದ್ಯರು ಪಿಟಿಐಗೆ ತಿಳಿಸಿದ್ದಾರೆ.

# ಟೆಸ್ಟ್: ಸೆನುರನ್ ಸಹನೆಯ ಶತಕ

### ಭಾರತದ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದ ಮುತ್ತುಸಾಮಿ– ಯಾನ್ಸೆನ್ ಜೋಡಿ

• ಮಧು ಜವಳಿ

**ಗುವಾಹಟಿ:** ಶನಿವಾರ ಟೆಸ್ಟ್ ಕ್ರಿಕೆಟ್ ಮಾದರಿಯ ಸೊಬಗು ಉಣಬಡಿಸಿದ್ದ ಪಿಚ್ ಭಾನುವಾರ ಮತ್ತಷ್ಟು ಹದಗೊಂಡಿತು. ಬ್ಯಾಟರ್‌ಗಳು ಇದರ ಭರಪೂರ ಲಾಭ ಪಡೆದು ಚೆಂದದ ಆಟವಾಡಿದರು.

ಅಸ್ಸಾಂ ಕ್ರಿಕೆಟ್ ಸಂಸ್ಥೆ (ಎಸಿಎ) ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಟೆಸ್ಟ್ ಪಂದ್ಯದ ಮೊದಲ ದಿನ ತುಸು ಮೇಲುಗೈ ಸಾಧಿಸಿದ್ದ ಭಾರತದ ಬೌಲರ್‌ಗಳು ಎರಡನೇ ದಿನದಾಟದಲ್ಲಿ ಮಂಕಾದರು. ಐದು ಗಂಟೆಗಳಲ್ಲಿ 70 ಓವರ್‌ಗಳನ್ನು ಆಡಿದ ಪ್ರವಾಸಿ ತಂಡದ ಕೆಳಕ್ರಮಾಂಕದ ಬ್ಯಾಟರ್‌ಗಳು 243 ರನ್‌ಗಳನ್ನು ಗಳಿಸಿದರು. ಅದರಲ್ಲೂ ಮೊದಲ ದಿನದಾಟದ ಅಂತ್ಯಕ್ಕೆ (6ಕ್ಕೆ247) ಕ್ರೀಸ್‌ನಲ್ಲಿ ಉಳಿದಿದ್ದ ಸೆನುರನ್ ಮುತ್ತುಸಾಮಿ (109; 206ಎ, 4X10, 6X2) ಶತಕ ಸಂಭ್ರಮ ಆಚರಿಸಿದರು. ಮಾರ್ಕೊ ಯಾನ್ಸೆನ್ (93; 91ಎ, 4X6, 7X6) ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ದಾಖಲಿಸುವ ಅವಕಾಶವನ್ನು ಅಲ್ಪ ಅಂತರದಲ್ಲಿ ಕಳೆದುಕೊಂಡರು. ಆದರೆ ಇಬ್ಬರೂ ಸೇರಿ ಆತಿಥೇಯರ ಹಿಡಿತದಿಂದ ಇನಿಂಗ್ಸ್ ಅನ್ನು ದೂರ ಸೆಳೆದೊಯ್ದರು. ತಂಡವು 151.1 ಓವರ್‌ಗಳಲ್ಲಿ 489 ರನ್‌ಗಳಿಗೆ ಆಲೌಟ್ ಆಯಿತು.

ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಭಾರತ ತಂಡವು ಮಂದಬೆಳಕಿನ ಕಾರಣ ದಿನದಾಟ ಸ್ಥಗಿತಗೊಂಡಾಗ ವಿಕೆಟ್ ನಷ್ಟವಿಲ್ಲದೇ 9 ರನ್ ಗಳಿಸಿತ್ತು. ಯಶಸ್ವಿ ಜೈಸ್ವಾಲ್ (ಔಟಾಗದೇ 7) ಮತ್ತು ಕೆ.ಎಲ್. ರಾಹುಲ್ (ಔಟಾಗದೇ 2) ಕ್ರೀಸ್‌ನಲ್ಲಿದ್ದಾರೆ.

ಸೆನುರನ್ ಅವರು ದಕ್ಷಿಣ ಆಫ್ರಿಕಾದ ದೇಶಿ ಕ್ರಿಕೆಟ್‌ನಲ್ಲಿ 5 ಸಾವಿರ ರನ್ ಗಳಿಸಿರುವ ಅನುಭವಿ. ಇಲ್ಲಿ ಉತ್ಕೃಷ್ಟ ದರ್ಜೆಯ ಶತಕ ದಾಖಲಿಸಿದರು. ಕೈಲ್ ವೆರಿಯನ್ ಜೊತೆಗೆ ಅವರು 88 ರನ್ ಸೇರಿಸಿದರು. ಇದರಿಂದಾಗಿ ದಿನದ ಮೊದಲ ಅವಧಿಯಲ್ಲಿ ಭಾರತಕ್ಕೆ ಒಂದೂ ವಿಕೆಟ್ ಲಭಿಸಲಿಲ್ಲ. ವೆರಿಯನ್ (45 ರನ್) ಔಟಾದ ಮೇಲೆ ಕ್ರೀಸ್‌ಗೆ ಬಂದ ಮಾರ್ಕೊ ಬೀಸಾಟ ಆರಂಭಿಸಿದರು.

6.7 ಅಡಿ ಎತ್ತರದ ಮಾರ್ಕೊ ಸತತ ಬೌಂಡರಿಗಳನ್ನು ಬಾರಿಸುವ ಮೂಲಕ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. 9ನೇ ಕ್ರಮಾಂಕದ ಬ್ಯಾಟರ್ ಮಾರ್ಕೊ ಅವರು ಉತ್ತಮ ಎಸೆತಗಳಿಗೆ ರಕ್ಷಣಾತ್ಮಕ ಉತ್ತರ ನೀಡಿ, ಅವಕಾಶ ಸಿಕ್ಕಾಗ ಸಿಕ್ಸರ್ ಎತ್ತಿದರು. ಇವರಿಬ್ಬರೂ ಎಂಟನೇ ವಿಕೆಟ್ ಜೊತೆಯಾಟದಲ್ಲಿ 97 ರನ್ (107ಎಸೆತ) ಸೇರಿಸಿದ್ದು ಭಾರತ ತಂಡದ ತಲೆನೋವು ಹೆಚ್ಚಿಸಿತು. ಅನುಭವಿ ಸ್ಪಿನ್ನರ್ ರವೀಂದ್ರ ಜಡೇಜ (94ಕ್ಕೆ2) ಮತ್ತು ಕುಲದೀಪ್ ಯಾದವ್ (115ಕ್ಕೆ4) ಅವರಿಬ್ಬರನ್ನೂ ಮಾರ್ಕೊ ಬಹಳಷ್ಟು ದಂಡಿಸಿದರು. ಕೊನೆಗೂ ಅವರನ್ನು ಬೌಲ್ಡ್ ಮಾಡಿದ ಕುಲದೀಪ್ ಮುಯ್ಯಿ ತೀರಿಸಿಕೊಂಡರು.

ಒಂದು ಓವರ್ ಮುಗಿದ 60 ಸೆಕೆಂಡುಗಳ ಒಳಗೆ ಇನ್ನೊಬ್ಬ ಬೌಲರ್ ಓವರ್ ಆರಂಭಿಸಬೇಕು. ಆದರೆ ಈ ನಿಯಮದ ಉಲ್ಲಂಘನೆಗೆ ಕುಲದೀಪ್ ಅವರಿಗೆ ಅಂಪೈರ್ ಎರಡು ಬಾರಿ ಎಚ್ಚರಿಕೆ ನೀಡಿದರು. ಹಂಗಾಮಿ ನಾಯಕ ರಿಷಭ್ ಪಂತ್ ಅವರ ಅತಿಯಾದ ಸಲಹೆ, ಸೂಚನೆ ಫಲವಾಗಿ ಕುಲದೀಪ್ ವಿಳಂಬ ಮಾಡುತ್ತಿದ್ದರು. ಒಂದು ವೇಳೆ ಮೂರನೇ ಎಚ್ಚರಿಕೆ ಪಡೆದಿದ್ದರೆ ತಂಡಕ್ಕೆ 5 ರನ್‌ಗಳ ದಂಡ ವಿಧಿಸಲಾಗುತ್ತಿತ್ತು.




ದಕ್ಷಿಣ ಆಫ್ರಿಕಾ ತಂಡದ ಸೆನುರನ್ ಮುತ್ತುಸಾಮಿ ಶತಕ ಸಂಭ್ರಮ ಆಚರಿಸಿದರು (ಎಡ) ಮಾರ್ಕೊ ಯಾನ್ಸೆನ್ ಬ್ಯಾಟಿಂಗ್ ವೈಖರಿ ಎಎಫ್‌ಪಿ ಚಿತ್ರಗಳು

### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 489 (151.1 ಓವರ್‌ಗಳಲ್ಲಿ) (ಶನಿವಾರ ದಿನದಾಟದ ಅಂತ್ಯಕ್ಕೆ 6ಕ್ಕೆ247)**

ಸೆನುರನ್ ಮುತ್ತುಸ್ವಾಮಿ ಸಿ ಜೈಸ್ವಾಲ್ ಬಿ ಸಿರಾಜ್ 109 (206ಎ, 4x10, 6x2)
ಕೈಲ್ ವೆರೆಯೆನ್ ಸ್ಟಂಪ್ ಪಂತ್ ಬಿ ಜಡೇಜ 45 (122ಎ, 4x5)
ಯಾನ್ಸನ್ ಬಿ ಕುಲದೀಪ್ 93 (91ಎ, 4x6, 6x7)
ಸಿಮೊನ್ ಹಾರ್ಮರ್ ಬಿ ಬೂಮ್ರಾ 5 (17ಎ)
ಕೇಶವ ಮಹಾರಾಜ್ ಔಟಾಗದೇ 12 (31ಎ, 4x1)
**ಇತರೆ:** 21 (ಬೈ 8, ಲೆಗ್‌ಬೈ 8, ನೋಬಾಲ್ 4, ವೈಡ್ 1)
**ವಿಕೆಟ್ ಪತನ:** 7–334 (ಕೈಲ್ ವೆರೆಯನ್, 120.3), 8–431 (ಸೆನುರನ್ ಮುತ್ತುಸ್ವಾಮಿ, 138.1), 9–462 (ಸಿಮೊನ್ ಹಾರ್ಮರ್, 143.1), 10–489 (ಮಾರ್ಕೊ ಯಾನ್ಸನ್, 151.1)
**ಬೌಲಿಂಗ್:** ಜಸ್‌ಪ್ರೀತ್ ಬೂಮ್ರಾ 32–10–75–2, ಮೊಹಮ್ಮದ್ ಸಿರಾಜ್ 30–5–106–2, ನಿತೀಶ್ ಕುಮಾರ್ ರೆಡ್ಡಿ 6–0–25–0, ವಾಷಿಂಗ್ಟನ್ ಸುಂದರ್ 26–5–58–0, ಕುಲದೀಪ್ ಯಾದವ್ 29.1–4–115–4, ರವೀಂದ್ರ ಜಡೇಜ 28–2–94–2

**ಭಾರತ: ವಿಕೆಟ್‌ನಷ್ಟವಿಲ್ಲದೆ 9 (6.1 ಓವರ್‌ಗಳಲ್ಲಿ)**

ಯಶಸ್ವಿ ಜೈಸ್ವಾಲ್ ಔಟಾಗದೇ 7 (23ಎ, 4x1)
ಕೆ.ಎಲ್. ರಾಹುಲ್ ಔಟಾಗದೇ 2 (14ಎ)
**ಬೌಲಿಂಗ್:** ಮಾರ್ಕೊ ಯಾನ್ಸನ್ 3.1–1–9–0, ವಿಯಾನ್ ಮಲ್ದರ್ 3–3–0–0.

### ದಕ್ಷಿಣ ಆಫ್ರಿಕಾ ವಿರುದ್ಧ ಬೂಮ್ರಾ, ಸಿರಾಜ್‌ಗೆ ವಿಶ್ರಾಂತಿ

# ಏಕದಿನ ಸರಣಿ: ರಾಹುಲ್‌ಗೆ ಸಾರಥ್ಯ

**ನವದೆಹಲಿ (ಪಿಟಿಐ):** ಅನುಭವಿ ಬ್ಯಾಟರ್, ಕರ್ನಾಟಕದ ಕೆ.ಎಲ್. ರಾಹುಲ್ ಅವರು ದಕ್ಷಿಣ ಆಫ್ರಿಕಾ ವಿರುದ್ಧ ಮುಂಬರುವ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತ ತಂಡದ ನಾಯಕತ್ವ ವಹಿಸಲಿದ್ದಾರೆ. ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಎಂಟು ತಿಂಗಳ ನಂತರ ಏಕದಿನ ತಂಡಕ್ಕೆ ಮರಳಿದ್ದಾರೆ.

ಕತ್ತಿನ ಸ್ನಾಯುನೋವಿನಿಂದಾಗಿ ನಾಯಕ ಶುಭಮನ್ ಗಿಲ್ ಅವರು ಸರಣಿಗೆ ಅಲಭ್ಯರಾದ ಕಾರಣ ರಾಹುಲ್ ಅವರಿಗೆ ಸಾರಥ್ಯ ವಹಿಸಲಾಗಿದೆ. ದಕ್ಷಿಣ ಆಫ್ರಿಕಾ ವಿರುದ್ಧ ಕೋಲ್ಕತ್ತದಲ್ಲಿ ಮೊದಲ ಟೆಸ್ಟ್ ಪಂದ್ಯದ ವೇಳೆ ಅವರಿಗೆ ಕತ್ತು ನೋವು ಕಾಣಿಸಿಕೊಂಡಿತ್ತು.

‘ರಾಹುಲ್ ಅವರಿಗೆ ಈ ಸರಣಿಗೆ ಸೀಮಿತಗೊಳಿಸಿ ನಾಯಕತ್ವ ನೀಡಲಾಗಿದೆ. ಪಂತ್ ಅವರು ಕಳೆದೊಂದು ವರ್ಷದಲ್ಲಿ ಒಂದು ಏಕದಿನ ಪಂದ್ಯ ಮಾತ್ರ ಆಡಿದ್ದಾರೆ. ಶುಭಮನ್ ಗಿಲ್ ಅವರ ಕತ್ತು ನೋವು ಗುಣವಾಗಲಿದ್ದು, ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳ ಸರಣಿಗೆ (2026ರ ಜನವರಿಯಲ್ಲಿ) ಅವರು ಮರಳುವ ನಿರೀಕ್ಷೆಯಲ್ಲಿ ಆಯ್ಕೆಗಾರರಿದ್ದಾರೆ’ ಎಂದು ಬಿಸಿಸಿಐ ಮೂಲವೊಂದು ಪಿಟಿಐಗೆ ತಿಳಿಸಿದೆ.

ಜಡೇಜ ಅವರು ನ್ಯೂಜಿಲೆಂಡ್ ವಿರುದ್ಧ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಿದ ನಂತರ ಏಕದಿನ ತಂಡದಲ್ಲಿ ಆಡಿರಲಿಲ್ಲ. ಅಕ್ಷರ್ ಪಟೇಲ್ ಅವರಿಗೆ ವಿಶ್ರಾಂತಿ ನೀಡಿರುವ ಕಾರಣ ಜಡೇಜ ಹಾದಿ ಸುಗಮವಾಗಿದೆ.

ಸ್ಪಿನ್ ಆಲ್‌ರೌಂಡರ್ ಅಕ್ಷರ್ ಪಟೇಲ್ ಜೊತೆ ವೇಗದ ಬೌಲರ್‌ಗಳಾದ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರಿಗೂ ವಿಶ್ರಾಂತಿ ನೀಡಲಾಗಿದೆ.

ಕುಲದೀಪ್ ಯಾದವ್ ಮತ್ತು ವಾಷಿಂಗ್ಟನ್ ಸುಂದರ್ ಅವರು ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಯಶಸ್ವಿ ಜೈಸ್ವಾಲ್ ಅವರು ಈ ಹಿಂದೆ ಒಂದು ಏಕದಿನ ಪಂದ್ಯ ಮಾತ್ರ ಆಡಿದ್ದಾರೆ.

ಆಸ್ಟ್ರೇಲಿಯಾ ವಿರುದ್ಧ ಏಕದಿನ ಸರಣಿ ಆಡಿದ್ದ ಅನುಭವಿಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರೂ ತಂಡದಲ್ಲಿದ್ದಾರೆ.

**ಗಾಯಕವಾಡಗೆ ಅವಕಾಶ:** ದಕ್ಷಿಣ ಆಫ್ರಿಕಾ ಎ ವಿರುದ್ಧ ಈಚಿನ ಏಕದಿನ ಸರಣಿಯಲ್ಲಿ ಭಾರತ ಎ ತಂಡದ ಪರ ಸ್ಫೂರ್ತಿಯುತವಾಗಿ ಆಡಿದ್ದ ಋತುರಾಜ್ ಗಾಯಕವಾಡ ಅವರೂ ಅವಕಾಶ




ಕೆ.ಎಲ್.ರಾಹುಲ್

**ಏಕದಿನ ಸರಣಿ ವೇಳಾಪಟ್ಟಿ**

| | | |
|---|---|---|
| ಮೊದಲ ಪಂದ್ಯ | ನವೆಂಬರ್ 30 | ರಾಂಚಿ |
| ಎರಡನೇ ಪಂದ್ಯ | ಡಿಸೆಂಬರ್ 3 | ರಾಯಪುರ |
| ಮೂರನೇ ಪಂದ್ಯ | ಡಿಸೆಂಬರ್ 6 | ವಿಶಾಖಪಟ್ಟಣ |

ಪಡೆದಿದ್ದಾರೆ. ಅವರು ಮೂರು ಪಂದ್ಯಗಳಲ್ಲಿ ಕ್ರಮವಾಗಿ 117, ಅಜೇಯ 68 ಮತ್ತು 25 ರನ್ ಬಾರಿಸಿದ್ದರು.

ಉಪನಾಯಕ ಶ್ರೇಯಸ್ ಅಯ್ಯರ್ ಅವರು ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಕಾರಣ ಗಾಯಕವಾಡ ಅವಕಾಶ ಪಡೆದಿದ್ದಾರೆ. ಅವರು ಇದುವರೆಗೆ ಆರು ಏಕದಿನ ಪಂದ್ಯಗಳಲ್ಲಿ ಆಡಿದ್ದು, 2023ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಗೆಬ್ಬೆರಾದಲ್ಲಿ ಕೊನೆಯ ಬಾರಿ ಆಡಿದ್ದರು.

**ತಂಡ ಇಂತಿದೆ:** ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ತಿಲಕ್ ವರ್ಮಾ, ಕೆ.ಎಲ್.ರಾಹುಲ್ (ನಾಯಕ), ರಿಷಭ್ ಪಂತ್, ವಾಷಿಂಗ್ಟನ್ ಸುಂದರ್, ರವೀಂದ್ರ ಜಡೇಜ, ಕುಲದೀಪ್ ಯಾದವ್, ನಿತೀಶ್ ಕುಮಾರ್ ರೆಡ್ಡಿ, ಹರ್ಷಿತ್ ರಾಣಾ, ಋತುರಾಜ್ ಗಾಯಕವಾಡ, ಪ್ರಸಿದ್ಧ ಕೃಷ್ಣ, ಅರ್ಷದೀಪ್ ಸಿಂಗ್ ಮತ್ತು ಧ್ರುವ್ ಜುರೇಲ್.

# ಟಿ.ಟಿ: ಸಂಜಯ್, ಸಹನಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಧಾರವಾಡ:** ಬೆಂಗಳೂರಿನ ಸಂಜಯ್ ಮಾಧವನ್, ಸಹನಾ ಎಚ್.ಮೂರ್ತಿ ಅವರು ಭಾನುವಾರ ಮುಕ್ತಾಯವಾದ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ, ಮಹಿಳಾ ವಿಭಾಗದ ಸಿಂಗಲ್‌ನಲ್ಲಿ ಪ್ರಶಸ್ತಿ ಗೆದ್ದರು.

ಕಾಸ್ಮೋಸ್ ಕ್ಲಬ್ ಆಯೋಜಿಸಿದ್ದ ಟೂರ್ನಿಯ ಪುರುಷರ ವಿಭಾಗದ ಫೈನಲ್‌ನಲ್ಲಿ ಸಂಜಯ್ 11-4, 11-9, 6-11, 11-6, 11-9 ರಿಂದ ಬೆಂಗಳೂರಿನ ಯಶವಂತ್ ಪಿ., ಅವರನ್ನು ಸೋಲಿಸಿದರು.

ಮಹಿಳಾ ವಿಭಾಗದ ಫೈನಲ್‌ನಲ್ಲಿ ಸಹನಾ ಮೂರ್ತಿ 4-11, 4-11, 12-10, 11-6, 11-6, 5-11, 11-4ರಿಂದ ಬೆಂಗಳೂರಿನ ವೇದಲಕ್ಷ್ಮಿ ಡಿ.ಕೆ., ಅವರನ್ನು ಸೋಲಿಸಿದರು.

19 ವರ್ಷದೊಳಗಿನ ಬಾಲಕರ ವಿಭಾಗದ ಸಿಂಗಲ್ಸ್‌ನಲ್ಲಿ ಬೆಂಗಳೂರಿನ ವರುಣ್ ಬಿ.ಕಶ್ಯಪ್ ಪ್ರಶಸ್ತಿ ಗೆದ್ದರು. ಫೈನಲ್‌ನಲ್ಲಿ ವರುಣ್ 11-9, 7-11, 11-8, 11-5, 16-14 ರಿಂದ ಬೆಂಗಳೂರಿನ ಅರ್ಣವ್ ಎನ್., ಅವರನ್ನು ಸೋಲಿಸಿದರು.




(ಎಡದಿಂದ) ಪ್ರಶಸ್ತಿಯೊಂದಿಗೆ ವರುಣ್ ಬಿ.ಕಶ್ಯಪ್, ಸಹನಾ ಎಚ್‌ಮೂರ್ತಿ ಹಾಗೂ ಸಂಜಯ್ ಮಾಧವನ್

## ಅಜ್ಲನ್ ಶಾ ಕಪ್ ಹಾಕಿ: ಭಾರತಕ್ಕೆ ಜಯ

**ಇಪೊ, ಮಲೇಷ್ಯಾ (ಪಿಟಿಐ):** ಮೊಹಮ್ಮದ್ ರಾಹಿಲ್ (15ನೇ ನಿ.) ಅವರು ಮೊದಲ ಕ್ವಾರ್ಟರ್‌ನಲ್ಲಿ ಗಳಿಸಿದ ನಿರ್ಣಾಯಕ ಗೋಲಿನ ನೆರವಿನಿಂದ ಭಾರತ ತಂಡ ಭಾನುವಾರ ಆರಂಭಗೊಂಡ 31ನೇ ಆವೃತ್ತಿಯ ಸುಲ್ತಾನ್ ಅಜ್ಲನ್ ಶಾ ಕಪ್ ಹಾಕಿ ಟೂರ್ನಿಯಲ್ಲಿ ಕೊರಿಯಾ ತಂಡವನ್ನು ಮಣಿಸಿತು.

ಮಳೆಯ ಅಡಚಣೆಯಿಂದಾಗಿ ಪಂದ್ಯವು ಆರು ತಾಸು ವಿಳಂಬವಾಗಿ ಆರಂಭಗೊಂಡಿತ್ತು. ಆದರೂ, ಛಲ ಬಿಡದೆ ಆಡಿದ ಭಾರತ ತಂಡವು ಬಲಿಷ್ಠ ಕೊರಿಯಾ ತಂಡವನ್ನು ಸೋಲಿಸಿ, ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

2019ರಲ್ಲಿ ಭಾರತ ತಂಡವು ರನ್ನರ್ಸ್ ಅಪ್ ಆಗಿತ್ತು. ಅದರ ನಂತರ ಇದೇ ಮೊದಲ ಬಾರಿಗೆ ತಂಡವು ಟೂರ್ನಿಯಲ್ಲಿ ಕಣಕ್ಕಿಳಿದಿದೆ.

### ಚೆಸ್ ವಿಶ್ವಕಪ್: ಸೆಮಿಫೈನಲ್‌ನಲ್ಲಿ ಸೋತ ಯಾಕುಬೊಯೇವ್, ಇಸಿಪೆಂಕೊ

# ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದ ಸಿಂದರೋವ್, ವೀ

**ಪಣಜಿ (ಪಿಟಿಐ):** ಉಜ್ಬೇಕಿಸ್ತಾನದ ಗ್ರ್ಯಾಂಡ್‌ಮಾಸ್ಟರ್ ಜಾವೋಖಿರ್ ಸಿಂದರೋವ್ ಮತ್ತು ಚೀನಾದ ಗ್ರ್ಯಾಂಡ್‌ಮಾಸ್ಟರ್ ವೀ ಯಿ ಅವರು ತಮ್ಮ ಎದುರಾಳಿಗಳನ್ನು ಟೈಬ್ರೇಕರ್‌ನಲ್ಲಿ ಸೋಲಿಸಿ ಫಿಡೆ ಚೆಸ್ ವಿಶ್ವಕಪ್ ಟೂರ್ನಿಯ ಫೈನಲ್ ತಲುಪಿದರು. ಆ ಹಾದಿಯಲ್ಲಿ ಮುಂದಿನ ವರ್ಷದ ಕ್ಯಾಂಡಿಡೇಟ್ಸ್ ಟೂರ್ನಿಗೆ ಸ್ಥಾನ ಕಾದಿರಿಸಿದರು.

ಈ ಟೂರ್ನಿಯಿಂದ ಮೂವರು, ಸೈಪ್ರಸ್‌ನಲ್ಲಿ ನಡೆಯಲಿರುವ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆಯುತ್ತಾರೆ. ಮೂರು ಮತ್ತು ನಾಲ್ಕನೇ ಸ್ಥಾನಕ್ಕಾಗಿ ನೊದಿರ್ಬೆಕ್ ಯಾಕುಬೊಯೇವ್ ಮತ್ತು ಆ್ಯಂಡ್ರಿ ಇಸಿಪೆಂಕೊ ಆಡಲಿದ್ದು, ಈ ಪಂದ್ಯದ ವಿಜೇತರೂ ಅರ್ಹತೆ ಪಡೆಯುತ್ತಾರೆ.

ಸೋಮವಾರ ಫೈನಲ್ ಪಂದ್ಯದ ಮೊದಲ ಕ್ಲಾಸಿಕಲ್ ಆಟ ನಡೆಯಲಿದೆ.




ನೊದಿರ್ಬೆಕ್ ಯಾಕುಬೊಯೇವ್ (ಎಡ) ಜಾವೊಖಿರ್ ಸಿಂದರೋವ್ ಫಿಡೆ ಚಿತ್ರ

ಜಾವೊಖಿರ್ ಸಿಂದರೋವ್ ಅವರು ಸೆಮಿಫೈನಲ್‌ನಲ್ಲಿ ಸ್ವದೇಶದ ಯಾಕುಬೊಯೇವ್ ಅವರನ್ನು 2.5–1.5 ರಿಂದ ಸೋಲಿಸಿದರು. ಇವರಿಬ್ಬರ ನಡುವಣ ಎರಡೂ ಕ್ಲಾಸಿಕಲ್ ಆಟಗಳು ಡ್ರಾ ಆಗಿದ್ದವು. ಭಾನುವಾರ ಕಾಲಮಿತಿಯ ಮೊದಲ ಟೈಬ್ರೇಕರಿನಲ್ಲಿ (ರ‍್ಯಾಪಿಡ್) ಸಿಂದರೋವ್ ಕಪ್ಪುಕಾಯಿಗಳಲ್ಲಿ ಆಡಿ 47 ನಡೆಗಳಲ್ಲಿ ಜಯಗಳಿಸಿದರು. ಮರು ಆಟದಲ್ಲಿ ಯಾಕುಬೊಯೇವ್ ಶ್ರಮ ಹಾಕಿದರೂ ಆಟ 54 ನಡೆಗಳಲ್ಲಿ ಡ್ರಾ ಆಗಿದ್ದರಿಂದ ಸಿಂದರೋವ್ ಫೈನಲ್ ತಲುಪಿದರು.

ಎರಡನೇ ಸೆಮಿಫೈನಲ್‌ನಲ್ಲಿ, ಕಣದಲ್ಲಿ ಉಳಿದಿರುವ ಅತ್ಯಧಿಕ ರ‍್ಯಾಂಕಿನ ಆಟಗಾರ ವೀ ಯಿ 2.5–1.5 ರಿಂದ ರಷ್ಯಾದ ಇಸಿಪೆಂಕೊ ಅವರನ್ನು ಮಣಿಸಿದರು. ಮೊದಲ ಟೈಬ್ರೇಕರ್ ಆಟ ಡ್ರಾ ಆಯಿತು, ಎರಡನೇ ಆಟದಲ್ಲಿ ಚೀನಾದ ಆಟಗಾರ ಬಿಳಿ ಕಾಯಿಗಳಲ್ಲಿ ಆಡಿ 57 ನಡೆಗಳಲ್ಲಿ ಜಯಗಳಿಸಿದರು.

‘ಇದು ನನ್ನ ಚೆಸ್ ಜೀವನದಲ್ಲಿ ಅತಿ ದೊಡ್ಡ ಸಾಧನೆ. ನನಗೆ ಸಂಸತವಾಗಿದೆ. ಫಲಿತಾಂಶದ ಬಗ್ಗೆ ತಲೆಕೆಡಿಸಿಕೊಳ್ಳದೇ ಉತ್ತಮ ಆಟ ಆಡುವತ್ತ ಗಮನಹರಿಸಿದ್ದೆ’ ಎಂದು ವೀ ಯಿ ಪ್ರತಿಕ್ರಿಯಿಸಿದರು.

### ಮಲೆನಾಡು ಅಲ್ಟ್ರಾ ಟ್ರೇಲ್ ರನ್: 100 ಕಿ.ಮೀ.ನಲ್ಲಿ ಸುಭಾಷ್ ಗುರಿ ಮುಟ್ಟಿದ ಮೊದಲಿಗ

# ವಿಶಾಲ್ ಮಿಂಚಿನ ಓಟ; ಪದಕ ಸಂಭ್ರಮ

ಪ್ರಜಾವಾಣಿ ವಾರ್ತೆ

**ಚಿಕ್ಕಮಗಳೂರು:** ಪ್ರತಿ ಗಂಟೆಗೆ ಸರಿಸುಮಾರು 10 ಕಿಲೊಮೀಟರ್ ವೇಗದಲ್ಲಿ ಓಡಿದ ದೇಶದ ಪ್ರಮುಖ ಟ್ರೇಲ್ ಅಲ್ಟ್ರಾ ಓಟಗಾರ ವಿಶಾಲ್ ವಳವಿ 9 ತಾಸು 59 ನಿಮಿಷ 28 ಸೆಕೆಂಡುಗಳಲ್ಲಿ ಗುರಿ ಮುಟ್ಟಿದಾಗ ಫಿನಿಶಿಂಗ್ ಪಾಯಿಂಟ್‌ನಲ್ಲಿ ಕುತೂಹಲದಿಂದ ಕಾಯುತ್ತಿದ್ದವರು ಸಂಭ್ರಮದ ಸ್ವಾಗತ ಕೋರಿದರು.

ಬೆಂಗಳೂರಿನ ಜಿರಿಮ್ ಸಂಸ್ಥೆ, ಚಿಕ್ಕಮಗಳೂರು ಗಾಲ್ಫ್ ಕ್ಲಬ್ ಮತ್ತು ಅಮೆರಿಕದ ಟೆಕಿಯಾನ್ ಸಂಸ್ಥೆಯ ಸಹಯೋಗದಲ್ಲಿ ಇಲ್ಲಿನ ಮಲ್ಲಂದೂರಿನಲ್ಲಿ ಆಯೋಜಿಸಿದ್ದ ಮಲೆನಾಡು ಅಲ್ಟ್ರಾ ಟ್ರೇಲ್ ರೇಸ್‌ನ 100 ಕಿ.ಮೀ. ಓಟವನ್ನು ನಿಗದಿತ ಅವಧಿಗಿಂತ ಮೊದಲೇ ಮುಕ್ತಾಯಗೊಳಿಸಿದ ವಳವಿ ಜೀವಮಾನದ ಶ್ರೇಷ್ಠ ಸಾಧನೆಯೊಂದಿಗೆ ನಗೆ ಸೂಸಿದರು.

ಮಲ್ಲಂದೂರಿನ ನವಗ್ರಾಮ ಕ್ರಿಕೆಟ್ ಮೈದಾನದಲ್ಲಿ ಶನಿವಾರ ಬೆಳಿಗ್ಗೆ 6.30ಕ್ಕೆ 100 ಕಿ.ಮೀ. ಓಟಕ್ಕೆ ಚಾಲನೆ ನೀಡಲಾಗಿತ್ತು. ಭಾನುವಾರ ಮುಂಜಾನೆ 3.30ರೊಳಗೆ ಗುರಿ ಮುಟ್ಟಿದವರಿಗೆ ಪದಕದ ಗೌರವ ಇತ್ತು. ಆದರೆ ವಿಶಾಲ್ ಸಂಜೆ 4 ಗಂಟೆ 29 ನಿ. 28 ಸೆ.ಗಳಲ್ಲಿ ಗುರಿ ಸೇರಿದರು. ಸುಭಾಷ್ ಫೌಜ್‌ದಾರ್ 13 ತಾಸುಗಳಲ್ಲಿ ಗುರಿ ಮುಟ್ಟಿದರು. 7 ಗಂಟೆ 18 ನಿ.



ಪದಕದೊಂದಿಗೆ ವಿಶಾಲ್ ವಳವಿ ಸಂಭ್ರಮಿಸಿದರು

58 ಸೆ. ಆದಾಗ ಅವರು ಓಟ ಮುಗಿಸಿದರು. ಕಳೆದ ಬಾರಿಯ ಎಸ್‌ಆರ್‌ಟಿ ಅಲ್ಟ್ರಾದಲ್ಲಿ ವಿಶಾಲ್ 12ತಾಸು 16 ನಿಮಿಷ 21 ಸೆಕೆಂಡುಗಳಲ್ಲಿ 100 ಕಿ.ಮೀ. ಓಟ ಪೂರ್ತಿಗೊಳಿಸಿದ್ದರು. ಕಳೆದ ವರ್ಷದ ಸೊಲಾಂಗ್ ಸ್ಕೈ ಅಲ್ಟ್ರಾದಲ್ಲಿ 100 ಕಿ.ಮೀ. ಓಟಕ್ಕೆ ಅವರು 20 ತಾಸು ತೆಗೆದುಕೊಂಡಿದ್ದರು.

ಸುಭಾಷ್ ಫೌಜ್‌ದಾರ್‌ಗೆ ಭಾರಿ ಸವಾಲೊಡ್ಡಿದ ಮಣಿಕಂಠನ್ 7 ಗಂಟೆ 47 ನಿಮಿಷಕ್ಕೆ ಗುರಿ ತಲುಪಿದರು. ಗಿಲಿಸ್ ಪೆಟಿಟ್, ರಾಮರಾಜು ಡಿ., ನಿತಿನ್ ಸಾರಂಗ್, ಪಾರ್ಥ್ ಜೋಶಿ, ಸುದೀಪ್ತೊ ರಾಯ್‌ಚೌಧರಿ, ನವೀನ್ ಕುಮಾರ್ ಮತ್ತು ತಂಗದೊರೈ ದುರೈಸಾಮಿ ಅಗ್ರ 10 ಮಂದಿಯ ಪಟ್ಟಿಯಲ್ಲಿ ಸ್ಥಾನ ಪಡೆದರು.

ಬೆಳಿಗ್ಗೆ 7 ಗಂಟೆಗೆ ಆರಂಭವಾದ 50 ಕಿ.ಮೀ. ಓಟದಲ್ಲಿ ಗುರಿ ಮುಟ್ಟಲು ಸಂಜೆ 5 ಗಂಟೆ ನಿಗದಿಗೊಳಿಸಲಾಗಿತ್ತು. ಬೆಂಗಳೂರಿನ ಸಂಜಯ್ ನೇಗಿ 4 ಗಂಟೆ 53 ನಿಮಿಷ, 9 ಸೆಕೆಂಡು ಬಾರಿಸಿದಾಗ ಫಿನಿಶಿಂಗ್ ಪಾಯಿಂಟ್ ದಾಟಿದರು. ಪ್ರಜ್ವಲ್ ಎಸ್.ವೈ 4 ಗಂಟೆ 55 ನಿಮಿಷಗಳಾದಾಗ ಗುರಿ ಮುಟ್ಟಿದರು. ಫ್ರಾಂಕ್ ಮೆಲಾಂಡ್, ಜಿನೇಶ್ ಪಿಳ್ಳೈ, ಜ್ಯಾಕ್ ಫೋರ್ಡ್, ನಿರಾದ್ ಬೋಸ್, ಮಾರುತಿ ಗಾಯಕವಾಡ್, ಹೇಳಿ ಆ್ಯಂಡರ್ಸನ್, ಸಿದ್ಧಾರ್ಥ್ ಕನ್ವಾಲ್ ಮತ್ತು ಶುಭ್ರ ಕಾಂತಿ ದಾಸ್ ಪ್ರಮುಖ 10ರಲ್ಲಿ ಸ್ಥಾನ ಗಳಿಸಿದರು.

30 ಕಿ.ಮೀ. ಓಟದಲ್ಲಿ ರಾಘವ್ ಉಪಾಸನಿ, ಕೇಶವ್ ಶರ್ಮಾ, ಪ್ರಶಾಂತ್ ಸರ್ವಪಳ್ಳಿ, ದೀಪಕ್ ರಾಮ್‌ಜಿ, ಬಾಬು ಶೀನಪ್ಪ, ಸಾಗರ ವಾಲಿಶೆಟ್ಟಿ, ಕುಲಜೀತ್ ಸಿಂಗ್, ನಿತಿನ್ ಪಾಟೀಲ್, ಮದನ್ ರೆಡ್ಡಿ ಮತ್ತು ರಂಜಿತ್ ರಾಯ್ ಮೊದಲು ಗುರಿ ಮುಟ್ಟಿದ 10 ಓಟಗಾರರು.